
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜನವರಿ 12, 2011 ರೂ. 12/-


ಬುದ್ಧಮಾರ್ಗದ ಎರಡು ಮಹಾ ಕಾವ್ಯಗಳು

ಕೋಟ್ಯಂತರ ಕೈಬದಲು



ನೀರಾ ರಾಡಿಯಲ್ಲಿ ಪೇಜಾವರ

ಬಿನಾಯಕ್ ಸೇನ್ ಪ್ರಜಾತಂತ್ರಕ್ಕೆ ಮರಣದಂಡನೆ



ಮೈಸೂರು ಯಡ್ಡಿ ಶಿಷ್ಯ ಸಿದ್ದು ಹಾವಳಿ



ಸಾಮರಸ್ಯ ಉಳೀಬೇಕಾದ್ರೆ ಬಿಜೆಪಿ ತೊಲಗಬೇಕು: ಮಹೇಂದ್ರ ಕುಮಾರ್




ವೇಶ್ಯೆಯರ ಜೊತೆಗೆ ಸಿಕ್ಕಿಬಿದ್ದ ರಘುವೀರ್



ಉಪ್ಪಿಯ ಸೂಪರ್ ವಿಕೃತಿ

ಶಿವಸುಂದರ್

ಚಾರ್ವಾಕ



ಪ್ರಜಾತಂತ್ರಕ್ಕೆ ಮರಣದಂಡನೆ

ಡಾ. ಬಿನಾಯಕ್ ಸೇನ್‌ಗೆ ಜೀವಾವಧಿ!

ಈ ದೇಶದಲ್ಲಿರುವ ಪ್ರಜಾಸತ್ತೆ ಪ್ರಜಾತಂತ್ರದ ಮುಸುಕು ಹೊದ್ದಿರುವ ನಿರಂಕುಶತ್ವವೇ ಎಂಬುದು ಮತ್ತೊಮ್ಮೆ ರುಜುವಾತಾಗಿದೆ. ಡಾ. ಬಿನಾಯಕ್ ಸೇನ್‌ರಂತಹ ಅತ್ಯಂತ ಜನಪರ ಮತ್ತು ಜನಪ್ರಿಯ ಡಾಕ್ಟರಿಗೂ ಈ ದೇಶದ ನ್ಯಾಯಾಲಯವೊಂದು ಅವರು ಮಾಡದ ತಪ್ಪಿಗೆ ಜೀವಾವಧಿಯಂತಹ ಘೋರ ಶಿಕ್ಷೆಯನ್ನು ವಿಧಿಸುತ್ತದೆ ಎಂದರೆ ಈ ದೇಶದ ಪ್ರಜಾತಂತ್ರ ಮತ್ತು ನ್ಯಾಯಾಂಗ ಯಾವ ಪಾತಾಳವನ್ನು ಮುಟ್ಟಿದೆ ಎಂಬುದು ಅರ್ಥವಾಗುತ್ತದೆ. ಡಾ. ಬಿನಾಯಕ್ ಸೇನ್ ಮಾಡಿದ ಯಾವ ಕೆಲಸ ಈ ಪ್ರಜಾತಂತ್ರದಲ್ಲಿ ಜೀವಾವಧಿ ಶಿಕ್ಷೆಯನ್ನು ಆಹ್ವಾನಿಸುವಂತ ಅಪರಾಧವಾಯಿತು ಎಂಬುದನ್ನು ನೋಡಿದರೆ ಈ ದೇಶದ ಕಾನೂನುಗಳ ನಿಜವಾದ ಹೂರಣ ಬಯಲಿಗೆ ಬೀಳುತ್ತದೆ.

ಡಾ. ಬಿನಾಯಕ್ ಸೇನರು ವೆಲ್ಲೂರು ಮೆಡಿಕಲ್ ಕಾಲೇಜಿನಿಂದ ವೈದ್ಯ ಪದವಿಯನ್ನು ಪಡೆಯುವ ಮುನ್ನವೇ ಶಂಕರ್ ಗುಹಾ ನಿಯೋಗಿಯವರ ಹೋರಾಟದ ಮತ್ತು ಸೇವೆಯ ಬದುಕಿನಿಂದ ಪ್ರಭಾವಿತರಾಗಿದ್ದರು. ಆದ್ದರಿಂದಲೇ ವೈದ್ಯ ಪದವಿಯಲ್ಲಿ ಅತ್ಯಂತ ಉನ್ನತ ಶ್ರೇಣಿಯಲ್ಲಿ ಪಾಸಾದರೂ ತಮ್ಮ ಜ್ಞಾನವನ್ನು ಆಸ್ತಿ ಮಾಡಲು ಬಳಸದೇ ಅತ್ಯಂತ ಶೋಷಿತ ಮತ್ತು ನಿರ್ಲಕ್ಷಿತ ಜನಸಮುದಾಯಗಳಿಗೆ ಬಳಸಲು ತೀರ್ಮಾನಿಸಿದರು. ಜ್ಞಾನವಂತರೆಲ್ಲಾ ಆಸ್ತಿವಂತರಾಗಲು ಇಲ್ಲಸಲ್ಲದ ಮಾರ್ಗವನ್ನು ಬಳಸುತ್ತಿರುವಾಗ ಈ ಪ್ರತಿಭಾನ್ವಿತ ವೈದ್ಯ ಈ ಸಮಾಜದ ಉಳ್ಳವರ ಬದುಕಿನ ಈ ಸ್ವಾರ್ಥಸಂಹಿತೆಯನ್ನು ಉಲ್ಲಂಘಿಸಿದ್ದೇ ಅವರು ಮಾಡಿದ ಘನಘೋರ ಅಪರಾಧ. ಏಕೆಂದರೆ ಬಿನಾಯಕ್ ಸೇನ್‌ರ ಈ ಸರಳ ಬದುಕೇ ಅವರು ಮಾವೋವಾದಿಗಳ ಸ್ನೇಹಿತನೇ ಇರಬೇಕೆಂದು ಅನುಮಾನ ಪಡಲು ಸರ್ಕಾರಕ್ಕೆ ಸಿಕ್ಕ ಬಲು ದೊಡ್ಡ ಪುರಾವೆಯಾಯಿತು! ನಿಸ್ವಾರ್ಥ ಮತ್ತು ಪ್ರಾಮಾಣಿಕತೆಗಳು ಶಿಕ್ಷಾರ್ಹ ಅಪರಾಧವಾಗುವ ವ್ಯವಸ್ಥೆಯನ್ನು ಪ್ರಜಾತಂತ್ರ ಎಂದು ಕರೆಯಬಹುದೇ?

ಡಾ.ಬಿನಾಯಕ್ ಸೇನ್ ಛತ್ತೀಸ್‌ಘಡದ ಆದಿವಾಸಿಗಳ ಮಧ್ಯೆ ತಮ್ಮ ಶುಶ್ರೂಷಾ ಕೇಂದ್ರವನ್ನು ತೆರೆದು ಆರೋಗ್ಯ ಸೇವೆ ಪ್ರಾರಂಭಿಸಿದ ಅಲ್ಪಾವಧಿಯಲ್ಲಿ ಆದಿವಾಸಿಗಳ ಅನಾರೋಗ್ಯಕ್ಕಿರುವ ಸಾಮಾಜಿಕ ಕಾರಣಗಳನ್ನು ಅರಿತುಕೊಂಡರು. ಅಪೌಷ್ಟಿಕತೆ, ರಕ್ತಹೀನತೆ, ಕೇವಲ ಆರೋಗ್ಯದ ಸಮಸ್ಯೆಯಲ್ಲ, ಬಡತನವೆಂಬ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯೇ ಅವರ ಕಾಯಿಲೆಗಳಿಗೆ ಕಾರಣವಾಗುತ್ತಿರುವ ಮೂಲ ಸಮಸ್ಯೆಗಳು ಎಂದು ಅರ್ಥಮಾಡಿಕೊಳ್ಳಲು ಈ ಹೃದಯವಂತ ವೈದ್ಯನಿಗೆ ಹೆಚ್ಚು ಸಮಯವೇನೂ ಬೇಕಾಗಲಿಲ್ಲ ಹಾಗೂ ಛತ್ತೀಸ್‌ಘಡದಲ್ಲಿ ಆದಿವಾಸಿಗಳ ಬಡತನಕ್ಕೆ ಪ್ರಮುಖ ಕಾರಣ ಸರ್ಕಾರದ ಅರಣ್ಯನೀತಿಗಳು ಎಂಬುದನ್ನು ಅರ್ಥಮಾಡಿಕೊಂಡ ಬಿನಾಯಕ್ ಸೇನ್ ಆದಿವಾಸಿಗಳ ನಾಗರಿಕ ಹಕ್ಕನ್ನು ಕಾಪಾಡಲು ಪಿಯುಸಿಎಲ್ ಸಂಸ್ಥೆಯನ್ನು ಸೇರಿಕೊಂಡರು. ಅಪಾರ ಖನಿಜ ಸಂಪನ್ಮೂಲವನ್ನು ಹೊಂದಿರುವ ಆ ಪ್ರದೇಶವನ್ನು ಬೃಹತ್ ಬಹುರಾಷ್ಟ್ರೀಯ ಕಂಪನಿಗಳ ವಶಮಾಡಲು ಸರ್ಕಾರವು ಆದಿವಾಸಿಗಳನ್ನು ಅಲ್ಲಿಂದ ಎತ್ತಂಗಡಿ ಮಾಡಲು ಪ್ರಯತ್ನಿಸಿದಾಗ ಬಿನಾಯಕ್ ಸೇನ್ ಹಲವಾರು ಸಂಘ ಸಂಸ್ಥೆಗಳೊಡನೆ ಸೇರಿ ಹೋರಾಟ ರೂಪಿಸಿದರು. ಅದರಲ್ಲೂ ಆದಿವಾಸಿಗಳನ್ನು ಕೊಂದು ಹಾಕಲು ಮತ್ತು ಬಲವಂತವಾಗಿ ಹೊರಹಾಕಲು ಸರ್ಕಾರ ಸಾಲ್ವಾ ಜುಡುಂ ಎಂಬ ಕಾನೂನುಬಾಹಿರ ಸೇನೆಯನ್ನೇ ರಚಿಸಿ ತನ್ನ ಜನರ ಮೇಲೆ ಯುದ್ಧ ಶುರು ಮಾಡಿದಾಗ ಸರ್ಕಾರದ ಸಾಲ್ವಾ ಜುಡುಂ ಸಂಚನ್ನು ಬಯಲುಗೊಳಿಸಿದವರಲ್ಲಿ ಬಿನಾಯಕ್ ಸೇನರೇ ಮೊದಲಿಗರು. ಬಡವರ ಅನಾರೋಗ್ಯಕ್ಕೆ ಬಡತನವೇ ಪ್ರಧಾನ ಶತ್ರು. ಆದ್ದರಿಂದ ವೈದ್ಯನೊಬ್ಬನ ಹೋರಾಟ ಕೇವಲ ಬಡವರ ಕಾಯಿಲೆಯ ವಿರುದ್ಧ ಮಾತ್ರವಿದ್ದರೆ ಸಾಲದು, ಆ ಕಾಯಿಲೆಗಳ ಮೂಲಕಾರಣಗಳ ವಿರುದ್ಧವೂ ಇರಬೇಕೆಂದೇ ಪ್ರಪಂಚದ ಇತಿಹಾಸದಲ್ಲಿ ಡಾ. ಚೆ ಗುವಾರ, ಡಾ. ನಾರ್ಮನ್ ಬೆಥೂನ್, ಡಾ. ಕೊಟ್ನೀಸ್ ಇನ್ನಿತರರು ದುಡಿದು, ಹೋರಾಡಿ ಮಡಿದಿದ್ದಾರೆ. ಡಾ. ಬಿನಾಯಕ್ ಸೇನ್ ಸಹ ಅದೇ ಸಾಲಿನಲ್ಲಿ ಸೇರುವ ಜನರ ಹಾಗೂ ಸಮಾಜದ ವೈದ್ಯರು. ಬಿನಾಯಕ್ ಸೇನ್ ತಾವು ವೈದ್ಯ ವೃತ್ತಿಯಲ್ಲಿ ತೆಗೆದುಕೊಂಡ ಪ್ರಮಾಣವನ್ನು ಅಕ್ಷರಶಃ ಅನುಸರಿಸಲು ಯತ್ನಿಸುವ ಪ್ರಕ್ರಿಯೆಯಲ್ಲೇ ನಾಗರಿಕ ಹಕ್ಕುಗಳ ಹೋರಾಟಗಾರರೂ ಆದರು. ತಾವು ಮಾಡುತ್ತಿದ್ದ ವೈದ್ಯ ವೃತ್ತಿಗೆ ಆದಿವಾಸಿಗಳ ಸಾಮಾಜಿಕ ಮತ್ತು ಆರ್ಥಿಕ ಹಕ್ಕಿಗಾಗಿ ನಡೆಸುತ್ತಿದ್ದ ಹೋರಾಟಗಳು ಪೂರಕ ಮತ್ತು ಅದರ ಅವಿಭಾಜ್ಯ ಅಂಗವೆಂದೇ ಅವರು ಭಾವಿಸಿದ್ದರು. ಇದು ಪ್ರಾಯಶಃ ಪ್ರಭುತ್ವದ ಕಣ್ಣಲ್ಲಿ ಅವರು ಮಾಡಿದ ಎರಡನೇ ಅಪರಾಧವಾಗಿತ್ತು!

ನಿಸ್ವಾರ್ಥವಾಗಿ ಜೀವಿಸಿದ್ದು ಮತ್ತು ಆದಿವಾಸಿಗಳ ಪರವಾಗಿ ಹಾಗು ನಿಜವಾದ ಪ್ರಜಾಪ್ರಭುತ್ವಕ್ಕಾಗಿ ಧ್ವನಿ ಎತ್ತಿದ್ದ ಡಾ. ಬಿನಾಯಕ್ ಸೇನ್‌ರನ್ನು ಈ ಕಾರ್ಪೊರೇಟ್ ಪ್ರಭುತ್ವ ಸಹಿಸಲು ಸಾಧ್ಯವೇ ಇರಲಿಲ್ಲ. ಆದಿವಾಸಿಗಳ ಪರವಾಗಿ ಶಸ್ತ್ರಧರಿಸಿ ಹೋರಾಡುತ್ತಿರುವ ನಕ್ಸಲರ ಮೇಲೆ ಸುಲಭವಾಗಿ 'ಪ್ರಭುತ್ವದ ವಿರುದ್ಧ ಯುದ್ಧ ಹೂಡಿರುವ ಅಪರಾಧ' ಹೊರಿಸಿ ಕೊಲ್ಲುವುದು ಅಥವಾ ಸೆರೆಗೆ ದೂಡುವುದನ್ನು ಅಭ್ಯಾಸ ಮಾಡಿಕೊಂಡಿರುವ ಸರ್ಕಾರಕ್ಕೆ ಈ ನಿರಾಯುಧ ಯೋಧನನ್ನು ಬಲಿ ಹಾಕುವುದು ಹೇಗೆ ಎಂಬುದು ತಲೆನೋವಾಗಿತ್ತು.

ಆ ಸಂದರ್ಭದಲ್ಲಿಯೇ ಜೈಲಿನಲ್ಲಿದ್ದ ಮಾವೋವಾದಿ ನಾಯಕನನ್ನು ಅವರ ಕುಟುಂಬದ ಮನವಿಯ ಮೇರೆಗೆ ಡಾ. ಬಿನಾಯಕ್ ಸೇನ್ ಆರೋಗ್ಯ ಸಂಬಂಧಿ ವಿಚಾರಗಳಲ್ಲಿ ಪದೇಪದೇ ಭೇಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿತು. ಅದನ್ನೇ ಬಳಸಿಕೊಂಡು 2007ರ ಮೇ ತಿಂಗಳಲ್ಲಿ ಬಿನಾಯಕ್ ಸೇನ್ ಇಲ್ಲದಿರುವಾಗ ಅವರ ಮನೆಯನ್ನು ಪೊಲೀಸರು ರೇಡ್ ಮಾಡಿದರು. ಅವರ ಮನೆಯಲ್ಲಿದ್ದ ಕಂಪ್ಯೂಟರ್, ಅವರ ಸಾಹಿತ್ಯ ಮೆಡಿಕಲ್ ಪುಸ್ತಕಗಳು ಎಲ್ಲವನ್ನು ವಶಪಡಿಸಿಕೊಂಡರು. ಮಾತ್ರವಲ್ಲದೆ, ಆಗ ಡಾ. ಬಿನಾಯಕ್ ಸೇನ್ ಬಳಿ ಜೈಲಿನಲ್ಲಿದ್ದ ಮಾವೋವಾದಿ ನಾಯಕ ನಾರಾಯಣ ಸನ್ಯಾಲ್ ತನ್ನ ಪಕ್ಷದ ಇತರ ಸದಸ್ಯರಿಗೆ ತಲುಪಿಸಲು ನೀಡಲಾಗಿದ್ದ ಪತ್ರವೊಂದು ಸಿಕ್ಕಿತೆಂದೂ, ಡಾ. ಸೇನ್ ಈ ರೀತಿ ಬಹಿಷ್ಕೃತ ಮಾವೋವಾದಿ ಸಂಘಟನೆಯ ಕುರಿಯರ್ ಆಗಿ ಕೆಲಸ ಮಾಡುತ್ತಿದ್ದಾರೆಂದೂ, ಇದು ಛತ್ತೀಸ್‌ಘಡ್ ವಿಶೇಷ ಸಾರ್ವಜನಿಕ ಭದ್ರತಾ ಕಾಯಿದೆ ಮತ್ತು ಅನ್‌ಲಾಫುಲ್ ಆಕ್ಟಿವಿಟೀಸ್ ಪ್ರಿವೆನ್ಷನ್ ಆಕ್ಟ್ ಅಡಿ ಶಿಕ್ಷಾರ್ಹ ಅಪರಾಧವೆಂದೂ ಆರೋಪ ಹೊರಿಸಿ 2007ರ ಮೇ 14ರಂದು ಬಂಧಿಸಿದರು.



ಡಾ. ಸೇನ್‌ರ ಬಂಧನದ ಸುದ್ದಿ ಇಡೀ ದೇಶವನ್ನೇ ಮಾತ್ರವಲ್ಲದೆ ಜಗತ್ತಿನಾದ್ಯಂತ ಹರಡಿಕೊಂಡಿರುವ ಅವರ ಅಭಿಮಾನಿಗಳನ್ನು, ಪ್ರಜಾತಂತ್ರವಾದಿಗಳನ್ನು ಬೆಚ್ಚಿಬೀಳಿಸಿತು. ಛತ್ತೀಸ್‌ಘಡ್ ಕೋರ್ಟುಗಳು ಅವರಿಗೆ ಜಾಮೀನು ಕೊಡಲೂ ಸಹ ನಿರಾಕರಿಸಿದವು. ಸುಪ್ರೀಂ ಕೋರ್ಟು ಸಹ ಪ್ರಾರಂಭದಲ್ಲಿ ಅವರಿಗೆ ಬೇಲ್ ನಿರಾಕರಿಸಿತು. ಆದರೆ ಸೇನ್‌ರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಜಗತ್ತಿನ ಇಪ್ಪತ್ತಕ್ಕೂ ಹೆಚ್ಚು ನೊಬೆಲ್ ಪ್ರಶಸ್ತಿ ವಿಜೇತರೂ, ಖ್ಯಾತ ಬುದ್ಧಿಜೀವಿಗಳು, ಸಹಸ್ರಾರು ಸಂಘಸಂಸ್ಥೆಗಳು ಪ್ರಚಾರಾಂದೋಲನ ಮತ್ತು ಹೋರಾಟದ ಅಭಿಯಾನವನ್ನೇ ಪ್ರಾರಂಭಿಸಿದರು. ಈ ಎಲ್ಲಾ ಕಾರಣದಿಂದ ಕೊನೆಗೂ 2009ರ ಮೇನಲ್ಲಿ ಅಂದರೆ ವಿನಾಕಾರಣ ಭರ್ತಿ ಎರಡು ವರ್ಷ ಜೈಲು ಶಿಕ್ಷೆ ಅನುಭವಿಸಿದ ನಂತರವೇ ಅವರನ್ನು ಸುಪ್ರೀಂ ಕೋರ್ಟು ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆ ಮಾಡಿತು.

ಆದರೆ ಹೇಗಾದರೂ ಸರಿ ಬಿನಾಯಕ್ ಸೇನರಿಗೆ ಶಿಕ್ಷೆ ವಿಧಿಸುವುದು ಪ್ರಭುತ್ವಕ್ಕೆ ಅತ್ಯಗತ್ಯವಾಗಿತ್ತು ಏಕೆಂದರೆ ನ್ಯಾಯದ ಪರವಾಗಿ ಬಿನಾಯಕ್ ಸೇನ್‌ರಂಥ ಖ್ಯಾತನಾಮರೇ ಶಿಕ್ಷೆಗೆ ಒಳಗಾದರೆ ಉಳಿದವರು ತಾವಾಗಿಯೇ ಅನ್ಯಾಯವನ್ನು ಸಹಿಸಿಕೊಂಡು ಸುಮ್ಮನಾಗುತ್ತಾರೆ ಎಂಬುದು ಸರ್ಕಾರದ ಪ್ರಭುತ್ವದ ಹುನ್ನಾರವಾಗಿತ್ತು.

ಆದರೆ ಅತ್ಯಂತ ದುರದೃಷ್ಟದ ಸಂಗತಿಯೆಂದರೆ ಪ್ರಜಾಸತ್ತೆಯ ಪ್ರಮುಖ ಅಂಗವಾಗಿರಬೇಕಿದ್ದ ಸ್ವತಂತ್ರ ನ್ಯಾಯಾಲಯವೂ ಈ ಪ್ರಕರಣದಲ್ಲಿ ತನ್ನ ನ್ಯಾಯವಿಚಕ್ಷತೆಯನ್ನು ಮತ್ತು ನಿಷ್ಪಕ್ಷಪಾತತನವನ್ನು ಬದಿಗಿಟ್ಟು ಕಣ್ಣಿಗೆ ಖಾಕಿ ಪಟ್ಟಿಯನ್ನು ಕಟ್ಟಿಕೊಂಡು ಹೆಚ್ಚು ಕಡಿಮೆ ಪೊಲೀಸರು ದಾವೆಯಲ್ಲಿ ನೀಡಿದ್ದ ಅರ್ಜಿಯನ್ನೇ ತೀರ್ಪೆಂದು ಓದಿರುವುದು! ಮೇಲ್ನೋಟಕ್ಕೆ ನೋಡಿದರೂ ನ್ಯಾಯಾಲಯ ಈ ಪ್ರಕರಣದಲ್ಲಿ ಸಂಪೂರ್ಣ ಏಕಪಕ್ಷೀಯವಾಗಿ, ಪೊಲೀಸರ ಮತ್ತು ಪ್ರಬಲರು ಸೃಷ್ಟಿಸಿದ ಪೂರ್ವ ಗ್ರಹಗಳಿಗೆ ಮತ್ತು ನಾಗರಿಕ ಹೋರಾಟಗಳ ಬಗ್ಗೆ ವ್ಯಕ್ತಿಗತವಾಗಿ ತಾವು ನಂಬುವ ಸೈದ್ಧಾಂತಿಕ ಪೂರ್ವಗ್ರಹಗಳಿಗೆ ಬಲಿಯಾಗಿಯೇ ತೀರ್ಪು ಕೊಟ್ಟಿರುವುದು ಎದ್ದು ಕಾಣುತ್ತದೆ.

ಪ್ರಾಸಿಕ್ಯೂಷನ್ ವಾದದ ಪ್ರಕಾರ ಡಾ. ಬಿನಾಯಕ್ ಸೇನ್ ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ ಕಾರ್ಯಕರ್ತರು. ಆ ಸಂಘಟನೆಯ ಕಾರ್ಯಚಟುವಟಿಕೆಯನ್ನು ಪ್ರಸರಿಸಲು ಅವರು ಜೈಲಿನಲ್ಲಿದ್ದ ಮಾವೋವಾದಿ ಪಕ್ಷದ ನಾಯಕ ನಾರಾಯಣ ಸನ್ಯಾಲ್ ಅವರಿಂದ ದೇಶದಲ್ಲಿ ಭಯೋತ್ಪಾದಕ ಚಟುವಟಿಕೆ ನಡೆಸಲು ಸೂಚನೆ ಇರುವ ಪತ್ರಗಳನ್ನು ತೆಗೆದುಕೊಂಡು ಪಕ್ಷದ ಇತರ ಕಾರ್ಯಕರ್ತರಿಗೆ ತಲುಪಿಸಲು ಮತ್ತೊಬ್ಬ ಮಾವೋವಾದಿ ಪಕ್ಷದ ಕಾರ್ಯಕರ್ತರಾದ ಪೀಯೂಷ್ ಗುಹಾ ಎಂಬುವರಿಗೆ ಕೊಡುತ್ತಿದ್ದರು. ಹೀಗಾಗಿ ಈ ಮೂವರು (ನಾರಾಯಣ್ ಸನ್ಯಾಲ್, ಡಾ. ಬಿನಾಯಕ್ ಸೇನ್, ಪೀಯೂಷ್ ಗುಹಾ) ಬಹಿಷ್ಕೃತ ಸಂಘಟನೆಯ ಸದಸ್ಯರಾಗಿರುವುದು ಒಂದು ಅಪರಾಧ. ಹಾಗೆಯೇ ಸರ್ಕಾರದ ವಿರುದ್ಧ ಸಂಚುಕೂಟ ರೂಪಿಸಿದ್ದು ಎರಡನೇ ಅಪರಾಧ. ಸರ್ಕಾರದ ವಿರುದ್ಧ ಯುದ್ಧ ಹೂಡಲು ಸನ್ನಾಹ ಹೂಡಿದ್ದು ಮೂರನೇ ಅಪರಾಧ. ಆದ್ದರಿಂದ ಐಪಿಸಿ ಸೆಕ್ಷನ್ 124–ಎ, 120–ಬಿ, ಛತ್ತೀಸ್‌ಘಡ್ ವಿಶೇಷ ಜನ ಸುರಕ್ಷಾ ಅಧಿನಿಯಮದ 8 (1), 8 (2), 8 (3), ಮತ್ತು 8 (5), ಮತ್ತು Unlawful Activities Prevention Act, 1967 ನ ಸೆಕ್ಷನ್ 39 (2) ರಡಿ ಅವರೆಲ್ಲರ ಮೇಲೆ ಆರೋಪಗಳನ್ನು ಹೊರಿಸಲಾಗಿತ್ತು.

ಆದರೆ ಇವೆಲ್ಲಾ ಆರೋಪಗಳಷ್ಟೆ! ಇದನ್ನು ಅನುಮಾನ ಕೈಡೆಯಿಲ್ಲದಂತೆ ಸಾಬೀತುಮಾಡುವ ಜವಾಬ್ದಾರಿ ತನಿಖಾಧಿಕಾರಿ ಪೊಲೀಸರದ್ದು ಮತ್ತು ಅವರ ಪರವಾಗಿ ವಾದ ಮಾಡುವ ಪ್ರಾಸಿಕ್ಯೂಷನ್ ವಕೀಲರದ್ದು. ಅವರು ಮಾಡುವ ವಾದ ಮತ್ತು ನೀಡುವ ಸಾಕ್ಷಿ ಪುರಾವೆಗಳು ಹಾಗೂ ಆರೋಪಿಯು ತನ್ನ ಸಮರ್ಥನೆಗೆ ನೀಡುವ ಸಾಕ್ಷಿ ಪುರಾವೆಗಳನ್ನೆಲ್ಲಾ ತುಲನೆ ಮಾಡಿ ನ್ಯಾಯಾಧೀಶ ತನ್ನ ತೀರ್ಪು ನೀಡಬೇಕು. ಆ ತೀರ್ಪು ನಿರಪರಾಧಿಗೆ ವಿನಾಕಾರಣ ಶಿಕ್ಷೆಯಾಗದಂಥ ನ್ಯಾಯಸಂಹಿತೆಯನ್ನೂ ಮತ್ತು ಅನುಮಾನಕ್ಕೆಡೆ ಕೊಡದಂತೆ ಅಪರಾಧ ಸಾಬೀತಾಗಬೇಕಾದ ನ್ಯಾಯಪ್ರಕ್ರಿಯೆಯನ್ನು ಅನುಸರಿಸಬೇಕು. ಅದರಲ್ಲೂ ದೇಶದ್ರೋಹದ ಆಪಾದನೆಯನ್ನು ಒಪ್ಪಿಕೊಳ್ಳಬೇಕಾದರೆ ಹಾಗೂ ಜೀವಾವಧಿಯಂತ ಘೋರ ಶಿಕ್ಷೆ ವಿಧಿಸಬೇಕಾದರೆ ಅಂಥ ಆರೋಪ ಕಿಂಚಿತ್ತೂ ಅನುಮಾನಕ್ಕೆ ಎಡೆಯಿಲ್ಲದಂತೆ ಸಾಬೀತಾಗಿರಬೇಕು. ಇಂಥಾ ಪ್ರಕರಣಗಳಲ್ಲಿ ಕೆಳನ್ಯಾಯಾಲಯಗಳಲ್ಲಿ ನ್ಯಾಯ ಪ್ರಕ್ರಿಯೆ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಸುಪ್ರೀಂಕೋರ್ಟು ಕೆಲವು ಸ್ಪಷ್ಟ ನಿರ್ದೇಶನಗಳನ್ನೂ ಮತ್ತು ಲ್ಯಾಂಡ್‌ಮಾರ್ಕ್ ತೀರ್ಪುಗಳನ್ನೂ ನೀಡಿದೆ. ಉದಾಹರಣೆಗೆ ದೇಶದ್ರೋಹದ ಆಪಾದನೆ ಸ್ವೀಕೃತವಾಗಬೇಕಾದರೆ ಅಂತಹ ಅಪರಾಧ ನೇರ ಹಿಂಸಾಚರಣೆಗೂ ಕಾರಣವಾಗಿರಬೇಕು ಎಂಬುದು ಒಂದು ಮಾರ್ಗದರ್ಶನ.

ಆದರೆ ಪ್ರಾಸಿಕ್ಯೂಷನ್ ಪರ ವಾದವಾಗಲೀ, ರಾಯಪುರದ ಎರಡನೇ ಸೆಷನ್ಸ್ ಜಡ್ಜ್ ಬಿ.ಪಿ. ವರ್ಮಾ ಆಗಲೀ ಈ ಯಾವುದೇ ಪ್ರಕ್ರಿಯೆಯನ್ನು ಮತ್ತು ಸಂಹಿತೆಯನ್ನು ಅನುಸರಿಸಿಲ್ಲ. ಉದಾಹರಣೆಗೆ ಡಾ. ಬಿನಾಯಕ್ ಸೇನ್ ಮಾವೋವಾದಿ ಎಂದು ಆರೋಪಿಸಲು ಪೊಲೀಸರು ಹೊರಿಸಿರುವ ಆರೋಪಗಳು ಇವು:

1. ಡಾ. ಸೇನ್ 33 ಕ್ಕೂ ಹೆಚ್ಚು ಸಲ ಮಾವೋವಾದಿ ನಾಯಕ ನಾರಾಯಣ ಸನ್ಯಾಲ್ ಅವರನ್ನು ಜೈಲಿನಲ್ಲಿ ಭೇಟಿ ಮಾಡಿದ್ದಾರೆ.
2. ಡಾ. ಸೇನ್ ಶಿಫಾರಸ್ಸಿನ ಮೇರೆಗೆ ಸನ್ಯಾಲರಿಗೆ ಮನೆ ಬಾಡಿಗೆಗೆ ನೀಡಲಾಗಿದೆ. ಇದು ಅವರಿಬ್ಬರ ಸಂಬಂಧವನ್ನು ಸಾಬೀತುಮಾಡುತ್ತದೆ.
3. ಡಾ. ಸೇನ್ ನಾರಾಯಣ ಸನ್ಯಾಲ್ ಅವರಿಂದ ಪತ್ರವನ್ನು ತೆಗೆದುಕೊಂಡು ಪೀಯೂಷ್ ಗುಹಾ ಅವರಿಗೆ ತಲುಪಿಸಿದ್ದಾರೆ.
4. ಡಾ. ಸೇನ್ ಮತ್ತು ಅವರ ಪತ್ನಿ ಇಲಿನಾ ಸೇನ್ ಶಂಕರ್ ಸಿಂಗ್ ಮತ್ತು ಅಮಿತಾ ಶ್ರೀವಾಸ್ತವ ಎಂಬ ಇಬ್ಬರು ಮಾವೋವಾದಿಗಳಿಗೆ ತಮ್ಮ 'ರೂಪಾಂತರ್' ಎಂಬ ಸಂಸ್ಥೆಯಲ್ಲಿ ಕೆಲಸ ಕೊಟ್ಟಿದ್ದರು. ಡಾ. ಸೇನ್ ದಂಪತಿಗಳು ಕಾಡಿನಲ್ಲಿ ಹಲವಾರು ಬಾರಿ ಮಾವೋವಾದಿಗಳ ಸಭೆಯಲ್ಲಿ ಭಾಗವಹಿಸಿದ್ದರು.
5. ಡಾ. ಸೇನರು ಛತ್ತೀಸ್‌ಘಡ್‌ದಲ್ಲಿ ತಮ್ಮ ಪಕ್ಷಕ್ಕೆ ಮಾಡುತ್ತಿರುವ ಸೇವೆಯನ್ನು ಶ್ಲಾಘಿಸಿ ಮಾವೋವಾದಿ ಪಕ್ಷದ ಕೇಂದ್ರ ಸಮಿತಿ ಸೇನ್‌ರಿಗೆ ಬರೆದ ಪತ್ರ ದೊರೆತಿದೆ.

▶▶ 16

ನೋ ಕಾಮೆಂಟ್ಸ್

"ಡಾ. ಬಿನಾಯಕ್ ಸೇನ್ ಬಗ್ಗೆ ರಾಯಪುರ ನ್ಯಾಯಾಲಯ ನೀಡಿರುವ ತೀರ್ಪು ನಮ್ಮ ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನರಿಟ್ಟಿರುವ ವಿಶ್ವಾಸವನ್ನೇ ಪ್ರಶ್ನಿಸುವಂತೆ ಮಾಡಿದೆ. ಮಾನವ ಹಕ್ಕುಗಳಿಗೆ ದುಡಿಯುವವರನ್ನು ಜೈಲಿಗೆ ತಳ್ಳುವಂತಹ ಕಾನೂನುಗಳನ್ನೇ ಈಗ ಪರಾಮರ್ಶಿಸಬೇಕಿದೆ."

- ಪ್ರಜಾವಾಣಿ ಸಂಪಾದಕೀಯದಲ್ಲಿ

ನಂಬಿದ್ರೆನಂಬಿ ಬಿಟ್ರೆಬಿಡಿ


"ಎಬಿವಿಪಿ ದೇಶದ ಯುವಜನರ ಪ್ರತಿನಿಧಿಯಾಗಿದೆ. ದೇಶದ ವಿದ್ಯಾರ್ಥಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಎಬಿವಿಪಿ ಪಾತ್ರ ಮಹತ್ವದ್ದಾಗಿದೆ. ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯನ್ನು ಮೂಡಿಸುವಂತಹ ಕಾರ್ಯವನ್ನು ಮಾಡಿದೆ."

- ವಿನಯ್ ಬಿದರೆ, ಎಬಿವಿಪಿ ರಾಜ್ಯ ಕಾರ್ಯದರ್ಶಿ

"ಡಾ. ಬಿನಾಯಕ್ ಸೇನ್‌ರವರು ನನ್ನ ವೃತ್ತಿ ಸೇವೆಯನ್ನು ಬಯಸಿದರೆ ಅವರ ಪರ ಹೋರಾಟ ಮಾಡಲು ನನಗೆ ಸಂತೋಷವಾಗುತ್ತದೆ. ಈ ವಿಚಾರದಲ್ಲಿ ಬಿಜೆಪಿ ಸಂಸದ ಎಂಬ ಕಾರಣಕ್ಕೆ ನಾನು ಹಿಂದೇಟು ಹಾಕಲಾರೆ. ಒಬ್ಬ ವಕೀಲನಾಗಿ ಸೇನ್‌ಪರ ವಾದ ಮಾಡಲು ನಾನು ಸಿದ್ಧ."

- ರಾಮ್ ಜೇಠ್ಮಲಾನಿ, ಹಿರಿಯ ವಕೀಲರು

ಇವರ ಹಿಂದೂತ್ವ ದಾಸ್ಯವೇ ಹೆಚ್ಚು ಅಪಾಯಕಾರಿ!



"ಭಾರತವನ್ನು ಇನ್ನೂ ಇಂಡಿಯಾ ಎಂದು ಕರೆಯುತ್ತಿರುವುದರಲ್ಲೇ ಇನ್ನೂ ನಮ್ಮ ದಾಸ್ಯ ತೀರಿಲ್ಲವೆಂಬುದು ಅರ್ಥವಾಗುತ್ತದೆ. ಅದೇರೀತಿ ಅಲ್ಪಸಂಖ್ಯಾತರ ಹಬ್ಬಗಳಿಗೆ ರಾಷ್ಟ್ರೀಯ ಹಬ್ಬದ ಮಾನ್ಯತೆ ನೀಡಬಾರದು. ಭಾನುವಾರದಂದೇ ರಜಾ ಕೊಡುವುದನ್ನೂ ಸಹ ಮರುಪರಿಶೀಲಿಸಬೇಕು."

- ಡಾ. ಚಿದಾನಂದ ಮೂರ್ತಿ

ನೆಗಡಿ ಬಂತು ಅಂಥಾ ಮೂಗು ಕೊಯ್ದುಕೊಳ್ಳಬಾರದಷ್ಟೇ!

"498 ಎ ವಿಧಿಯ ದುರ್ಬಳಕೆ ಆಗದಂತೆ ತಡೆಗಟ್ಟಲು ಬದಲಾವಣೆಗಳತ್ತ ಹೆಜ್ಜೆ ಇಡಬೇಕಿದೆ. ಈ ವಿಧಿಯಲ್ಲಿ ಕೆಲವೊಂದು ಮಾರ್ಪಾಟುಗಳನ್ನು ಮಾಡಬೇಕಾದ ಅವಶ್ಯಕತೆ ಇದೆ. ದಂಪತಿಗಳ ನಡುವಿನ ಅನ್ಯೋನ್ಯತೆಗೆ ಕಾನೂನು ರೂಪಿಸಲು ಸಾಧ್ಯವಿಲ್ಲ, ಕಾನೂನಿನಿಂದ ಮಾನವೀಯ ಸಂಬಂಧಗಳು ಸುಧಾರಣೆಯಾಗುತ್ತದೆ ಎಂದು ಒಪ್ಪಲಾಗುವುದಿಲ್ಲ."

- ಡಾ. ಬಿ.ಎನ್.ಗಂಗಾಧರ್, ಮನೋವೈದ್ಯ

ಹೀಗನ್ನಿಸುವುದು ಸಹಜ

"ಸಮಾಜದಲ್ಲಿ ಇಂದು ಉತ್ತಮ ಸಾಹಿತಿಗಳ ಕೊರತೆ ಎದ್ದು ಕಾಣಿಸುತ್ತಿದೆ. ಹಾಗಾಗಿ ಜನರಿಗೆ ಸೂಕ್ತ ಮಾರ್ಗದರ್ಶನ ನೀಡುವ ಮೌಲಿಕ, ಸದ್ಗುಣಗಳುಳ್ಳ ಸಾಹಿತಿಗಳ ಅವಶ್ಯಕತೆ ಇದೆ."

- ಉಡುಪಿಯ ಸುಗುಣೇಂದ್ರ ತೀರ್ಥ ಸ್ವಾಮೀಜಿ

ನೋವಿಗೆ ಮಿಡಿದ ಜೀವಕ್ಕೆ ಜೀವಾವಧಿ ಶಿಕ್ಷೆ!



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

...ದವರ ವೈದ್ಯ ಮತ್ತು ಮಾನವಹಕ್ಕುಗಳ ...ಾಟಗಾರ ಡಾ. ಬಿನಾಯಕ್ ಸೇನ್ ಅವರಿಗೆ ...ಗಢದ ರಾಯ್‌ಪುರದ ನ್ಯಾಯಾಲಯ ನೀಡಿರುವ ...ವಧಿ ಶಿಕ್ಷೆಯ ವಿರುದ್ಧ ದೇಶದಾದ್ಯಂತ ಪ್ರತಿಭಟನೆಗಳು ...ಯುತ್ತಿವೆ. ಇದೇ ಬುಧವಾರ ಬೆಂಗಳೂರಿನಲ್ಲೂ ...ದೊಂದು ಪ್ರತಿಭಟನೆ ನಡೆಯಿತು. ಇತರೆ ನಗರಗಳಲ್ಲಿ ...ನಂತೆ ಇಲ್ಲಿಯೂ ವಿವಿಧ ಸಂಸ್ಥೆ-ಸಂಘಟನೆಗಳ ...ು ಕಾರ್ಯಕರ್ತರು ಜೊತೆಗೂಡಿ ಡಾ. ಸೇನ್ ...ಿ ತಮ್ಮ ದನಿ ಎತ್ತಿದ್ದು ಒಂದು ರೀತಿಯಲ್ಲಿ ...ಯನ್ನು ತಂದಿತು. ಏಕೆಂದರೆ ಸೇನ್ ಅವರಿಗೆ ...ವಧಿ ಶಿಕ್ಷೆಯನ್ನು ವಿಧಿಸಿರುವ ಹಿಂದಿರುವ ಉದ್ದೇಶವೇ ...ಮಾನವಹಕ್ಕು ಮತ್ತು ಜನಪರ ಹೋರಾಟಗಾರರಲ್ಲಿ ...ಹುಟ್ಟಿಸುವುದಾಗಿತ್ತು; ಆ ಮೂಲಕ ಯಾರೂ ...ಗಳ ದೌರ್ಜನ್ಯದ ವಿರುದ್ಧ ದನಿ ಎತ್ತದಂತೆ ...ಕೊಳ್ಳುವುದೇ ಆಗಿತ್ತು. ಆದರೆ ಆ ಉದ್ದೇಶ ಕಿಂಚಿತ್ತೂ ...ಲಿಲ್ಲ. ಬದಲಾಗಿ ಅದಕ್ಕೆ ವಿರುದ್ಧವಾದ ಪರಿಣಾಮ ...ೀರಿ ಎಲ್ಲರನ್ನು ಈ ತೀರ್ಪಿನ ವಿರುದ್ಧ ಒಗ್ಗೂಡಿಸಿದೆ.

...ನ್ ಅವರಿಗೆ ಜೀವಾವಧಿ ಶಿಕ್ಷೆ ನೀಡಿರುವ ...ರಲ್ಲಿರುವ ಲೋಪದೋಷಗಳ ಬಗ್ಗೆ ಇದೇ ...ುಲ್ಲಿ ನಮ್ಮ ಶಿವಸುಂದರ್ 'ಚಾರ್ವಾಕ' ಅಂಕಣದಲ್ಲಿ ...ಗಿ ಚರ್ಚಿಸಿದ್ದಾರೆ. ಈ ಹಿಂದೆ ಸೇನ್ ಅವರಿಗೆ ...ನನ್ನು ನಿರಾಕರಿಸಿ, ಅವರ ಹೃದಯ ಕಾಯಿಲೆಗೆ ...ದ ಚಿಕಿತ್ಸೆಯನ್ನೂ ನೀಡದೆ ಅವರನ್ನು ಎರಡು ... ಕಾಲ ಬಂಧನದಲ್ಲಿಟ್ಟಿದ್ದಾಗ ಅವರ ಬಗ್ಗೆ ಇದೇ ...ಲ್ಲಿ ನಾನು ಬರೆದಿದ್ದೆ (ಮೇ 20, 2009 ರ ... ಆದ್ದರಿಂದ ಇಂದು ಸೇನ್‌ರಂತಹ ನಿಸ್ವಾರ್ಥ ...ಕನನ್ನು, ಮಾನವತಾವಾದಿಯನ್ನು ಜೈಲಿಗೆ ...ರುವ ನಮ್ಮ ಪ್ರಜಾತಂತ್ರ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ...ನ್ನ ಆತಂಕವನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ.


...ೀಚೆಗೆ ನಮ್ಮ ಮಹಾನ್ ಭಾರತದಲ್ಲಿ ಎತೆಂತಹ ...ಗಳು ನಡೆದಿವೆ ನೋಡಿ.

...ಶದ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಬಲಿಕೊಟ್ಟ ...ಹೆಸರಲ್ಲಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ... ಎಸ್ಟೇಟನ್ನೇ ಭ್ರಷ್ಟ ರಾಜಕಾರಣಿಗಳು ಮತ್ತು ...ಗಳು ಕಬಳಿಸಿ ಸಿಕ್ಕಿಬಿದ್ದಿದ್ದರು. ಇದನ್ನು 'ಆದರ್ಶ್ ... ಎಂದೇ ಕರೆಯಲಾಗುತ್ತಿದೆ. ಅದರಲ್ಲಿ ಎಷ್ಟು ...ಡಗಿದೆ ಎಂದರೆ ಈ 'ಆದರ್ಶ್ ಹಗರಣ'ದಲ್ಲಿ ... ಪಾತ್ರ ವಹಿಸಿದ್ದ ಮಹಾರಾಷ್ಟ್ರದ ಕಾಂಗ್ರೆಸ್ ...ಣಿ ಅಶೋಕ್ ಚವಾಣ್ ಅವರಿಗೆ ಆದ 'ಶಿಕ್ಷೆ' ...ುಂತ್ರಿ ಹುದ್ದೆಗೆ ರಾಜೀನಾಮೆ ನೀಡಬೇಕಾಗಿ ..., ಅಷ್ಟೇ! ಅವರಿಗೆ ಜೈಲು, ಬೇಲು ತರಹದ ...ಂಕಷ್ಟಗಳೂ ಎದುರಾಗಲೇ ಇಲ್ಲ. ಸ್ವಲ್ಪ ದಿನಗಳಲ್ಲಿ ...ಗರಣಗಳಂತೆ 'ಆದರ್ಶ್' ಹಗರಣವನ್ನೂ ಜನ ...ಮೇಲೆ ಮುಂದೊಂದು ದಿನ ಇದೇ ಅಶೋಕ್ ...ಮತ್ತೆ ಮುಖ್ಯಮಂತ್ರಿಯೋ, ಕೇಂದ್ರ ಮಂತ್ರಿಯೋ ... 'ಆದರ್ಶ್' ಮಾರ್ಗವನ್ನು ಮುಂದುವರೆಸಿದರೆ ...ತಬೇಕಿಲ್ಲ.

...ಿ, ಚವಾಣ್‌ರಂತೆ ಕೋಟಿಕೋಟಿ ರೂಪಾಯಿಗಳ ...ೋಹಕ್ಕೆ ಬೀಳದೆ ತನ್ನೆಲ್ಲ ವಿದ್ಯೆ ಮತ್ತು ಕಾಳಜಿಯನ್ನು ... ಅತಿ ಬಡವರಾದ ಆದಿವಾಸಿಗಳ ಉದ್ಧಾರಕ್ಕಾಗಿ ...ಗಿಟ್ಟಿದ್ದ ಬಿನಾಯಕ್ ಸೇನ್ ಅವರಿಗೆ ಜೀವಾವಧಿ ... ನಮ್ಮ ವ್ಯವಸ್ಥೆ ವಿಧಿಸುತ್ತದೆ.

...ೀಚೆಗೆ ಬಹಳ ಸುದ್ದಿ ಮಾಡಿದ ಮತ್ತೊಂದು ... ಕಾಮನ್‌ವೆಲ್ತ್ ಕ್ರೀಡಾಕೂಟದ್ದು. ಅದರಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸುವ ನೆಪದಲ್ಲಿ ಕೋಟ್ಯಂತರ ರೂಪಾಯಿಗಳನ್ನು ಕದಿಯಲಾಗಿತ್ತು. ಆ ಹಗರಣದ ಕೇಂದ್ರ ಬಿಂದುವಾದ ಸುರೇಶ್ ಕಲ್ಮಾಡಿಯನ್ನು ಇವತ್ತಿಗೂ ವಿಚಾರಣೆಗೆ ಒಳಪಡಿಸಿಲ್ಲ. ಅದಕ್ಕಿಂತ ಮುಖ್ಯವಾಗಿ ಈ ಹಗರಣದ ಪ್ರಮುಖ ದಾಖಲೆಗಳೇ ನಾಪತ್ತೆ ಆಗುವಂತೆ ಮಾಡುವ ಮೂಲಕ ಕಲ್ಮಾಡಿ ಮತ್ತಾತನ ಕಳ್ಳರ ಗ್ಯಾಂಗಿಗೆ ಯಾವ ಸಮಸ್ಯೆಯೂ ಎದುರಾಗದಂತೆ ನೋಡಿಕೊಳ್ಳಲಾಗಿದೆ.

ಆದರೆ ಬಿನಾಯಕ್ ಅವರ ಕೇಸ್‌ನಲ್ಲಿ ಆದದ್ದೇನು? ಪೊಲೀಸರೇ ಸೃಷ್ಟಿಸಿದ ಖೊಟ್ಟಿ ದಾಖಲೆಗಳನ್ನಾಧರಿಸಿದ ನ್ಯಾಯಾಲಯ ಸೇನ್ ಅವರು ತಮ್ಮ ಬದುಕಿನ ಉಳಿದ ಕಾಲವನ್ನು ಜೈಲಿನಲ್ಲೇ ಕಳೆಯಬೇಕೆಂದು ತೀರ್ಪು ನೀಡುತ್ತದೆ!



ಈಗ ಎಲ್ಲರ ಗಮನ ಇರುವುದು 1.76 ಸಾವಿರ ಕೋಟಿ 2-ಜಿ ಸ್ಪೆಕ್ಟ್ರಮ್ ಹಗರಣದ ಮೇಲೆ. ಎಲ್ಲರಿಗೂ ಗೊತ್ತಿರುವಂತೆ ಈ ಹಗರಣದ ಪ್ರಮುಖ ರುವಾರಿಗಳು ಮಾಜಿ ಮಂತ್ರಿ ಎ. ರಾಜಾ ಮತ್ತು ಸಂಶಯಾಸ್ಪದ ವ್ಯಕ್ತಿಯಾದ ನೀರಾ ರಾಡಿಯಾ.

ಮೊದಲಿಗೆ ರಾಜಾನ ವಿಷಯದಲ್ಲಿ ಏನಾಯಿತು ಎಂದು ನೋಡೋಣ. 2ಜಿ ಸ್ಪೆಕ್ಟ್ರಮ್ ಹಗರಣ ಬೆಳಕಿಗೆ ಬಂದ ಹಲವಾರು ದಿನಗಳ ನಂತರ ಆತನಿಂದ ರಾಜೀನಾಮೆಯನ್ನು ಪಡೆಯಲಾಯಿತು. ಅದಾದ ಅದೆಷ್ಟೋ ದಿನಗಳ ನಂತರ ಆತನ ಮತ್ತು ಆತನ ಹತ್ತಿರದವರ ಮನೆ-ಆಫೀಸುಗಳ ಮೇಲೆ ರೇಡ್‌ಗಳನ್ನು ನಡೆಸಲಾಯಿತು. ಅಂದರೆ ಇಂಥದ್ದೊಂದು ರೇಡ್ ನಡೆಯುವ ಸಾಧ್ಯತೆ ಬಗ್ಗೆ ರಾಜಾ ಮತ್ತಾತನ ಸಂಗಡಿಗರಿಗೆ ಮೊದಲೇ ಸುಳಿವು ಸಿಕ್ಕಿತ್ತು. ಇಷ್ಟಾದ ಮೇಲೂ ಸಿಕ್ಕಿಹಾಕಿಕೊಳ್ಳುವಂತಹ ದಾಖಲೆಗಳನ್ನು ಅವರೆಲ್ಲ ಇನ್ನೂ ತಮ್ಮ ಬಳಿಯೇ ಇಟ್ಟುಕೊಂಡಿರುವ ಸಾಧ್ಯತೆಯೇ ಇರಲಿಲ್ಲ. ಅಂದರೆ ದೇಶದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ವಂಚಿಸಿದ ರಾಜಾನಿಗೆ ವಿಧಿಸಲಾದ 'ಶಿಕ್ಷೆ' ಆತ ತನ್ನ ಹುದ್ದೆಯಿಂದ ಕೆಳಗಿಳಿದಿದ್ದು ಅಷ್ಟೇ. ಇಲ್ಲಿ ಸ್ಪಷ್ಟವಾಗಿ ಕಾಣಿಸುವುದು ಆತನ ಮೇಲೆ ಆದ ರೇಡ್ ಜನರನ್ನು ಮೋಸಗೊಳಿಸುವ, ಆತನ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದು ತೋರುವ ಒಂದು ಕಪಟ ನಾಟಕ ಎಂಬುದು.

ಇದನ್ನು ಬಿನಾಯಕ್ ಸೇನ್ ಅವರ ಮೇಲಾದ ರೇಡಿಗೆ ಹೋಲಿಸಿ ನೋಡಿ. ಸೇನ್ ಅವರ ಮನೆ ಮೇಲಾದ ರೇಡ್ ಸಂದರ್ಭದಲ್ಲಿ ಒಂದು ಕಂಪ್ಯೂಟರ್ ಅನ್ನು ಪೊಲೀಸರು ವಶಪಡಿಸಿಕೊಂಡರು. ಆ ಕಂಪ್ಯೂಟರ್‌ಅನ್ನು ಪರಿಶೀಲಿಸಿದಾಗ ಸೇನ್ ಅವರ ಪತ್ನಿ ಇಳಿನಾ ಅವರು ಐಎಸ್‌ಐ ಎಂಬ ಸಂಸ್ಥೆಗೆ ಒಂದು ಈ-ಮೇಲ್ ಕಳುಹಿಸಿದ್ದು ಪತ್ತೆಯಾಯಿತು. ಹಾಗೆಯೇ ಯಾರೋ ಒಬ್ಬರು ಸೇನ್ ಅವರನ್ನು 'ಕಾಮ್ರೆಡ್' ಎಂದು ಉದ್ದೇಶಿಸಿ ಬರೆದಿದ್ದ ಪತ್ರವೂ ಸಿಕ್ಕಿತು. ವಾಸ್ತವವಾಗಿ ಇಳಿನಾ ಅವರು ಪತ್ರ ಬರೆದಿದ್ದು ದೆಹಲಿಯಲ್ಲಿರುವ 'ಇಂಡಿಯನ್ ಸೋಷಿಯಲ್ ಇನ್ ಸ್ಟಿಟ್ಯೂಟ್ (ಐಎಸ್‌ಐ) ಎಂಬ ಸಂಸ್ಥೆಗೆ. ಆದರೆ ಛತ್ತೀಸಗಢದ ಸರ್ಕಾರಿ ವಕೀಲರು ಇಳಿನಾ ಅವರು ಪಾಕಿಸ್ತಾನದ ಗೂಢಚರ್ಯೆ ಸಂಘಟನೆಯಾದ ಐಎಸ್‌ಐಗೆ ಪತ್ರ ಬರೆದಿದ್ದರು ಎಂದೇ ವಾದಿಸಿದರು. ಅಷ್ಟೇ ಅಲ್ಲ, ಮಾವೋವಾದಿ ನಕ್ಸಲರು ಪರಸ್ಪರರನ್ನು 'ಕಾಮ್ರೆಡ್' ಎಂದು ಕರೆಯುವುದರಿಂದ ಸೇನ್ ಅವರು ಮಾವೋವಾದಿ ಸಂಘಟನೆಗೆ ಸೇರಿದ್ದಾರೆ ಎಂದೂ ನ್ಯಾಯಾಲಯದಲ್ಲಿ ವಾದಿಸಿದರು. ವಾಸ್ತವವಾಗಿ ಸಿಪಿಎಂ, ಸಿಪಿಐ ಸೇರಿದಂತೆ ಬಹಳಷ್ಟು ಕಮ್ಯುನಿಸ್ಟ್ ಪಕ್ಷಗಳಲ್ಲೂ ಪರಸ್ಪರರನ್ನು ಕಾಮ್ರೆಡ್ ಎಂದೇ ಕರೆಯುತ್ತಾರೆ.

ಇನ್ನು ನೀರಾ ರಾಡಿಯಾಳೊಂದಿಗೆ ನಮ್ಮ ಸರ್ಕಾರ ಮತ್ತು ತನಿಖಾ ಸಂಸ್ಥೆಗಳು ನಡೆದುಕೊಂಡಿರುವ ರೀತಿಯನ್ನೇ ನೋಡಿ. ಹೇಳಿಕೇಳಿ ರಾಡಿಯಾ ರಾಜಕಾರಣಿಗಳನ್ನು, ಪತ್ರಕರ್ತರನ್ನು ಮತ್ತು ಅಧಿಕಾರಿಗಳನ್ನು ತನಗೆ ಬೇಕಾದ ರೀತಿಯಲ್ಲಿ ಬಳಸಿಕೊಂಡು ರತನ್ ಟಾಟಾ ಮತ್ತು ಮುಖೇಶ್ ಅಂಬಾನಿ ತರಹದ ಉದ್ಯಮಿಗಳಿಗೆ ನೆರವಾದಳಲ್ಲದೆ, ಆ ಪ್ರಕ್ರಿಯೆಯಲ್ಲಿ ತಾನೂ ಕೋಟ್ಯಂತರ ರೂಪಾಯಿಗಳನ್ನು ಗಳಿಸಿದಳು. ಈಕೆ ಬ್ಲಾಕ್ ಮನಿ ಮಾಡಿದ್ದಾಳೆಂದೂ, ಹವಾಲ ದಂಧೆಯಲ್ಲಿ ಸಕ್ರಿಯಳಾಗಿದ್ದಾಳೆಂದು ರಾಡಿಯಾ ವಿರುದ್ಧ ಆರೋಪಗಳಿವೆ. ಇಂತಹ ರಾಡಿಯಾಳನ್ನು ತನಿಖಾಧಿಕಾರಿಗಳು ತಮ್ಮ ಕಚೇರಿಗೆ ಕರೆಸಿಕೊಂಡು, ಇನ್ನೊಮ್ಮೆ ಆಕೆಯ ಭವ್ಯ ಫಾರ್ಮ್ ಹೌಸಿಗೆ ಹೋಗಿ ಆಕೆಯ 'ವಿಚಾರಣೆ' ನಡೆಸುತ್ತಾರೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಗೇಲಿಗೀಡು ಮಾಡಿದ ರಾಡಿಯಾ ಜೈಲನ್ನು ನೋಡುವುದಿರಲಿ, ಪೊಲೀಸ್ ಠಾಣೆಯ ಹೊಸ್ತಿಲನ್ನು ದಾಟದಂತೆ ನೋಡಿಕೊಳ್ಳಲಾಗುತ್ತಿದೆ.

ಹೀಗೆ ಅಶೋಕ್ ಚವಾಣ್, ಸುರೇಶ್ ಕಲ್ಮಾಡಿ ಮತ್ತು ಎ. ರಾಜಾ ತರಹದ ಚುನಾಯಿತ 'ಜನ ನಾಯಕರು' ಕ್ರಿಮಿನಲ್ ಕೃತ್ಯಗಳಲ್ಲಿ ಸಿಕ್ಕಿಬಿದ್ದಿದ್ದರೂ ಅವರ ತಲೆ ಮೇಲಿನ ಒಂದು ಕೂದಲೂ ಅಲುಗಾಡದಂತೆ ನಮ್ಮ ಪ್ರಜಾಪ್ರಭುತ್ವ ಅವರನ್ನೆಲ್ಲಾ ಕಾಪಾಡುತ್ತದೆ. ಆದರೆ ಎಲ್ಲ ರೀತಿಯಲ್ಲೂ ಜನಸೇವಕರಾದ ಬಿನಾಯಕ್ ಸೇನ್‌ರಂತಹ ನಿರಪರಾಧಿಗಳ ಮೇಲೆ ಕಪೋಲಕಲ್ಪಿತ ಆರೋಪಗಳನ್ನು ಹೊರಿಸಿ ಅವರನ್ನು ಜೈಲಿಗಟ್ಟುತ್ತದೆ.

ಪ್ರಜಾಪ್ರಭುತ್ವದ ಎಲ್ಲಾ ಸ್ತಂಭಗಳನ್ನು ತನ್ನ ಲಾಭಕ್ಕಾಗಿ ಉಪಯೋಗಿಸಿಕೊಂಡ ನೀರಾ ರಾಡಿಯಾ ಇವತ್ತು ಈ ದೇಶ ಕಂಡ ಅತಿದೊಡ್ಡ ಹಗರಣದ ಕೇಂದ್ರಬಿಂದುವಾಗಿದ್ದರೂ ಆಕೆಯೊಂದಿಗಿನ ತಮ್ಮ ಸಂಪರ್ಕವನ್ನು ಟಾಟಾ ಮತ್ತು ಅಂಬಾನಿಗಳು ಕಡಿದು ಹಾಕುವುದಿಲ್ಲ. ಬದಲಾಗಿ ರಾಡಿಯಾಳೊಂದಿಗೆ ನಂಟಿದ್ದರೆ ತಮಗೆ ಲಾಭ ಗ್ಯಾರಂಟಿ ಎಂಬ ಭಾವನೆಯೇ ಹೆಚ್ಚಾಗುತ್ತಿದೆ. ಕಳೆದ ಒಂದು ತಿಂಗಳಲ್ಲೇ ರಾಡಿಯಾಳ ಪಬ್ಲಿಕ್ ರಿಲೇಷನ್ಸ್ ಕಂಪನಿಗೆ ಮೂರು ಹೊಸ ಕ್ಲೈಂಟ್‌ಗಳು ಸಿಕ್ಕಿರುವುದೇ ಅಂತಹ ಧೋರಣೆಗೆ ಸಾಕ್ಷಿಯಾಗಿದೆ.

ಆದರೆ ಬಿನಾಯಕ್ ಸೇನ್ ಅವರ ಬದುಕಿಗೆ, ಆಶಯಗಳಿಗೆ ಏನಾಗಿದೆ ನೋಡಿ. ಅವರನ್ನು ಅಕ್ರಮವಾಗಿ ಬಂಧಿಸಿದ್ದರಿಂದ ಅವರು ಬಡ ಆದಿವಾಸಿಗಳಿಗೆ ನಡೆಸುತ್ತಿದ್ದ ಕ್ಲಿನಿಕ್ ಬಂದ್ ಆಗಿದ್ದು ಅಲ್ಲಿನ ಜನರಿಗೆ ದಿಕ್ಕು ತೋಚದಂತಾಗಿದೆ. ಈಗ ಅವರಿಗೆ ನೀಡಲಾಗಿರುವ ಜೀವಾವಧಿ ಶಿಕ್ಷೆಯ ವಿರುದ್ಧ ನ್ಯಾಯಾಲಯಗಳ ಮುಂದೆ ಹೋರಾಡಿ ಅದರಿಂದ ಮುಕ್ತಿ ಪಡೆಯುವ ಹೊತ್ತಿಗೆ ಅವರ ಎಲ್ಲಾ ಜೀವನೋತ್ಸಾಹ ಕಮರಿಹೋಗುವ ಸಾಧ್ಯತೆಗಳಿವೆ.

ಹೀಗೆ ನಮ್ಮ ದೇಶದ ಜನರನ್ನೇ ಸುಲಿಗೆ ಮಾಡಿದ ಕ್ರಿಮಿನಲ್‌ಗಳು ಸುರಕ್ಷಿತರಾಗಿರುವಾಗ, ಇದೇ ದೇಶದ ಬಡಜನರಿಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟಿದ್ದ ಸೇನ್‌ರಂತಹ ಅಮಾಯಕರು ಕಂಬಿ ಎಣಿಸಬೇಕಿದೆ.

ಅಂದಹಾಗೆ, ಇವತ್ತು ಸೇನ್ ಪರವಾಗಿ ದೇಶದಾದ್ಯಂತ ಎಲ್ಲಾ ಜನಪರ ಹೋರಾಟಗಾರರು ದನಿ ಎತ್ತುತ್ತಿದ್ದರೂ ನಮ್ಮ ಎಲ್ಲಾ ರಾಜಕೀಯ ಪಕ್ಷಗಳೂ-ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ-ಅವರ ಅಕ್ರಮ ಬಂಧನದ ಬಗ್ಗೆ ತುಟಿಪಿಟಿಕ್ ಎಂದಿಲ್ಲ. ಅದಕ್ಕೆ ಕಾರಣ ಇವತ್ತು ಎಲ್ಲ ಪಕ್ಷಗಳೂ ಜನದ್ರೋಹಿ ಪಕ್ಷಗಳಾಗಿರುವುದು. ದೇಶದ ಸುಲಿಗೆಯನ್ನು ತಮ್ಮ ಮುಖ್ಯ ದಂಧೆಯನ್ನಾಗಿಸಿಕೊಂಡಿರುವ ನಮ್ಮ ರಾಜಕೀಯ ಪಕ್ಷಗಳು ಇವತ್ತು ಎಲ್ಲ ರೀತಿಯಲ್ಲೂ ದೇಶದ್ರೋಹಿ ಪಕ್ಷಗಳಾಗಿವೆ.

ಇದು ನಮ್ಮ ಬೃಹತ್ ಪ್ರಜಾಪ್ರಭುತ್ವದ ಅಸಲಿ ಮುಖ.



108 ವರ್ಷಗಳಿಂದ ಶಿಕ್ಷಣ ನೀಡುತ್ತಿರುವ ಕಲ್ಯಾಣಪುರದ ಸೇಂಟ್ ಜೋಸೆಫ ಪ್ರಾಥಮಿಕ ಶಾಲೆ

ಶೈಕ್ಷಣಿಕ ಪ್ರಗತಿಗೆ ಮಲ್ಪೆ ಪೊಲೀಸರ ಕೊಡುಗೆ!

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹಲವು ಪೊಲೀಸು ಠಾಣೆಗಳು ಈಗ ಸಂಘಪರಿವಾರದ ನಿಯಂತ್ರಣದಲ್ಲಿವೆ. ಯಾರ ಮೇಲೆ ಕೇಸು ದಾಖಲಿಸಿಕೊಳ್ಳಬೇಕು ಎಂಬುದರಿಂದ ಹಿಡಿದು, ಕ್ರಿಮಿನಲ್ ಕಾಯ್ದೆಯ ಯಾವ ಕಲಮುಗಳ ಅಡಿ ಅವರ ಮೇಲೆ ಕೇಸು ಜಡಿಯಬೇಕು ಎಂಬುದರವರೆಗೆ, ಪೊಲೀಸರು ಈಗ ಪಾಲಿಸುವುದು ಸಂಘಪರಿವಾರದ ಆಜ್ಞೆಗಳನ್ನೇ ಹೊರತು ದೇಶದ ಕಾನೂನನ್ನಲ್ಲ; ಜನರನ್ನು ವಿನಾಕಾರಣ ಪೀಡಿಸುವ ತಮ್ಮ ಲಾಗಾಯ್ತಿನ ಚಾಳಿಯ ಜೊತೆಗೆ ಈಗ ಕರಾವಳಿಯ ಪೊಲೀಸರು ಪೊಲೀಸು ಠಾಣೆಗಳನ್ನು 'ಹಿಂದೂತ್ವ'ದ ಹೊಸ ಹೊಸ ಪ್ರಯೋಗಗಳಿಗೆ ತಕ್ಕುದಾದ ಪ್ರಯೋಗಶಾಲೆಯಾಗಿ ಸಜ್ಜುಗೊಳಿಸುವ ಕೈಂಕರ್ಯದಲ್ಲೂ ನಿಪುಣರಾಗತೊಡಗಿದ್ದಾರೆ. ಈ ವಿಷಯದಲ್ಲಿ ಉಡುಪಿ ಜಿಲ್ಲೆಯ ಹಲವು ಪೊಲೀಸು ಠಾಣೆಗಳ ನಡುವೆ ಭಾರಿ ಪೈಪೋಟಿ ಇರುವಂತಿದೆ; ಇತ್ತೀಚೆಗೆ ಉಡುಪಿಯ ಮಲ್ಪೆ ಠಾಣೆಯ ಪೊಲೀಸರು ಇಂಥ ಪ್ರಯೋಗವೊಂದನ್ನು ಕ್ಷಿಪ್ರಗತಿಯಲ್ಲಿ ಯಶಸ್ವಿಗೊಳಿಸಿ, ಮಿಕ್ಕವರಿಗಿಂತ ಒಂದು ಗಜ ಮುಂದೋಡಿದ್ದಾರೆ. ಇವರ ಸ್ಪರ್ಧೆಯ ಉತ್ಸಾಹಕ್ಕೆ ಬಲಿಯಾಗಿರುವವರು ಉಡುಪಿಯ ಖ್ಯಾತ ಕ್ರೈಸ್ತ ಶಿಕ್ಷಣ ಸಂಸ್ಥೆಗೆ ಸೇರಿದ ಶಾಲೆಯ ಶಿಕ್ಷಕಿ ಮತ್ತು ಮುಖ್ಯೋಪಾಧ್ಯಾಯರು ಸ್ಪೆಷಲ್ ಕ್ಲಾಸಿಗೆ ಚಕ್ಕರ್ ಹೊಡೆದ ದಲಿತ ವಿದ್ಯಾರ್ಥಿಗೆ ಏಟು ಕೊಟ್ಟರು ಎಂಬ ಕಾರಣಕ್ಕೆ ಮಲ್ಪೆ ಠಾಣೆಯ ಪೊಲೀಸರು, ಹಿಂದೂತ್ವವಾದಿಗಳ ನಿರ್ದೇಶನದಲ್ಲಿ, ಈ ಶಿಕ್ಷಕರ ಮೇಲೆ ದೂರು ದಾಖಲಿಸಿಕೊಂಡು, ಧರ್ಮನಿಂದನೆ, ದೈಹಿಕ ಹಿಂಸೆಗಳಿಗೆ ಸಂಬಂಧಿಸಿದ ಅತ್ಯಂತ ಕಠಿಣ ಕಲಮ್ಮುಗಳ ಅಡಿಯಲ್ಲಿ ಕೇಸು ಹಾಕಿ, ಕೋರ್ಟಿಗೆ ಹಾಜರುಪಡಿಸಿ, ಮಿಸುಕಾಡದ ಹಾಗೆ ಕ್ರಿಮಿನಲ್ ಮೊಕದ್ದಮೆಯಲ್ಲಿ ಸಿಕ್ಕಿಸಿದ್ದಾರೆ.


ವಿದ್ಯಾರ್ಥಿಯೊಬ್ಬನಿಗೆ ಮುಖ್ಯೋಪಾಧ್ಯಾಯರು ಒಂದು ಏಟು ಕೊಟ್ಟದ್ದಕ್ಕೆ ಕ್ರಿಮಿನಲ್ ಕಾಯ್ದೆಯ ಈ ಕಲಮುಗಳು! ಮಲ್ಪೆ ಪೊಲೀಸರ ಮೂರ್ಖತನ/ದೂರ್ತತನಕ್ಕೆ (ಅಯ್ಯೆ ನಿಮ್ಮದು!) ಇದಕ್ಕಿಂತ ಬೇರೆ ಉದಾಹರಣೆ ಬೇಕೆ? ಈ ಪ್ರಕರಣದಲ್ಲಿ ಹಿಂದೂತ್ವ ಸಂಘಟನೆಗಳ ವರ್ತನೆಯಲ್ಲಿ ಆಶ್ಚರ್ಯಕರವಾದದ್ದು ಏನೂ ಇಲ್ಲ. ಕರಾವಳಿಯಲ್ಲಿ ಅವುಗಳಿಗೆ ಬಿಸಿನೆಸ್ ಸ್ವಲ್ಪ ಡಲ್ ಆಗಿತ್ತು. ಈ ಪ್ರಕರಣ ಅವರಿಗೆ ಲಾಟರಿ ಹೊಡೆದ ಹಾಗೆ ಅನಾಯಾಸವಾಗಿ ಒದಗಿಬಂತು. ಆದರೆ ಇಲ್ಲಿನ ಪೊಲೀಸರ ಮೆದುಳಿನಲ್ಲಿ ಏನಿದೆ?

ಉಡುಪಿಯ ಸಮೀಪದ ಕಲ್ಯಾಣಪುರದ ಮಿಲಾಗ್ರೆಸ್ ಶಿಕ್ಷಣ ಸಂಸ್ಥೆಗಳಿಗೆ ನೂರು ವರ್ಷಗಳನ್ನೂ ಮೀರಿದ ಚರಿತ್ರೆ ಇದೆ. ಈ ಸಂಸ್ಥೆಗಳನ್ನು ನಡೆಸುವ, 400 ವರ್ಷಗಳ ಹಿಂದೆ ಸ್ಥಾಪಿತವಾದ, ಮಿಲಾಗ್ರೆಸ್ ಚರ್ಚ್ ಕರ್ನಾಟಕದ ಅತ್ಯಂತ ಪ್ರಾಚೀನ ಚರ್ಚುಗಳಲ್ಲಿ ಒಂದು. ಕಲ್ಯಾಣಪುರದ ಮಿಲಾಗ್ರೆಸ್ ಹೈಸ್ಕೂಲ್ ಸಹ 79 ವರ್ಷಗಳಷ್ಟು ಹಳೆಯದು. ಕರಾವಳಿಯ ಇತರ ಕ್ರೈಸ್ತ ಸಂಸ್ಥೆಗಳ ಹಾಗೆ ಕಲ್ಯಾಣಪುರದ ಮಿಲಾಗ್ರೆಸ್ ಸಂಸ್ಥೆಗಳೂ ಸಹ ತಮ್ಮ ನಿಷ್ಕಳಂಕ ಸೇವೆಯಿಂದ, ಇಲ್ಲಿನ ಎಲ್ಲ ಜಾತಿ, ಮತ, ಪಂಥಗಳವರ ಪ್ರೀತಿ, ಗೌರವಗಳನ್ನು ಗಳಿಸಿಕೊಂಡಿವೆ. ಉಡುಪಿಯ ಖ್ಯಾತ ಸಂಶೋಧಕರಾದ ಗುರುರಾಜ ಭಟ್ಟರಂತಹವರ ಮುಖ್ಯಸ್ಥಿಕೆಯಲ್ಲಿ, ವಿದ್ಯಾರ್ಥಿಗಳಲ್ಲಿ ಹೊಸ ಬಗೆಯ ವಿಚಾರಗಳನ್ನು ಹುಟ್ಟುಹಾಕುವ ಕೆ.ಎಸ್.ಕೆದ್ಲಾಯರಂಥ ಶಿಕ್ಷಕರ ಕಾರ್ಯಶೀಲತೆಯಲ್ಲಿ ಬೆಳೆದ ಸಂಸ್ಥೆಗಳಿವು. ಹಿಂದುಳಿದ ಜಾತಿಯ ವಿದ್ಯಾರ್ಥಿಗಳ ಶೈಕ್ಷಣಿಕ, ಔದ್ಯೋಗಿಕ ಮತ್ತು ವೈಚಾರಿಕ ಬೆಳವಣಿಗೆಗಳನ್ನು ಪ್ರೋತ್ಸಾಹಿಸುವ ಸಲುವಾಗಿಯೇ ಇರುವ ಎಸ್.ಸಿ.-ಎಸ್.ಟಿ. ಸೆಲ್, ಜಿಲ್ಲೆಯ ಇತರ ಶಿಕ್ಷಣ ಸಂಸ್ಥೆಗಳಿಗಿಂತ ಹೆಚ್ಚು ಚುರುಕಿನಿಂದ ಮಿಲಾಗ್ರೆಸ್ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ನಾವು ಕಂಡಿದ್ದೇವೆ. ಹೀಗಿರುತ್ತ, ಇದೇ ಡಿಸೆಂಬರ್ 14ರಂದು, ಕಲ್ಯಾಣಪುರ ಮಿಲಾಗ್ರೆಸ್ ಹೈಸ್ಕೂಲಿನ 8ನೇ ತರಗತಿಯ ಇಂಗ್ಲಿಷ್ ಸ್ಪೆಷಲ್ ಕ್ಲಾಸುಗಳಿಗೆ ಸತತ ಗೈರುಹಾಜರಾಗುತ್ತಿದ್ದ ಆಕಾಶ್ ಎಂಬ ದಲಿತ ಹಾಗು ಇಬ್ಬರು ಕ್ರಿಶ್ಚಿಯನ್ ಹುಡುಗರು ಸೇರಿದಂತೆ ಒಟ್ಟು 8 ವಿದ್ಯಾರ್ಥಿಗಳಿಗೆ ಮುಖ್ಯೋಪಾಧ್ಯಾಯರ ಅನುಮತಿ ಪಡೆದು ಕ್ಲಾಸಿಗೆ ಬರುವಂತೆ ಇಂಗ್ಲಿಷ್ ಶಿಕ್ಷಕರು ತಿಳಿಸಿದರು. ಈ 8 ಜನ ವಿದ್ಯಾರ್ಥಿಗಳು ಆ ಕಾರಣಕ್ಕೆ ಮುಖ್ಯೋಪಾಧ್ಯಾಯರಾದ ಪೌಲ್ ಲೋಬೊ ಅವರ ಕೊಠಡಿಗೆ ಹೋದಾಗ ಅವರು ವಿದ್ಯಾರ್ಥಿಗಳಿಗೆ ದಬಾಯಿಸಿ, ಒಂದೊಂದು ಏಟು ಕೊಟ್ಟಿದ್ದಾರೆ. ಆ ವಿದ್ಯಾರ್ಥಿಗಳು ಮುಂದೆ ತಾವು ಕ್ಲಾಸು ತಪ್ಪಿಸುವುದಿಲ್ಲ ಎಂದು ಮುಖ್ಯೋಪಾಧ್ಯಾಯರಲ್ಲಿ ವಿನಂತಿಸಿಕೊಂಡು ಹೋಗಿದ್ದಾರೆ. ಲೋಬೊ ಈ ಹುಡುಗರಿಗೆ ಕೊಟ್ಟ ಏಟು ಯಾವ ದೃಷ್ಟಿಯಿಂದಲೂ ಗಂಭೀರ ಸ್ವರೂಪದ್ದಾಗಿರಲಿಲ್ಲವಾದರೂ ಮಕ್ಕಳಿಗೆ ಏಟು ಕೊಡುವುದು ತಪ್ಪೆಂದೇ ಇಟ್ಟುಕೊಳ್ಳೋಣ. ಆದರೆ, ವಿದ್ಯಾರ್ಥಿಗಳನ್ನು ದಾರಿಗೆ ತರುವ ಲಾಗಾಯ್ತಿನ ಈ ಪದ್ಧತಿ ಮಿಲಾಗ್ರೆಸ್ ಹೈಸ್ಕೂಲಿನಲ್ಲಿ ಮಾತ್ರ ಚಾಲ್ತಿಯಲ್ಲಿರುವುದೇನೂ ಅಲ್ಲ; ಇದು ವಿದ್ಯಾರ್ಥಿಗಳಿಗೆ ಬುದ್ಧಿ ಹೇಳುವ ಪರಿಣಾಮಕಾರಿ ವಿಧಾನವೆಂದೇ ಬಹುತೇಕ ಶಿಕ್ಷಕರು ಭಾವಿಸುತ್ತಾರೆ. ಕಲಿಕೆಯ ವಾತಾವರಣದ ಬಗೆಗಿನ ವಿವೇಚನೆಯಲ್ಲಿ ಈ ನಮೂನೆಯ 'ಬುದ್ಧಿ ಹೇಳುವ' ಪದ್ಧತಿಯನ್ನು ಇಲ್ಲವಾಗಿಸುವ ವಿಧಾನಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಆದರೆ, ಮಲ್ಪೆ ಠಾಣೆಯ ಪೊಲೀಸರು ಸಂಶೋಧಿಸಿರುವ 'ಕ್ರಾಂತಿಕಾರಿ ವಿಧಾನ' ಕಂಡು ಶಿಕ್ಷಣ ತಜ್ಞರು ದಂಗಾಗಿ ಮೂರ್ಛೆ ಹೋಗುವುದು ಗ್ಯಾರಂಟಿ.

ಈ ಘಟನೆಯನ್ನು ವಿದ್ಯಾರ್ಥಿಗಳು ಮರೆತಿದ್ದರೂ, ಘಟನೆ ನಡೆದ ಬರೋಬ್ಬರಿ 8 ದಿನಗಳ ನಂತರ, ಡಿಸೆಂಬರ್ 22 ರಂದು, ಸ್ಥಳೀಯ ಹಿಂದೂತ್ವ ಸಂಘಟನೆಗಳು ಒಂದಷ್ಟು ಜನರನ್ನು ಸೇರಿಸಿ ಮಲ್ಪೆ ಠಾಣೆ ಎದುರು ಮತಪ್ರದರ್ಶನ ನಡೆಸಿದರು. ಏಟು ತಿಂದ ದಲಿತ ವಿದ್ಯಾರ್ಥಿ ಆಕಾಶ್ ಅಯ್ಯಪ್ಪ ವ್ರತಧಾರಿಯಾಗಿದ್ದು, ಶಾಲಾ ಮುಖ್ಯೋಪಾಧ್ಯಾಯರು ಅವನನ್ನು ಥಳಿಸುವುದರ ಜೊತೆ ಧರ್ಮನಿಂದನೆಯನ್ನೂ ಮಾಡಿದ್ದಾರೆಂದೂ, ಆಕಾಶನ ಕ್ಲಾಸ್ ಟೀಚರ್ ಮಾರ್ಸೆಲಿನ್ ಸೆರಾ ಕೂಡ ಅವನ ಜಾತಿ-ಮತ ಹಿಡಿದು ನಿಂದಿಸಿದ್ದಾರೆಂದೂ, ಈ ಹಿಂದೆಯೂ ಆ ಸಂಸ್ಥೆಯಲ್ಲಿ ಇಂತಹದ್ದು ನಡೆದಿದೆ ಎಂದೂ ಆರೋಪಿಸಿದವು. ಇದರ ಜೊತೆ ಹಿಂದೂತ್ವ ಸಂಘಟನೆಗಳು ಆಕಾಶನ ತಂದೆಯನ್ನು ಒತ್ತಾಯಿಸಿ ದೂರುಕೊಡಿಸಿದ್ದಲ್ಲದೆ, ಸ್ಥಳೀಯ ದೊಣ್ಣೆನಾಯಕ ಪ್ರಕಾಶ್ ಸಹ ಒಂದು ದೂರನ್ನು ಮಲ್ಪೆ ಪೊಲೀಸು ಠಾಣೆಗೆ ಕೊಟ್ಟ. ಅದಕ್ಕೆ ಸರಿಯಾಗಿ ಮಲ್ಪೆಯ ಪೊಲೀಸರು ಎತ್ತು ಕರು ಹಾಕಿದೆ ಎಂದರೆ ಕೊಟ್ಟಿಗೆಯಲ್ಲಿ ಕಟ್ಟು ಎನ್ನುವ ಜಾಣರು! ಪೊಲೀಸರು ದೂರು ಸಿಕ್ಕಿದ್ದೇ ಮಿಲಾಗ್ರೆಸ್ ಹೈಸ್ಕೂಲಿಗೆ ಹೋಗಿ, ಸಂಸ್ಥೆಯ ಮುಖ್ಯಸ್ಥರ ಜೊತೆ ಮಾತುಕತೆ ನಡೆಸದೆ, ಪರವಾನಗಿಯನ್ನೂ ಪಡೆಯದೇ ಮುಖ್ಯೋಪಾಧ್ಯಾಯರಾದ ಪೌಲ್ ಲೋಬೊ ಅವರನ್ನು ಮಲ್ಪೆ ಠಾಣೆಗೆ ಕರೆ ತಂದರು. ಆಕಾಶನ ತಂದೆಯ ಜೊತೆ ರಾಜಿ ಮಾತುಕತೆ ನಡೆಸಿ ಪ್ರಕರಣವನ್ನು ಇತ್ಯರ್ಥ ಮಾಡುವುದಾಗಿ ನಂಬಿಸಿ ಲೋಬೊ ಅವರಿಂದ ತಪ್ಪೊಪ್ಪಿಗೆ ಪತ್ರವನ್ನೂ ಬರೆಸಿಕೊಂಡು, ಸಂಜೆ 5 ಗಂಟೆಯವರೆಗೂ ಠಾಣೆಯಲ್ಲಿ ಕೂರಿಸಿ, 5 ಗಂಟೆಗೆ



ನಾನ್ನೂರು ವರ್ಷಗಳ ಇತಿಹಾಸವಿರುವ ಕಲ್ಯಾಣಪುರದ ಮಿಲಾಗ್ರೆಸ್ ಚರ್ಚ್



79 ವರ್ಷ ಪೂರೈಸಿರುವ ಕಲ್ಯಾಣಪುರ ಮಿಲಾಗ್ರೆಸ್ ಹೈಸ್ಕೂಲ್

ಲೋಬೊ ಅವರ ಮೇಲೆ ಐ.ಪಿ.ಸಿ.-295 ಎ, 324, 504 ಹಾಗು ಮಾರ್ಸೆಲಿನ್ ಸೆರಾರ ಮೇಲೆ ಐ.ಪಿ.ಸಿ.-295 ಕಲಮುಗಳ ಅಡಿ ಎಫ್.ಐ.ಆರ್. ದಾಖಲಿಸಿದರು. ಅದೇ ಸಂಜೆ 6 ಗಂಟೆಗೆ ಪೌಲ್ ಲೋಬೊ ಅವರನ್ನು ಉಡುಪಿ ತಾಲೂಕು ಜ್ಯುಡಿಸಿಯಲ್ ಮ್ಯಾಜಿಸ್ಟ್ರೇಟರ (ಜೆ.ಎಮ್.ಎಫ್.ಸಿ) ಮುಂದೆ ಹಾಜರುಪಡಿಸಿ ತಮ್ಮ ಕಸ್ಟಡಿಗೂ ತೆಗೆದುಕೊಂಡು ಬಿಟ್ಟರು. ಲೋಬೊ ಅವರಿಗೆ ಜಾಮೀನು ಸಿಗಲು ಎರಡು ದಿನ ಹಿಡಿಯಿತು. ಸೆರಾ ಅವರು ಕೋರ್ಟಿಗೆ ಶರಣಾಗಿ ಜಾಮೀನು ಪಡೆಯಬೇಕಾಯ್ತು. ಈ ಇಬ್ಬರು ಶಿಕ್ಷಕರ ಮೇಲೆ ಎಂಥ ಕಲಮುಗಳಡಿ ಕೇಸು ಹಾಕಲಾಗಿದೆ ಎಂದು ಒಂದಿಷ್ಟು ಗಮನಿಸಿ:

ಐ.ಪಿ.ಸಿ. 295: ಯಾವುದೇ ಮತಕ್ಕೆ ಸೇರಿದ ಜನರ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವ ಉದ್ದೇಶದಿಂದಲೇ, ಪೂಜಾಸ್ಥಳವನ್ನು ಹಾನಿ ಯಾ ಅಪವಿತ್ರಗೊಳಿಸುವುದು. (2 ವರ್ಷಗಳ ವರೆಗಿನ ಸಜೆ/ದಂಡ ಅಥವ ಎರಡೂ).

ಐ.ಪಿ.ಸಿ. 295 ಎ: ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಏಕೈಕ ಉದ್ದೇಶದಿಂದ, ಆ ಜನರ ಮತವನ್ನು - ಮಾತು, ಬರಹ ಅಥವ ಇನ್ನಾವುದೇ ಸನ್ನೆ, ಸಂಕೇತಗಳ ಮೂಲಕ- ಅವಮಾನಿಸುವ ಪ್ರಜ್ಞಾಪೂರ್ವಕ ದುಷ್ಕೃತ್ಯ. (3 ವರ್ಷಗಳ ವರೆಗಿನ ಸಜೆ/ದಂಡ ಅಥವ ಎರಡೂ).

ಐ.ಪಿ.ಸಿ. 324: ದೈಹಿಕವಾಗಿ ಘಾಸಿಗೊಳಿಸುವ ಉದ್ದೇಶದಿಂದ, ಸಾವಿಗೂ ಕಾರಣವಾಗಬಲ್ಲ ಮಾರಕಾಸ್ತ್ರಗಳನ್ನು (ಚಾಕು, ಕತ್ತಿ, ಬಂದೂಕು, ಬೆಂಕಿ/ಸುಡಬಲ್ಲ ರಾಸಾಯನಿಕಗಳು, ಕಾದ ವಸ್ತುಗಳು, ವಿಷ ಪದಾರ್ಥಗಳು, ರಕ್ತದಲ್ಲಿ ಸೇರುವ ಮೂಲಕ ಸಾವಿಗೆ ಕಾರಣವಾಗುವ ವಸ್ತುಗಳನ್ನು ಚುಚ್ಚುವುದು... ಇತ್ಯಾದಿ) ಬಳಸಿ ದೈಹಿಕ ಹಲ್ಲೆ ನಡೆಸುವುದು. (3 ವರ್ಷಗಳವರೆಗಿನ ಸಜೆ/ದಂಡ ಅಥವ ಎರಡೂ).

ಐ.ಪಿ.ಸಿ. 504: ಯಾವುದೇ ವ್ಯಕ್ತಿ ಅವಮಾನ ತಾಳಲಾರದೇ ಕೆರಳಿ ಶಾಂತಿಯನ್ನು ಕದಡುವ ಕೃತ್ಯಕ್ಕೆ ಕೈಹಾಕುತ್ತಾನೆ/ಹಾಕುತ್ತಾಳೆ ಎಂದು ಗೊತ್ತಿದ್ದೂ, ಅಂಥ ಕೃತ್ಯಕ್ಕೆ ಪ್ರಚೋದನೆ ನೀಡುವ ಏಕೈಕ ಉದ್ದೇಶದಿಂದ, ಆ ವ್ಯಕ್ತಿಯನ್ನು ಅವಮಾನಿಸುವ ಕೃತ್ಯ. (2 ವರ್ಷಗಳವರೆಗಿನ ಸಜೆ/ದಂಡ ಅಥವ ಎರಡೂ).


ವಿದ್ಯಾರ್ಥಿಯೊಬ್ಬನಿಗೆ ಮುಖ್ಯೋಪಾಧ್ಯಾಯರು ಒಂದು ಏಟು ಕೊಟ್ಟದ್ದಕ್ಕೆ ಕ್ರಿಮಿನಲ್ ಕಾಯ್ದೆಯ ಈ ಕಲಮುಗಳು! ಮಲ್ಪೆ ಪೊಲೀಸರ ಮೂರ್ಖತನ/ದೂರ್ತತನಕ್ಕೆ (ಅಯ್ಯೆ, ನಿಮ್ಮದು!) ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

ಈ ಪ್ರಕರಣದಲ್ಲಿ ಹಿಂದೂತ್ವ ಸಂಘಟನೆಗಳ ವರ್ತನೆಯಲ್ಲಿ ಆಶ್ಚರ್ಯಕರವಾದದ್ದು ಏನೂ ಇಲ್ಲ, ಕರಾವಳಿಯಲ್ಲಿ ಅವುಗಳಿಗೆ ಬಿಸಿನೆಸ್ ಸ್ವಲ್ಪ ಡಲ್ ಆಗಿತ್ತು, ಈ ಪ್ರಕರಣ ಅವರಿಗೆ ಲಾಟರಿ ಹೊಡೆದ ಹಾಗೆ ಅನಾಯಾಸವಾಗಿ ಒದಗಿಬಂತು. ಆದರೆ ಇಲ್ಲಿನ ಪೊಲೀಸರ ಮೆದುಳಿನಲ್ಲಿ ಏನಿದೆ? ಘಟನೆ ನಡೆದ 8 ದಿನಗಳ ಬಳಿಕ ಸಂಬಂಧಪಟ್ಟ ಶಿಕ್ಷಕರಿಗೆ ಜಾಮೀನು ಸಿಗುವುದು ಕೂಡ ಕಷ್ಟಕರವಾದ ಕ್ರಿಮಿನಲ್ ಕಲಮುಗಳ ಅಡಿ ಕೇಸು ಹಾಕಿರುವ ಮಲ್ಪೆ ಪೊಲೀಸರ ನಿಷ್ಠೆ ಇರುವುದು ಹಿಂದೂತ್ವವಾದಕ್ಕೆ ಹೊರತು ದೇಶದ ಕಾನೂನಿಗಲ್ಲ; ಪೊಲೀಸು ಸಮವಸ್ತ್ರಕ್ಕೆ ಇವರು ನಾಲಾಯಖ್! ಚಡ್ಡಿ-ಲಾಠಿಗೇ ಸೈ!

ದುರದೃಷ್ಟವಶಾತ್, ಈ ಮಾತನ್ನು ಉಡುಪಿಯ ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿಯವರ ಬಗೆಗೂ ಹೇಳಬೇಕಾಗಿದೆ. ಡಿಸೆಂಬರ್ 23 ರಂದು ಉಡುಪಿ ಜಿಲ್ಲೆಯ ಕ್ರೈಸ್ತ ಸಂಘಟನೆಗಳು, ದಸಂಸ. ಹಾಗೂ ಕರ್ನಾಟಕ ಕೋಮು ಸೌಹಾರ್ದ ವೇದಿಕೆಗಳು ಒಟ್ಟಾಗಿ ಉಡುಪಿ ಜಿಲ್ಲಾ ಎಸ್.ಪಿ.ಯವರಿಗೆ ಮನವಿ ಸಲ್ಲಿಸಿದವು. ಆ ಸಮಯದಲ್ಲಿ ಎಸ್.ಪಿ.ಯವರು ಆಡಿದ ದರ್ಪದ ಮಾತುಗಳು ಮಲ್ಪೆ ಪೊಲೀಸರ ದುಂಡಾವರ್ತಿಗೆ ಕುಮ್ಮಕ್ಕು ಕೊಡುವಂತಿದ್ದವು. ಮನವಿ ಕೊಟ್ಟವರ ಮಾತುಗಳನ್ನು ಆಲಿಸುವ ವ್ಯವಧಾನ ಕೂಡ ಅವರಿಗಿರಲಿಲ್ಲ, ನಮ್ಮ ಎಲ್ಲ ಅಹವಾಲುಗಳಿಗೆ ಅವರದ್ದು ಒಂದೇ ಉತ್ತರ- 'ಕೇಸು ಕೋರ್ಟಿನ ಮುಂದಿದೆ, ನಿಮ್ಮ ವಕೀಲರಿಗೆ ಈ ಪಾಯಿಂಟ್‌ಗಳನ್ನು ಹೇಳಿ, ಅವರು ವಾದಿಸುತ್ತಾರೆ.', 'ಹಾಗಾದರೆ ಪೊಲೀಸು ಠಾಣೆಗೆ ಯಾರೇ ಬಂದು ದೂರು ಕೊಟ್ಟರೂ ನೀವು ತಕ್ಷಣ ಇಂಥ ಕಠಿಣ ಕಲಮುಗಳಡಿ ಕೇಸು ಹಾಕುತ್ತೀರಾ?' ಎಂದು ನಾವು ಕೇಳಿದ್ದಕ್ಕೆ 'ನೋಡಿ ನಿಮಗೆ ನಮ್ಮ ಡಿಪಾರ್ಟ್‌ಮೆಂಟ್ ಪ್ರೊಸಿಜರ್ ಗೊತ್ತಿಲ್ಲ; ನಿಮ್ಮ ಲಾಯರ್ ಕೇಳಿ. ಪೆಟ್ಟು ತಿಂದ ಹುಡುಗನ ತಂದೆಯೇ ಬಂದು ದೂರು ಕೊಟ್ಟಿದ್ದಾರೆ.' ಮಾತುಕತೆಯಲ್ಲಿ ಅದುವರೆಗೂ ಮೌನವಾಗಿದ್ದ ದ.ಸಂ.ಸ. ನಾಯಕ ಜಯನ್ ಮಲ್ಪೆಯವರನ್ನು ಎಸ್.ಪಿ.ಯವರ ಮಾತು ಕೆರಳಿಸಿತು. 'ಆ ಹುಡುಗ ದಲಿತ. ಅವನ ತಂದೆ ತನಗೆ ವಿಷಯ ಏನೂ ಗೊತ್ತಿಲ್ಲ, ಒತ್ತಾಯದಲ್ಲಿ ತಮ್ಮಿಂದ ದೂರು ಕೊಡಿಸಿದ್ದಾರೆ ಎಂದು ನನ್ನ ಬಳಿ ಹೇಳಿದ್ದಾರೆ. ನೀವು ಪ್ರತಿ ತಿಂಗಳೂ ದಲಿತರಿಗೆ ಸಂಬಂಧಿಸಿದ ವಿಷಯ ಚರ್ಚಿಸಲು ನಮ್ಮನ್ನು ಫೋನ್ ಮಾಡಿ ಕರೆಸುತ್ತೀರಿ; ನಮ್ಮ ಫೋನ್ ನಂಬರುಗಳು ನಿಮ್ಮ ಬಳಿ ಇವೆ; ಈ ವಿಷಯದಲ್ಲಿ ಕೇಸು ಹಾಕುವ ಮೊದಲು ನಮ್ಮನ್ನೂ ಒಂದು ಮಾತು ಕೇಳಬೇಕು ಎಂದು ನಿಮಗೆ ಯಾಕೆ ಹೊಳೆಯಲಿಲ್ಲ? ಮಲ್ಪೆ ಪೊಲೀಸರು ಯಾರನ್ನು ಕೇಳಿ ಆ ಕಲಮುಗಳಡಿ ಕೇಸು ಹಾಕಿದರು? ಎಲ್ಲ ಕೋರ್ಟಿನಲ್ಲೇ ಕೇಳಬೇಕು ಎಂದರೆ ನೀವು ಇರುವುದು ಯಾತಕ್ಕೆ?' ಎಂದು ಜಯನ್ ಎಸ್.ಪಿ.ಯವರನ್ನು ತರಾಟೆಗೆ ತೆಗೆದುಕೊಂಡ ನಂತರ, ಗರಂ ಆಗಿ ಮಾತನಾಡುತ್ತಿದ್ದ ಎಸ್.ಪಿ. ಸಾಹೇಬರು ಥಂಡಾ ಹೊಡೆದದ್ದು ಕಣ್ಣಿಗೆ ಕಾಣುವಂತಿತ್ತು.

ಸದ್ಯಕ್ಕೆ ಪೌಲ್ ಲೋಬೊ ಹಾಗು ಮಾರ್ಸೆಲಿನ್ ಸೆರಾ ಅವರಿಗೆ ಜಾಮೀನು ಸಿಕ್ಕಿದೆ. ಈ ಮೊಕದ್ದಮೆಯಲ್ಲಿ ಅವರಿಗೆ ಶೀಘ್ರವಾಗಿ ನ್ಯಾಯ ದೊರೆಯದಿದ್ದರೆ, ದೀರ್ಘ ಹೋರಾಟವೊಂದಕ್ಕೆ ಉಡುಪಿಯ ಪ್ರಗತಿಪರ ಸಂಘಟನೆಗಳು ಅಣಿಯಾಗಬೇಕಿದೆ.

• ಜಿ.ರಾಜಶೇಖರ್, ಕೆ.ಫಣಿರಾಜ್



ವೇಶ್ಯೆಯರೊಂದಿಗೆ ಸಿಕ್ಕಿಬಿದ್ದ ರಘುವೀರ್

ಕೆಟ್ಟ ಕುಡಿತ, ವಿಲಕ್ಷಣ ನಡವಳಿಕೆಯಲ್ಲೇ ನೆಂದುಹೋಗಿರುವ ರಘುವೀರನ ತಲೆಗೆ ಈಗ ವೇಶ್ಯಾವಾಟಿಕೆ ನಡೆಸುತ್ತಿರುವ ಆರೋಪ ಅಂಟಿಕೊಂಡಿದೆ. ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದ, ಹಲವು ಹಿಟ್ ಚಿತ್ರಗಳನ್ನು ನೀಡಿದ, ಒಂದು ಪುಟ್ಟ ಸಂಸಾರವನ್ನು ಹೊಂದಿರುವ ರಘುವೀರನಿಗೆ ಇದೆಲ್ಲಾ ಬೇಕಿತ್ತಾ?

...ಬದಲಿಗೆ ಮತ್ತಷ್ಟು ಸುಕ್ಕುಗಟ್ಟಿ ನಿಂತಿದೆ.

ವಾರದ ಹಿಂದೆ ಮೈಸೂರಿನ ಲಷ್ಕರ್ ಠಾಣಾ ಪೊಲೀಸರು ರಘುವೀರನನ್ನು ವೇಶ್ಯಾವಾಟಿಕೆ ಆರೋಪದಡಿ ಬಂಧಿಸಿದ್ದರು. ಈ ಸುದ್ದಿ ಕೇಳಿ ಕೆಲವರು 'ರಘುವೀರ್ ಅಂಥವನಾ?' ಎಂದು ಅಚ್ಚರಿಪಟ್ಟರು. 'ಹಣಕ್ಕಾಗಿ ವೇಶ್ಯಾವಾಟಿಕೆ ನಡೆಸುವಷ್ಟು ರಘುವೀರ್ ಬರಗೆಟ್ಟುಹೋಗಿದ್ದಾನಾ?' ಎಂದೂ ಹಲವರು ಹುಬ್ಬೇರಿಸಿದ್ದರು.

...ಟಿ ರಘುವೀರ್ ಈಗ ವೇಶ್ಯಾವಾಟಿಕೆ ನಡೆಸುತ್ತಿ... ...ಆ ದಂಧೆಯಲ್ಲಿ ತೊಡಗಿದ್ದಕ್ಕೇ ಮೊನ್ನೆ ಮೈಸೂರಿನ ...ದರ ಕೈಗೆ ಸಿಕ್ಕಿಬಿದ್ದಿದ್ದಾನಾ? ಅಥವಾ ಆತನಿಗಾಗದ ... ಷಡ್ಯಂತ್ರ ರೂಪಿಸಿ ರಘುವೀರ್ ಕಂಬಿ ಎಣಿಸುವಂತೆ ...ದ್ದಾರಾ? ಯಾವುದು ಸತ್ಯ? ಆದರೆ ರಘುವೀರ್‌ನ ... ಕೆಟ್ಟುಕೆರ ಹಿಡಿದಿರುವುದಂತೂ ಸತ್ಯಾತಿಸತ್ಯ!

...ಘುವೀರ್ ಬೆಂಗಳೂರಿನ ಶ್ರೀಮಂತ ಬಿಲ್ಡರ್‌ಗಳಲ್ಲಿ ...ರ ಮುನಿಯಲ್ಲಪ್ಪ ಎಂಬುವವರ ಮಗ. ಚೌಡಯ್ಯ ...ರಿಯಲ್‌ಹಾಲ್, ಡಾ.ರಾಜ್ ಮನೆ ಸೇರಿದಂತೆ ...ರಿನ ಹಲವಾರು ಕಟ್ಟಡಗಳನ್ನು ನಿಂತು ಕಟ್ಟಿಸಿ ...ನೋಡಲು ಸ್ಫುರದ್ರೂಪಿಯಲ್ಲದಿದ್ದರೂ ಹಿಂದೊಮ್ಮೆ ...ಹಿಟ್ ಚಿತ್ರಗಳಲ್ಲಿ ಹೀರೋ ಆಗಿದ್ದವನು ರಘುವೀರ್. ...ಬ್ಬಳನ್ನು ಪ್ರೀತಿಸಿ ಮನೆಯವರ ವಿರೋಧದ ಎದುರೂ ... ಕೊಟ್ಟವಳ ಕೈಹಿಡಿದಿದ್ದವನು. ಆದರೆ ಆನಂತರ ...ರನ ಬದುಕು ಯಾವ ದುರಂತ ಚಿತ್ರಕ್ಕಿಂತ ...ಮಯವಾಗಿದ್ದು ಈಗ ಎಲ್ಲರಿಗೂ ಗೊತ್ತಿರುವ ...


... ರಘುವೀರ್‌ನ ಬದುಕು ಇವತ್ತಿಗೂ ನೆಟ್ಟಗಾಗಿಲ್ಲ.

ಅದಕ್ಕೆ ತಕ್ಕಂತೆ ಸ್ವತಃ ರಘುವೀರ್ ಆಡುತ್ತಿರುವ ಮಾತುಗಳು ಹುಚ್ಚುಚ್ಚಾಗಿವೆ. "ನಾನು ಮೈಸೂರು ರಸ್ತೆಯಲ್ಲಿ ಮಧ್ಯ ರಾತ್ರಿ ಪ್ರಯಾಣಿಸುತ್ತಿದ್ದೆ. ಆಗ ಒಬ್ಬರು ಲೇಡಿ ಬಂದು ನನ್ನ ಸಿನಿಮಾದಲ್ಲಿ ಛಾನ್ಸು ಕೊಡುವಂತೆ ರಿಕ್ವೆಸ್ಟ್ ಮಾಡಿದರು. ನಾನು ಮೈಸೂರಿಗೆ ಹೋಗುತ್ತಿರುವುದಾಗಿ ಹೇಳಿದೆ. ಆಗ ಆಕೆ ನನ್ನನ್ನು ಮೈಸೂರಿಗೆ ಡ್ರಾಪ್ ಮಾಡಿ ಎಂದಳು..." ಎಂದೆಲ್ಲಾ ಕಾಗಕ್ಕ ಗುಬ್ಬಕ್ಕನ ಕತೆ ಹೇಳುತ್ತಿರುವ ರಘುವೀರ್ ಏನೋ ಅಪರತಪರ ಮಾಡಿದ್ದಾನೆ ಎಂಬುದನ್ನು ಸಾಬೀತುಪಡಿಸುತ್ತಿದ್ದಾನೆ.

ರಘುವೀರ್ ಹಿಟ್ ಸಿನಿಮಾ ಒಂದರಲ್ಲಿ ನಟಿಸಿ ಹಲವಾರು ವರ್ಷಗಳೇ ಆಗಿಹೋಗಿವೆ. ಆದರೆ ಇತ್ತೀಚೆಗೆ ಸಿನಿಮಾವನ್ನು ಆರಂಭಿಸುವುದು, ಅದರಲ್ಲಿ ಒಂದಷ್ಟು ಜನ ಹುಡುಗಿಯರಿಗೆ ಛಾನ್ಸು ಕೊಡುವುದಾಗಿ ಹೇಳುವುದು, ಆದರೆ ಮುಹೂರ್ತದ ನಂತರ ಸಿನಿಮಾವನ್ನು ನಿಲ್ಲಿಸುವುದು ಆತನಿಗೆ ಕರಗತವಾಗಿಬಿಟ್ಟಿದೆ.

ಸುಮಾರು ಒಂದೂವರೆ ವರ್ಷಗಳ ಹಿಂದೆ ರಘುವೀರ್ 'ಈ ಪ್ರೀತಿ ಯಾರಿಗಾಗಿ' ಎಂಬ ಸಿನಿಮಾವನ್ನು ಆರಂಭಿಸಿದ್ದ. "ಚಿತ್ರದ ಕಥೆ ನನ್ನದೇ. ನನ್ನ ಜೀವನದಲ್ಲಿ ನಡೆದ ಕಥೆಗೇ ಸಿನಿಮಾ ರೂಪ ಕೊಡುತ್ತಿದ್ದೀನಿ. ಮ್ಯೂಜಿಕನ್ನೂ ನಾನೇ ಮಾಡುತ್ತಿದ್ದೀನಿ" ಎಂದೆಲ್ಲಾ ಬೂಸಿ ಬಿಟ್ಟಿದ್ದ. ಆದರೆ ಅಸಲಿಗೆ ಈ ಚಿತ್ರದ ಕಥೆಯನ್ನು ಪೂರಿ ಜಗನ್ನಾಥ್ ಬಳಿ ಅಸೋಸಿಯೇಟ್ ಆಗಿರುವ ಶ್ರಾವಣ್‌ರಾಜ್ ಎಂಬಾತನಿಂದ ತರಲಾಗಿತ್ತು.

ಕಾಂಜಿಪಿಂಜಿ ಸಿನಿಮಾಗಳಲ್ಲಿ ಚಿಲ್ಲರೆ ಪಾತ್ರಗಳಲ್ಲಿ ನಟಿಸುವ ಸ್ವಾತಿ ಎಂಬ ಹುಡುಗಿಯನ್ನು ಕರೆದುಕೊಂಡು ಬಂದ ರಘುವೀರ್ "ಈಕೆಯನ್ನೇ ಹೀರೋಯಿನ್ ಮಾಡಿ" ಎಂದು ನಿರ್ಮಾಪಕ ಉದ್ಯಮಿ ನವೀನ್ ಕುಮಾರ್ ಅವರಿಗೆ ಗಂಟು ಬಿದ್ದ. ಜೂನಿಯರ್ ಆರ್ಟಿಸ್ಟ್ ಒಬ್ಬಳನ್ನು ಕರೆತಂದು ಆಕೆಯನ್ನೇ ನಾಯಕಿಯನ್ನಾಗಿ ಮಾಡಿ ಎಂದು ಹಠ ಹಿಡಿದಿದ್ದ ರಘವೀರನ ಅಂದಿನ ನಡವಳಿಕೆ ಎಲ್ಲರಲ್ಲೂ ಅನುಮಾನ ಹುಟ್ಟಿಸಿತ್ತು. ಸ್ವಾತಿಯನ್ನು ಹೀರೋಯಿನ್ನಾಗಿ ಮಾಡಿದರೆ ಸಿನಿಮಾವನ್ನು ಯಾರೂ ನೋಡಲ್ಲ ಎಂಬುದು ನಿರ್ಮಾಪಕ ನವೀನ್ ಕುಮಾರ್ ಅವರ ನಿಲುವಾಗಿತ್ತು.



ಆದರೆ ಅದಕ್ಕೆ ಒಪ್ಪದ ರಘುವೀರ್ ತನ್ನ ತಕರಾರನ್ನು ಮುಂದುವರೆಸಿದ್ದ. ಒಂದು ದಿನ ಕುಡಿದ ಮತ್ತಿನಲ್ಲಿ ನವೀನ್ ಕುಮಾರ್‌ಗೆ ಫೋನು ಮಾಡಿದ ರಘುವೀರ್ ಅವರನ್ನು ಕೆಟ್ಟಾಕೊಳ ಬೈದಿದ್ದ. ಆರಂಭದಲ್ಲೇ ಈಪಾಟಿ ಕಿರಿಕ್ಕು ಮಾಡುತ್ತಿರುವ ರಘುವೀರನನ್ನು ನಂಬಿ ಸಿನಿಮಾ ಮಾಡಿದರೆ ನಂತರ ಅಕ್ಷರಶಃ ಹುಚ್ಚನಾಗಿಬಿಡುತ್ತಾನೆ. ಪ್ರತಿ ದಿನ ಕಂಠಮಟ್ಟ ಕುಡಿದು ಚಿತ್ತಾಗುವ ಈತನಿಗೆ ಯಾರಾದರೂ ಸಂಜೆಯಾದ ಮೇಲೆ ಫೋನು ಮಾಡಿದರಂತೂ ಅವರ ಕತೆ ಮುಗಿದಂತೆಯೇ. "ನನಗೆ ಬಾಬಾನನ್ನು ನೋಡಬೇಕು ಅನ್ನಿಸಿಬಿಟ್ಟಿದೆ. ಅದಕ್ಕೇ ನಾನು ಶಿರಡಿಗೆ ಹೋಗ್ತಾ ಇದ್ದೀನಿ" ಎಂದು ಶುರು ಮಾಡುವ ರಘುವೀರ್ 'ಬಾಬಾ' ಬಗ್ಗೆ ಬಡಬಡಾಯಿಸುವ ಪೂರ್ತಾ ಹರಿಕಥೆಯನ್ನು ಮುಗಿಸುವ ತನಕ ಈ ಕಡೆಯಿರುವವರು ಫೋನಿಡುವ ಹಾಗಿಲ್ಲ. ತಲೆಕೆಟ್ಟು ಲೈನ್ ಕಟ್ ಮಾಡಿದರೆ ಅವರ ಕತೆ ಮುಗಿದಂತೆಯೇ. ಮತ್ತೆ ಫೋನ್ ಮಾಡುವ ರಘುವೀರ್ ಕೇಳಲು ಸಾಧ್ಯವಾಗದ ಬೈಗುಳಗಳನ್ನು ಉದುರಿಸಿ ಹಿಂಸೆ ಕೊಡುತ್ತಾನೆ.

ಒಮ್ಮೆ ಈತ ಇಂತಹ ಕುಡಿದ ಮತ್ತಿನಲ್ಲಿದ್ದಾಗಲೇ ಯಾರೋ ಒಬ್ಬರು "ಎಸ್. ನಾರಾಯಣ್ ನಿಮ್ಮ ಗುರು ಅಲ್ವೇ?" ಎಂದುಬಿಟ್ಟಿದ್ದರು. ತಕ್ಷಣ ಬ್ರೇಕ್‌ಫೇಲ್ಯೂರ್ ಆದ ಲಾರಿಯಂತೆ ಮೈಮೇಲೆರಗಿದ ರಘು "ಯಾವನ್ರೀ ಅವ್ನು ನಾರಾಯಣ? ನನಗೆ ಅವನು ಗುರು ಅಲ್ಲ; ನಾನೇ ಅವನಿಗೆ ಗುರು. ನಾನು ಅವನನ್ನು ಕರೆದು 'ಚೈತ್ರದ ಪ್ರೇಮಾಂಜಲಿ'ಯನ್ನು ನಿರ್ದೇಶಿಸಲು ಅವಕಾಶ ಕೊಡದೇ ಇದ್ದಿದ್ದರೆ ಅವನನ್ನು ಯಾರ್ರೀ ಮೂಸುತ್ತಿದ್ದರು" ಎಂದೆಲ್ಲ ಎಗರಾಡಿದ್ದ ಈ ಹುಚ್ಚ.

ಕೆಟ್ಟ ಕುಡಿತ, ವಿಲಕ್ಷಣ ನಡವಳಿಕೆಯಲ್ಲೇ ನೆಂದುಹೋಗಿರುವ ರಘುವೀರನ ತಲೆಗೆ ಈಗ ವೇಶ್ಯಾವಾಟಿಕೆ ನಡೆಸುತ್ತಿರುವ ಆರೋಪ ಅಂಟಿಕೊಂಡಿದೆ.

ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದ, ಹಲವು ಹಿಟ್ ಚಿತ್ರಗಳನ್ನು ನೀಡಿದ, ಒಂದು ಪುಟ್ಟ ಸಂಸಾರವನ್ನು ಹೊಂದಿರುವ ರಘುವೀರನಿಗೆ ಇದೆಲ್ಲಾ ಬೇಕಿತ್ತಾ?

• ಅರುಣ್ ಕುಮಾರ್.ಜಿ

...ಕಾಸು ಕೊಟ್ಟು ಕಾಲ್‌ಗರ್ಲ್‌ಗಳನ್ನು ಕರೆದೊಯ್ದ!

...ರಘುವೀರ್ ಪುಂಖಾನುಪುಂಖವಾಗಿ ಕಥೆ ...ವುದನ್ನು ನೋಡಿದವರು 'ಚ್ಚಚ್ಚಚ್ಚಚ್ಚೇ.. ಪಾಪದ ...ನ್ನು ವೇಶ್ಯಾಜಾಲಕ್ಕೆ ಸಿಕ್ಕಿಸಿಬಿಟ್ಟಿದ್ದಾರೆ...' ಎಂದು ... ತೋರಿ ಲೊಚಗುಟ್ಟುತ್ತಿದ್ದಾರೆ.

...ದರೆ, ರಘುವೀರನ ಅಸಲಿಯತ್ತುಗಳು, ವಿಕೃತ ...ಟಗಳೇ ಬೇರೆ ಇವೆ...

...ನನ್ನ ಪಾಡಿಗೆ ಹೊಟೇಲಿನ ರಿಸೆಪ್ಷನ್ನಿನಲ್ಲಿ ...ದ್ದವನನ್ನು ಪೊಲೀಸರು ...ಬಿಟ್ಟರು" ಎಂದು ...ಮೋರೆ ಹಾಕಿ ...ಡುವ ರಘುವೀರ್ ...ಂದು ಗಬ್ಬೆದ್ದು ...ದ್ದಾನೆ ಎಂದು ...ೂ ಎಣಿಸಿರಲಿಲ್ಲ.

...3ನೇ ತಾರೀಖಿನಂದು ...ರಿಗೆ ಹೊರಟುನಿಂತ ...ವೀರ್ ಕಾಸು ಕೊಟ್ಟರೆ ...ಗೆ ಬಂದು ಕೇಳಿದ್ದನ್ನೆಲ್ಲಾ ...ವ ಇಬ್ಬರು ಕಾಲ್‌ಗರ್ಲ್ ... ಬುಕ್ ಮಾಡಿಕೊಂಡ. ...ಡಿ ರಸ್ತೆಯ ಮಹದೇಶ್ವರ ನಗರದ ಗೀತಪ್ರಿಯಾ ... ಜೆ.ಪಿ. ನಗರದ ಪೂರ್ಣಿಮಾ ಎಂಬ ...ಗಿಯರಿಬ್ಬರು. ತಮ್ಮದೇ ಕಾಂಟ್ಯಾಕ್ಟು, ನೆಟ್‌ವರ್ಕುಗಳ ...ಲಕ ದಿನಪೂರ್ತಿ ಬಿಜಿನೆಸ್ಸು ಮಾಡುವ ಫುಲ್‌ಟೈಂ ...ರ್ಕರ್ ಹೆಣ್ಣುಮಕ್ಕಳವರು. ಈ ಇಬ್ಬರಿಗೂ ತಲಾ ...ಸುಮಾರು ಸಾವಿರ ರೂಪಾಯಿಗಳ ಪೇಮೆಂಟು ...ದ್ದಾನೆ ರಘುವೀರ್.

...ನ್ನ ಕಾರಿನಲ್ಲಿ ಹುಡುಗಿಯರನ್ನು ಕೂರಿಸಿಕೊಂಡು ...ರಿಗೆ ಹೋದ ರಘುವೀರ್ ಶೆಟ್ಟಿ ಎಂಬಾತನ ಒಡೆತನದ ಅಭಿಷೇಕ್ ಲಾಡ್ಜಿನಲ್ಲಿ 105 ಮತ್ತು 106ನೇ ನಂಬರಿನ ರೂಮುಗಳನ್ನು ಬುಕ್ ಮಾಡಿದ್ದಾನೆ. "ಸಿನಿಮಾ ಶೂಟಿಂಗ್‌ಗಾಗಿ ಬಂದಿದ್ದೇವೆ" ಎಂದು ರಘುವೀರ್ ಹೇಳಿದ್ದರಿಂದ ಲಾಡ್ಜ್‌ನವರು ಸಲೀಸಾಗಿ ರೂಮುಗಳ ಕೀಲಿ ಕೊಟ್ಟು ಕೃತಾರ್ಥರಾಗಿದ್ದಾರೆ.

ಮೈಸೂರಿಗೆ ಹೋಗುವಾಗ ಬಿಡದಿ ಬಳಿ ಮಿಲ್ಟ್ರಿ ಹೋಟೆಲ್ ನಡೆಸುವ ತನ್ನ ಸ್ನೇಹಿತ ಶಂಕರ ಮತ್ತು ರಾಮಮೂರ್ತಿ ಎಂಬಿಬ್ಬರನ್ನೂ ತನ್ನೊಂದಿಗೆ ರಘುವೀರ್ ಕರೆದುಕೊಂಡು ಹೋಗಿದ್ದಾನೆ. ಅಭಿಷೇಕ್ ಲಾಡ್ಜಿಗೆ ಹೋದ ನಂತರ ಎಲ್ಲರೂ ಕಂಠಮಟ್ಟ ಕುಡಿದಿದ್ದಾರೆ. ರೂಮ್ ನಂ. 105ರಲ್ಲಿ ಶಂಕರ, ರಾಮಮೂರ್ತಿ ಮತ್ತು ಮಾಗಡಿ ರೋಡ್ ಗೀತಾ ಉಳಿದುಕೊಂಡಿದ್ದಾರೆ. ಮತ್ತೊಂದು ರೂಮಿನಲ್ಲಿ ಪೂರ್ಣಿಮಾ ಮತ್ತು ರಘುವೀರ್ ತಂಗಿದ್ದಾರೆ.



ಪೂರ್ಣಿಮಾ

ರಘುವೀರ್‌ಗೆ ನಿಶೆ ಏರಿದರೆ ಸಿಕ್ಕವರಿಗೆ ಫೋನ್ ಮಾಡಿ ಅವರ ತಲೆ ತಿನ್ನುವುದು ಅಥವಾ ಅವರನ್ನು ಕರೆಸಿಕೊಂಡು ತನ್ನ ಹುಚ್ಚಾಟಗಳನ್ನು ತೋರಿಸುವ ವಿಕೃತಿ ಬೇರೆ ಇದೆಯಲ್ಲಾ? ಹೀಗಾಗಿ ಮೈಸೂರಿನಲ್ಲಿ 'ಶ್ರೀ ಕ್ಯಾಟರಿಂಗ್' ಸರ್ವೀಸ್ ಹೊಂದಿರುವ, ಜೊತೆಗೆ ಸಿನಿಮಾಗಳಲ್ಲಿ ಸಣ್ಣಪುಟ್ಟ ರೋಲ್‌ಗಳನ್ನು ಮಾಡುವ ಶ್ರೀಧರಮೂರ್ತಿ ಎಂಬಾತನನ್ನು ಹನ್ನೆರಡೂವರೆ ಸುಮಾರಿಗೆ ರಘುವೀರ್ ಕರೆದಿದ್ದಾನೆ. ಶ್ರೀಧರಮೂರ್ತಿ ಬಂದಮೇಲೆ ಇಬ್ಬರೂ ಮತ್ತೊಂದು ಸುತ್ತು ಕುಡಿದಿದ್ದಾರೆ. ಕುಡಿದು ಟೈಟಾದ ಶ್ರೀಧರ 'ಪೂರ್ಣಿಮಾಳನ್ನು ನನ್ನೊಂದಿಗೆ ಕಳಿಸು' ಎಂದು ಹಠ ಹಿಡಿದಿದ್ದಾನೆ. ಇದರ ಬಗ್ಗೆ ರಘುವೀರ್ ಮತ್ತು ಶ್ರೀಧರನ ನಡುವೆ ರಂಪ ಶುರುವಾಗಿದೆ. ಆಗ ಶ್ರೀಧರ 'ಏನು ಮಾಡ್ತೀನಿ ನೋಡು..' ಎಂದು ಅಬ್ಬರಿಸಿದ್ದಾನೆ.

ಮಧ್ಯರಾತ್ರಿ 1.30ರ ಸಮಯದಲ್ಲಿ ಲಾಡ್ಜಿನಿಂದ ಹೊರಬಿದ್ದ ಅತೃಪ್ತ ಶ್ರೀಧರ ಕೂಡಲೇ ಮೈಸೂರು ಪೊಲೀಸ್ ಕಂಟ್ರೋಲ್ ರೂಂಗೆ ಫೋನ್ ಮಾಡಿ 'ಚಿತ್ರನಟ ರಘುವೀರ್ ಮತ್ತು ಆತನ ಸ್ನೇಹಿತರು ಅಭಿಷೇಕ್ ಲಾಡ್ಜಿನಲ್ಲಿ ಹುಡುಗಿಯರಿಬ್ಬರನ್ನು ರೇಪ್ ಮಾಡುತ್ತಿದ್ದಾರೆ' ಎಂದು ಹೇಳಿದ್ದಾನೆ. ಮೈಸೂರಿನ ಹಲವು ಮಾಧ್ಯಮದವರೊಂದಿಗೆ ನಂಟನ್ನೂ ಹೊಂದಿರುವ ಶ್ರೀಧರ ಅದೇ ವಿಚಾರವನ್ನು ಕೆಲ ವರದಿಗಾರರ ಕಿವಿಗೂ ಮುಟ್ಟಿಸಿದ್ದಾನೆ.



ಮಾಗಡಿ ರೋಡ್ ಗೀತಾ

ತಕ್ಷಣ ಕಂಟ್ರೋಲ್ ರೂಮ್‌ನಿಂದ ನಜರ್‌ಬಾದ್ ಸ್ಟೇಷನ್ನಿಗೆ ಸಂದೇಶ ರವಾನೆಯಾಗಿದೆ. ನೈಟ್‌ರೌಂಡ್ಸ್‌ನಲ್ಲಿದ್ದ ಇನ್ಸ್‌ಪೆಕ್ಟರ್ ಪೂವಯ್ಯ ಅಭಿಷೇಕ್ ಲಾಡ್ಜ್ ಬಳಿ ಬಂದಿದ್ದಾರೆ. ಆದರೆ ಅದು ಲಷ್ಕರ್ ಠಾಣಾ ಲಿಮಿಟ್ಸ್‌ಗೆ ಬರುತ್ತಾದ್ದರಿಂದ ಲಷ್ಕರ್ ಇನ್ಸ್‌ಪೆಕ್ಟರ್ ರಾಜಣ್ಣರಿಗೆ ತಿಳಿಸಿದ್ದಾರೆ.

'ಶ್ರೀಧರ ಮೂರ್ತಿ ಏನಾದರೂ ಕಿತಾಪತಿ ಮಾಡೇ ತೀರುತ್ತಾನೆ. ಇಲ್ಲೇ ಇದ್ದರೆ ಏನೋ ಎಡವಟ್ಟಾಗುತ್ತೆ' ಎಂಬ ಭಯಕ್ಕೆ ಬಿದ್ದ ರಘುವೀರ್ ಇನ್ನೇನು ಪೊಲೀಸರು ರೇಡ್ ಬೀಳುವ ಹೊತ್ತಿಗೆ ರೂಮ್ ಖಾಲಿ ಮಾಡಿಕೊಂಡು ರಿಸೆಪ್ಷನ್ನಿಗೆ ಬಂದಿದ್ದಾನೆ. ಅಷ್ಟೊತ್ತಿಗೆ ಪೊಲೀಸರು ಲಾಡ್ಜಿಗೆ ಎಂಟ್ರಿ ಕೊಟ್ಟಿದ್ದಾರೆ. ಸೀದಾ ರೂಮ್ ನಂ. 105 ಮತ್ತು 106ರ ಮೇಲೆ ದಾಳಿ ಮಾಡಿ ಅಲ್ಲಿದ್ದ ಶಂಕರ, ರಾಮಮೂರ್ತಿ, ಗೀತಪ್ರಿಯಾ ಮತ್ತು ಪೂರ್ಣಿಮಾರನ್ನು ಅರೆಸ್ಟ್ ಮಾಡಿದ್ದಾರೆ.


ಆಗ ರಘುವೀರ್ ಕೂಡಾ ಅಲ್ಲೇ ಇರುವುದು ಪೊಲೀಸರಿಗೆ ಗೊತ್ತಾಗಿದೆ. 'ನಾನು ಸಿನಿಮಾ ಹೀರೋ ಕಣ್ರೀ, ನನ್ನನ್ನು ಬಿಡ್ರೀ' ಎಂದು ಪಿವೋಟು ರಘುವೀರ್ ಅರಚಾಡುತ್ತಿದ್ದರೂ ಪೊಲೀಸರು ಥೇಟು ಬೀದಿನಾಯಿಯನ್ನು ಹಿಡಿದೊಯ್ಯುವಂತೆ ರಘುವೀರ್ ಮತ್ತು ಆತನ ಸಖಿಯರು, ಗೆಳೆಕಾರರನ್ನು ವ್ಯಾನಿಗೆ ತುಂಬಿಕೊಂಡು ಹೋಗಿದ್ದಾರೆ...

ಮೈಸೂರಿನ ಲಾಡ್ಜುಗಳಲ್ಲಿ ಇಂಥವೆಲ್ಲಾ ಸಾಮಾನ್ಯವೇ. ಆದರೆ ನಟ ರಘುವೀರ್ ಇದರಲ್ಲಿ ಇದ್ದದ್ದರಿಂದ ಇದನ್ನು ದೊಡ್ಡದಾಗಿಸುವುದು ಬೇಡ ಎಂದು ಡಿಸಿಪಿ ಅರವಿಂದ ಮಾಲಗತ್ತಿ ಪ್ರಕರಣವನ್ನು ಸ್ವಿಚ್‌ಆಫ್ ಮಾಡೋ ಹೊತ್ತಿಗೆ ರಘುವೀರನ ಸುದ್ದಿ ಚಾನೆಲ್ಲುಗಳಲ್ಲಿ ಹರಾಜಾಗಿತ್ತು.

ವರ್ಷಾನುಗಟ್ಟಲೆಯಿಂದ ಇದೇ ರೀತಿ ದೋಚು, ಮಜಾ ಮಾಡಿಕೊಂಡು ಚಿಲ್ಲರೆ ಶೋಕಿ ಮಾಡುತ್ತಿದ್ದ ರಘುವೀರ್ ತನ್ನ ಚಂಗಾಟ ಯಾರಿಗೂ ಗೊತ್ತಾಗುವುದಿಲ್ಲ ಎಂದೇ ಭಾವಿಸಿದ್ದ. ಆದರೆ ಆತನ ನಸೀಬು ಈ ಬಾರಿ ಕೈಕೊಟ್ಟಿತು. ಹೀಗಾಗಿ ರಂಗೀಲಾ ಆಟವಾಡಲು ಹೋಗಿ ರಘುವೀರ್ ರಂಗಾಲಿಗೆ ಸಿಲುಕಿಕೊಂಡು ಮಾನಗೆಟ್ಟ ನಂತಾಗಿದ್ದಾನೆ.

'ಸಾಮರಸ್ಯ ಉಳೀಬೇಕಾದ್ರೆ ಬಿಜೆಪಿ ತೊಲಗಬೇಕು'

-ಮಹೇಂದ್ರ ಕುಮಾರ್



ಭಜರಂಗದಳವೆಂಬ ಮತೀಯ ಸಂಘಟನೆಯ ರಾಜ್ಯ ಸಂಚಾಲಕನಾಗಿದ್ದಾತ ಮಹೇಂದ್ರ ಕುಮಾರ್. ಆ ಸಂಘಟನೆಯ ಆಂತರ್ಯಕ್ಕೆ ತಕ್ಕುದಾಗಿ ಮುಂದುವರೆಯುತ್ತಾ ಬಂದಿದ್ದ ಆತ ಇದೀಗ ತನ್ನ ಮೂಲ ಸಿದ್ಧಾಂತಗಳಿಗೆ ತದ್ವಿರುದ್ಧವಾದ ಜಾತ್ಯತೀತ ಜನತಾದಳದತ್ತ ಮುಖ ಮಾಡಿದ್ದಾರೆ. ಇದು ಒಂದು ವ್ಯಕ್ತಿತ್ವದ ಬದಲಾವಣೆ ಅಷ್ಟೇ ಅಲ್ಲ; ಒಂದಿಡೀ ಸಿದ್ಧಾಂತದ ಪಲ್ಲಟ. ಆ ಭೂಮಿಕೆಯಲ್ಲೇ ಮಹೇಂದ್ರ ಕುಮಾರ್‌ರೊಂದಿಗೆ ನಡೆಸಿದ ಸಂದರ್ಶನದ ವಿವರ ಇಲ್ಲಿದೆ.....

** ಹಿಂದುತ್ವ ಅಜೆಂಡಾಗಳಿಗೆ ಬದ್ಧರಾಗಿದ್ದ ನೀವು ಅವಕ್ಕೆ ತದ್ವಿರುದ್ಧವಾದ ಜೆಡಿಎಸ್‌ನತ್ತ ಮುಖ ಮಾಡಲು ಕಾರಣ?*

ನಾನು ನಂಬಿಹೋಗಿದ್ದು ಪ್ರಾಮಾಣಿಕ ಹಿಂದೂತ್ವವನ್ನು. ಆದರೆ ಅಲ್ಲಿದ್ದದ್ದು ರಾಜಕೀಯ ಪ್ರೇರಿತವಾದದ್ದು ಅಂತ ಕ್ರಮೇಣ ಗೊತ್ತಾಯಿತು. ದತ್ತಪೀಠ, ಗೋಹತ್ಯೆ ನಿಷೇಧ ಇವೆಲ್ಲ ಮತಪ್ರಣೀತ ರಾಜಕೀಯ ಹಿಂದೂತ್ವದ ಭಾಗಗಳೇ ಅಂತಲೂ ಅರಿವಾಯ್ತು. ಆದರೆ ನಿಜವಾದ ಹಿಂದೂತ್ವ ಜನಸಾಮಾನ್ಯರ ಜೀವನದಲ್ಲಿ ತಂತಾನೇ ಹಾಸುಹೊಕ್ಕಾಗಿದೆ. ಅದು ಪ್ರಾಮಾಣಿಕ ಹಿಂದೂತ್ವ......

** ಪ್ರಾಮಾಣಿಕ ಹಿಂದೂತ್ವ ಅಂದ್ರೆ?!*

ಒಬ್ಬ ದಲಿತ ಹಿಂದೂ ಆಗಿಯೇ ಉಳಿತಾನಂದ್ರೆ ಅದು ಆತನ ಪ್ರಾಮಾಣಿಕ ನಂಬಿಕೆ. ಆತನಿಗೆ ವೇದ, ಉಪನಿಷತ್ತುಗಳು ಬೇಕಿಲ್ಲ, ಆದರ ನಡುವಲ್ಲಿಯೂ ಈ ಆಚಾರವಿಚಾರಗಳಿಗೆ ತಕ್ಕುದಾಗಿ ನಡೀತಾನಲ್ಲ? ಅದೇ ಪ್ರಾಮಾಣಿಕ ಹಿಂದೂತ್ವ.

** ಅಂಥ 'ಪ್ರಾಮಾಣಿಕ ಹಿಂದೂತ್ವ'ಕ್ಕೆ ಅನ್ಯಧರ್ಮೀಯರಿಂದ ಯಾವ ರೀತಿ ತೊಂದರೆಯಾಗಿದೆ?*

ಮುಸ್ಲಿಂ-ಕ್ರಿಶ್ಚಿಯನ್ ಸಮುದಾಯದಲ್ಲಿರುವ ಮುಗ್ಧತೆಯ ಕಾರಣದಿಂದ ಕೆಲವಾರು ತೊಂದರೆಗಳಾಗಬಹುದು. ಇಂಥ ಮುಗ್ಧತೆಯನ್ನು ಮತೀಯ ಶಕ್ತಿಗಳು ಉಪಯೋಗಿಸಿಕೊಳ್ಳುತ್ತಿವೆ. ಈ ರೀತಿಯ ಮುಗ್ಧತೆ ಮತ್ತು ನ್ಯೂನತೆಗಳು ಮುಸ್ಲಿಂ-ಕ್ರಿಶ್ಚಿಯನ್ನರಲ್ಲಿ ಮಾತ್ರವಲ್ಲ, ಹಿಂದೂಗಳಲ್ಲೂ ಇದೆ. ಇದನ್ನು ಆಗಿನಿಂದಲೂ ವಿರೋಧಿಸಿಕೊಂಡೇ ಬಂದಿದ್ದೇನೆ. ಎಲ್ಲಾ ಧರ್ಮಗಳೂ ಒಂದಾಗುವಂಥ ವಾತಾವರಣ ನಿರ್ಮಿಸಬೇಕೆಂಬುದು ನನ್ನ ಗುರಿ. ಆದರೆ ಈ ಬಿಜೆಪಿ ಅದಕ್ಕೆ ಕಂಟಕವಾಗಿದೆ. ಇದನ್ನ ತೊಲಗಿಸುವುದೊಂದೇ ಧರ್ಮ-ಧರ್ಮಗಳ ಬೆಸುಗೆಗೆ ದಾರಿ.... ನಾನೂ ಕೂಡಾ ಮೊದಲು ಭಾರತೀಯ, ಆಮೇಲೆ ಹಿಂದೂ. ಈ ಮನೋಭಾವ ಎಲ್ಲಾ ಧರ್ಮೀಯರಲ್ಲೂ ಮನೆ ಮಾಡಬೇಕಿದೆ.

** ಭಜರಂಗದಳದಲ್ಲಿದ್ದಾಗ ಆರೆಸ್ಸೆಸ್ ಪ್ರಚೋದನೆ ಹೇಗಿತ್ತು?*

ಈಗಲೇ ಬೇಡ. ಮುಂದಿನ ದಿನಗಳಲ್ಲಿ ಆ ಬಗ್ಗೆ ತುಂಬಾ ಮಾತಾಡೋದಿದೆ.

** ನಿಮಗೀಗ ಮತೀಯವಾದ ತಪ್ಪು ಅನ್ನಿಸಿ ಹೊರ ಬಂದಿದ್ದೀರಿ. ಆದರೆ ಒಳಗಿರೋರನ್ನ ಹೇಗೆ ಪಾರು ಮಾಡ್ತೀರಿ?*

ನನಗೆ ನನ್ನ ಬಗ್ಗೆ ವಿಶ್ವಾಸವಿದೆ. ಅವರೆಲ್ಲರೊಳಗೂ ಪರಿವರ್ತನೆ ಆಗುತ್ತದೆಂಬ ಭರವಸೆಯೂ ಇದೆ. ಈಗ ಭಜರಂಗದಳದೊಳಗಿರೋ ಅನೇಕ ಕಾರ್ಯಕರ್ತರು ಕೆಟ್ಟೋರಲ್ಲ, ರಾಜಕೀಯ ಹಿಂದೂತ್ವವನ್ನು ತ್ಯಜಿಸಿ ಹೋರಾಟವನ್ನು ಸಮಾಜಮುಖಿಯಾಗಿಸಬಲ್ಲ ಮನಸ್ಥಿತಿ ಅವರಲ್ಲಿದೆ.

ನಾನೂ ಆ ರೀತಿಯ ಮನಸ್ಥಿತಿಯಿಂದಲೇ ದಳದತ್ತ ಮುಖ ಮಾಡಿದ್ದೇನೆ. ನನಗೆ ರಾಜಕೀಯ ಅಧಿಕಾರದಲ್ಲಿ ಅಂಥಾ ಆಸಕ್ತಿಯಿಲ್ಲ, ಆದರೆ ಬಿಜೆಪಿ ರಾಜಕೀಯ ಶಕ್ತಿಯಾಗಿ ಬೆಳೆದಿರುವುದರಿಂದ ಅದನ್ನು ಬಗ್ಗುಬಡಿಯಲು ಇದು ಅನಿವಾರ್ಯ ಮಾರ್ಗ. ಜೊತೆಗೆ ಜೆಡಿಎಸ್ ನಾಯಕರ ಬಗೆಗೂ ನನಗೆ ವಿಶ್ವಾಸವಿದೆ.

** ಬಿಜೆಪಿ ವಿರುದ್ಧ ಯಾತಕ್ಕಾಗಿ ಹೋರಾಟ.....?*

ಬಿಜೆಪಿ ಜನರ ಭಾವನೆಗಳ ಜೊತೆಗೆ ಚೆಲ್ಲಾಟವಾಡುತ್ತಿವೆ. ಸಂಸ್ಕೃತಿಯನ್ನು ಉದ್ಧಾರವಾಗಿಸೋ ನೆಪದಲ್ಲಿ ಅದನ್ನು ಕೊಂದು ಹಾಕುತ್ತಿದೆ. ಮಹಿಳೆಯರನ್ನು 'ಮಾತೆಯರು' ಅಂತೆಲ್ಲಾ ಹೇಳಿಕೊಳ್ಳುವ, ಗೌರವಿಸುವಂತೆ ತೋರಿಸಿಕೊಳ್ಳುವ ಬಿಜೆಪಿ ಜನ ತಮ್ಮ ಸಚಿವ ಸಂಪುಟದಲ್ಲಿ ಅತ್ಯಾಚಾರಿಯೊಬ್ಬನಿಗೆ ಸ್ಥಾನ ಕೊಟ್ಟಿರುವುದು ಅವರ ಮನಸ್ಥಿತಿಗೆ ಹಿಡಿದ ಕನ್ನಡಿ. ಇವರು ರಾಜಕೀಯವನ್ನು ವ್ಯವಹಾರ ಮಾಡಿಕೊಂಡಿದ್ದಾರೆ. ಇಂಥದ್ದರ ವಿರುದ್ಧವೇ ನನ್ನ ಹೋರಾಟ.....

** ಈಗ ಧರ್ಮಗಳನ್ನ ಬೆಸೆಯೋ ಮಾತಾಡ್ತಿದ್ದೀರಿ. ಆದರೆ ಚರ್ಚ್ ಮೇಲಿನ ದಾಳಿ ಸಂದರ್ಭದಲ್ಲಿ ಒಡೆಯೋ ಕೆಲಸ ಮಾಡಿದ್ರಿ. ಈ ಬಗ್ಗೆ ಪಾಪಪ್ರಜ್ಞೆ ಇಲ್ಲವೆ?*

ಅದು ಮತಾಂತರ ನಡೆಸೋ ಕೇಂದ್ರಗಳ ಮೇಲೆ ನಡೆಸಿದ ದಾಳಿ ಅಂತಲೇ ಅಂದುಕೊಳ್ತೀನಿ. ಆ ನೆಲೆಗಟ್ಟಲ್ಲಿ ಆ ಘಟನೆಯನ್ನು ಸಮರ್ಥಿಸಿಕೊಂಡಿದ್ದನೇ ಹೊರತು ಆ ಸಮುದಾಯದವರ ಮೇಲಿನ ಸಿಟ್ಟಿನಿಂದಲ್ಲ, ಮುಗ್ಧರನ್ನು ಮತಾಂತರ ಮಾಡೋ ದಂಧೆಯೊಂದು ಚಾಲ್ತಿಯಲ್ಲಿರುವುದು ಸುಳ್ಳಲ್ಲ, ಆದರೆ ಅದಕ್ಕೆ ಆ ಇಡೀ ಸಮುದಾಯ ಕಾರಣವಲ್ಲ.

** ಭಜರಂಗದಳದಲ್ಲಿ ಅನ್ಯಾಯವಾಗಿದ್ದರಿಂದಲೇ ಮಹೇಂದ್ರ ಹೊರಬಂದಿದ್ದು ಅನ್ನಲಾಗುತ್ತಿದೆ...*

ಖಂಡಿತಾ ಇಲ್ಲ, ನನ್ನ ಮನಸ್ಥಿತಿ ಬದಲಾದುದರಿಂದಲೇ ಇಂಥಾ ನಿರ್ಧಾರ ತೆಗೆದುಕೊಂಡಿದ್ದೇನೆ. ಚರ್ಚ್ ಮೇಲಿನ ದಾಳಿ ವಿಚಾರದ ಬಂಧನದ ನಂತರದಲ್ಲಿ ನಾನು ಎದುರುಗೊಂಡ ಘಟನೆಯೊಂದು ಆ ನಿರ್ಧಾರಕ್ಕೆ ಕಾರಣವಾಯಿತು.

ಬೆಳ್ತಂಗಡಿಯಲ್ಲಿ ಒಬ್ಬ ಮಹಿಳೆ ಮತಾಂತರಗೊಂಡಿದ್ದರು. ಈ ಬಗ್ಗೆ ವಿಚಾರಿಸಲು ಹೋದಾಗ ಆಕೆಯ ಹಿನ್ನೆಲೆ ಕರುಳು ಹಿಂಡಿತು. ಒಳ್ಳೆಯ ಮನೆತನದಿಂದ ಬಂದ ಆಕೆ ಶ್ರೀಮಂತೆ. ಹೋದ ಮನೇಲೂ ಅದೇ ಶ್ರೀಮಂತಿಕೆ. ಆದರೆ ಮೂವರು ಹೆಣ್ಮಕ್ಕಳನ್ನು ಮಡಿಲಿಗಿಟ್ಟು ಗಂಡ ಸತ್ತು ಹೋದ. ಆಸ್ತಿ ವಿಚಾರವಾಗಿ ಗಂಡನ ಮನೆಯವರೂ ಆಕೆಯನ್ನು ಹೊರಗಟ್ಟಿದ್ದರು. ನಿರ್ವಾಹವಿಲ್ಲದ ಆಕೆ ಬೇರೆಯವರ ಮನೆಗೆಲಸಕ್ಕೆ ಸೇರಿಕೊಂಡಳು. ಆದರೂ ಜೀವನ ನಿರ್ವಹಣೆಗೆ ಹಣ ಸಾಲದೆ ದೊಡ್ಡ ಮಗಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಸೇರಿಸಿದಳು. ಆದರೂ ಬಡತನ ನೀಗದೆ ಸಹಾಯಕ್ಕಾಗಿ ಮಠ-ಮಂದಿರ, ಜಾತಿ ಸಂಘಗಳಿಗೆ ಅಲೆದಾಡಿ ಸಹಾಯ ಯಾಚಿಸಿದಳು. ಪ್ರಯೋಜನವಾಗಲಿಲ್ಲ.

ಆದರೆ ಒಬ್ಬ ವ್ಯಕ್ತಿ ಬಂದು ಸಹಾಯ ಮಾಡಿದ. ಬೆಳೆದು ನಿಂತಿದ್ದ ಹೆಣ್ಮಕ್ಕಳಿಗೆ ಮದುವೆಯನ್ನೂ ಮಾಡಿಸಿದ. ಆತ ಕ್ರಿಶ್ಚಿಯನ್. ಈಗ ಈ ಹಿಂದೂ ಮಹಿಳೆಯೂ ಮಕ್ಕಳೊಂದಿಗೆ ಆ ಧರ್ಮಕ್ಕೆ ಮತಾಂತರಗೊಂಡಿದ್ದಾಳೆ. ಇದರಿಂದ ನನ್ನೊಳಗೆ 'ಆಕೆಯನ್ನು ಮತಾಂತರಗೊಳಿಸಿದ್ದು ಹಿಂದೂ ಸಮಾಜವೇ, ಅಂತೊಂದು ವಿಚಾರ ಚುಚ್ಚಲಾರಂಭಿಸಿತು. ಆಕೆಗಾಗ ಧರ್ಮಕ್ಕಿಂತ ಬದುಕು ಮುಖ್ಯವಾಗಿತ್ತು. ಹಿಂದೂ ಸಮಾಜ ಅದನ್ನು ನೀಡದ ಕಾರಣ ಮತಾಂತರಕ್ಕೆ ದಾರಿಯಾಯಿತು. ಈ ಜನ ದೇವಸ್ಥಾನಗಳಿಗೆ ಫಂಡು ಕೊಡ್ತಾರೆ, ದಲಿತರು ನೊಂದವರ ಆತ್ಮಗೌರವಕ್ಕೇ ಪೆಟ್ಟು ಕೊಡ್ತಾರೆ. ಇದನ್ನು ಸರಿ ಮಾಡ್ಬೇಕು ಅನ್ನೋ ಹಂಬಲವೇ ನನ್ನೀ ನಿರ್ಧಾರಕ್ಕೆ ಪ್ರೇರಣೆ...

** ನೀವೇ ಮತಾಂತರ ಮಾಡೋ ದಂಧೆ ಇದೇ ಅಂದಿದ್ರಿ. ಆದರೆ ಅದು ಹಿಂದೂ ಮತದ ಕೂಸು ಅಂತನ್ನಿಸೋದಿಲ್ವಾ? ಈಗ ಚರ್ಚ್ ಮೇಲೆ ದಾಳಿ ಮಾಡಿದ್ದು ತಪ್ಪು ಅನ್ಸಲ್ವಾ?*

ನಿಜ, ಹಿಂದೂ ಸಮಾಜದ ಇಂಥ ಬಲಹೀನತೆಗಳೇ ಮತಾಂತರದಂಥ ಘಟನೆಗಳಿಗೆ ಕಾರಣ. ಈಗಿನಂಥ ಮನಸ್ಥಿತಿ ಇದ್ದಿದ್ರೆ ಚರ್ಚ್ ಮೇಲಿನ ದಾಳಿಯನ್ನು ಸಮರ್ಥಿಸುತ್ತಿರಲಿಲ್ಲ. ಮನುಷ್ಯ ಪ್ರತೀ ಕ್ಷಣವೂ ಕಲೀತಾ ಇರ್ತಾನೆ. ಆಯಾ ಸಂದರ್ಭಗಳಲ್ಲಿ ಸೂಕ್ತ ತಿಳಿವಳಿಕೆಯೂ ಬರುತ್ತೆ. ನಾನದಕ್ಕೆ ತೆರೆದುಕೊಂಡಿದ್ದೇನೆ. ಆದುದರಿಂದಲೇ ಬದಲಾಗಿದ್ದೇನೆ....

** ಬಾಬಾಬುಡನ್‌ಗಿರಿ ರಾಜಕೀಯ ದಾಳವಾಗಿರೋದ್ರಲ್ಲಿ ನಿಮ್ಮದೂ ಪಾಲಿದೆ. ಈಗಿನ ಸ್ಥಿತಿಯಲ್ಲಿ ಗಿರಿಯ ಸೌಹಾರ್ದವನ್ನ ಯಾವ ರೀತಿ ಉಳಿಸ್ತೀರಿ?*

ದತ್ತಪೀಠ ವಿವಿಧ ಕೋಮಿನವರ, ವರ್ಗಗಳ ಸೌಹಾರ್ದ ಕೇಂದ್ರ. ನಾನು ಭಜರಂಗದಳದ ರಾಜ್ಯ ಸಂಚಾಲಕನಾಗಿದ್ದಾಗಲೇ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ಹೇಳಿದ್ದೆ. ಅಲ್ಲಿರುವ ಅನಧಿಕೃತ ಗೋರಿಗಳನ್ನು ತೆರವುಗೊಳಿಸಿ ಪವಿತ್ರವಾದುದನ್ನಷ್ಟೆ ಉಳಿಸಿಕೊಂಡು ಎರಡೂ ಧರ್ಮಗಳ ಸಾಮರಸ್ಯ ಕಾಯ್ದುಕೊಳ್ಳಬೇಕು.

** ನಿಮ್ಮಂಥವರು ಹೋರಾಟ ಆರಂಭಿಸೋವರೆಗೂ ಅದು ಸೌಹಾರ್ದ ಕೇಂದ್ರವೇ ಆಗಿತ್ತಲ್ಲಾ?*

ಆ ಹೋರಾಟ ರಾಜಕೀಯ ತಿರುವು ಪಡೆಯುತ್ತದೆಂದು ಅಂದುಕೊಂಡಿರಲಿಲ್ಲ, ಅಲ್ಲಿನ ಸಾಮರಸ್ಯವನ್ನು ಬಿಜೆಪಿ ಕೊಲೆ ಮಾಡಿದೆ. ರಾಜಕೀಯಕ್ಕೆ ಉಪಯೋಗಿಸಿಕೊಳ್ಳಲೂ ಹುನ್ನಾರ ನಡೆಸುತ್ತಿದೆ. ಅಲ್ಲಿ ನಿಜವಾದ ಸಾಮರಸ್ಯ ನೆಲೆಗೊಳ್ಳಲು ಯಾವ ಕೆಲಸ ಮಾಡಲೂ ನಾನು ಕಟಿಬದ್ಧನಿದ್ದೇನೆ.

** ಈಗಲೂ ಭಜರಂಗದಳದಲ್ಲೇ ಇರುವವರಿಗೆ ನಿಮ್ಮ ಕಿವಿ ಮಾತೇನು?*

ನನಗೆ ಆ ವಲಯದಲ್ಲಿ ದೊಡ್ಡ ಮಟ್ಟದ ಸಂಪರ್ಕಗಳಿವೆ. ಅಲ್ಲಿ ಇನ್ನೂ ಹೊಸಾ ಕಾರ್ಯಕರ್ತರು ತಯಾರಾಗುತ್ತಿದ್ದಾರೆ. ಆದರೆ ಯಾರೂ ಮುಸ್ಲಿಮರನ್ನು, ಕ್ರಿಶ್ಚಿಯನ್ನರನ್ನು ಗುರಿಯಾಗಿಸಿಕೊಳ್ಳಬೇಡಿ. ಆ ಹಾದಿಯಲ್ಲೇ ಮುಂದುವರೆದರೆ ಖಂಡಿತಾ ಮೋಸ ಹೋಗ್ತೀರಿ. ಹಿಂದೂ ಸಮಾಜದಲ್ಲೇ ಇರೋ ನ್ಯೂನತೆಗಳನ್ನು ಸರಿಪಡಿಸಲು ಪ್ರಯತ್ನಿಸಿ. ಈಗ ಇರೋ ದಾರಿಯಲ್ಲಿ ನಿಜವಾದ ರಾಷ್ಟ್ರ ಕಟ್ಟುವುದು ಕನಸಿನ ಮಾತು. ಇದು ನಿಜವಾದ ಹಿಂದೂತ್ವ ಅಲ್ಲ, ನಿಮ್ಮ ಹೋರಾಟವನ್ನು ಸಾಮಾಜಿಕ ಕೆಲಸಗಳಿಗೆ ಉಪಯೋಗಿಸಿ....



ಕೋಮು ವಿಷದ ಫ್ಯಾಕ್ಟರಿಯೊಳಗಿಂದ ದೇಶಭಕ್ತಿಯ ಸದ್ದು!

ಹೀಗನ್ನದೆ ವಿಧಿಯಿಲ್ಲ, ಯಾಕೆಂದರೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಎಂಬುದು ಕೋಮುವಾದದ ವಿಷ ಉತ್ಪಾದನಾ ಫ್ಯಾಕ್ಟರಿಯೆಂಬುದು ಪ್ರಜ್ಞಾವಂತರಿಗೆಲ್ಲಾ ಗೊತ್ತಿರುವ ಅಂಶ. ಅದರೊಳಗಿಂದ ಆಗಾಗ ದೇಶಭಕ್ತಿ, ಭ್ರಷ್ಟಾಚಾರ ನಿರ್ಮೂಲನೆ ಅಂತೆಲ್ಲಾ ಸದ್ದು ಕೇಳುವುದು ಮಾಮೂಲು. ಅದೀಗ ಮತ್ತೊಮ್ಮೆ ಪುನರಾವರ್ತನೆಗೊಂಡಿದೆ. ನೆಪ 56 ನೇ ರಾಷ್ಟ್ರೀಯ ಅಧಿವೇಶನದ್ದು.

ಈ ಹಿನ್ನೆಲೆಯಲ್ಲಿ ಎಬಿವಿಪಿಯ ರಾಷ್ಟ್ರೀಯ ಅಧ್ಯಕ್ಷ ಮಿಲಿಂದ್ ಮರಾಠೆ ಶಿಕ್ಷಣದ ವ್ಯಾಪಾರೀಕರಣ, ನಕ್ಸಲಿಸಂ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುವುದಾಗಿ ಘೋಷಿಸಿದ್ದಾನೆ. ಸರಿ, ಹೋರಾಟ ನಡೆಸಲಿ. ಅದರ ಬಗ್ಗೆ ತಕರಾರುಗಳಿಲ್ಲ, ಆದರೆ ಇವರ ಹೋರಾಟ ಬಿಜೆಪಿಯೇತರ ಸರ್ಕಾರಗಳ ಭ್ರಷ್ಟಾಚಾರಕ್ಕಷ್ಟೇ ಸೀಮಿತವೇ? ಇದು ಪ್ರಶ್ನೆ.

ಮರಾಠೆ ಕರ್ನಾಟಕದ ನೆಲದಲ್ಲಿ ನಿಂತು ಅಬ್ಬರಿಸಿದ್ದರಿಂದಲೇ ಅಂತಹುದೊಂದು ಪ್ರಶ್ನೆ ಹುಟ್ಟಿಕೊಂಡಿದೆ. ಯಾಕೆಂದರಿಲ್ಲಿ ಎಲ್ಲರಿಗೂ ತಿಳಿದಿರುವಂತೆ ಯಡ್ಡಿ ಸರ್ಕಾರ ಮಹಾ ಭ್ರಷ್ಟಾಚಾರದಲ್ಲಿ ತೊಡಗಿಕೊಂಡಿದೆ. ಆ ಮೂಲಕವೇ ಹಣ ಹೊಡೆದುಕೊಂಡು ಒಂದಿಡೀ ವ್ಯವಸ್ಥೆಯನ್ನೇ ತಿರುವುಮುರುವುಗೊಳಿಸುತ್ತಿದೆ. ಇದರ ಬಗ್ಗೆ ಮರಾಠೆಯನ್ನು ಸೇರಿದಂತೆ ಎಬಿವಿಪಿ ವಟುಗಳು ಯಾಕೆ ತುಟಿ ಬಿಚ್ಚಲಿಲ್ಲ?

ಇವರಿಗೆ ಭ್ರಷ್ಟಾಚಾರದ ವಿರುದ್ಧ ನೈಜವಾದ ಆಕ್ರೋಶಗಳಿದ್ದಿದ್ದರೆ ಅದು ಯಡ್ಡಿ ಸರ್ಕಾರವನ್ನೂ ಎದುರುಗೊಳ್ಳುತ್ತಿತ್ತು. ಈ ಉದಾಹರಣೆಗಳೊಂದಿಗೇ ಭ್ರಷ್ಟಾಚಾರ ನಿರ್ಮೂಲನೆಯ ವಿಶ್ಲೇಷಣೆಗಳಾಗುತ್ತಿದ್ದವು. ಆದರೆ ಸರ್ಕಾರ ತಮ್ಮ ಆಶ್ರಯದಾತರದ್ದೆನ್ನುವ ಕಾರಣದಿಂದಲೇ ಯಡ್ಡಿ ಭ್ರಷ್ಟಾಚಾರಗಳ ಬಗ್ಗೆ ಚರ್ಚೆಗಳಾಗಿಲ್ಲ, ಇಂದು ಭ್ರಷ್ಟಾಚಾರ ಹೆಮ್ಮರವಾಗುತ್ತಿರುವುದಕ್ಕೆ ಇಂಥ ಮುಲಾಜುಗಳೂ ಕಾರಣ ತಾನೆ? ಸಾವಿರಾರು ಯುವಕರನ್ನು ಅಂಥ ಮುಲಾಜುಗಳಿಗೀಡು ಮಾಡಿ ಎಬಿವಿಪಿ ಮಂದಿ ಅದೆಂಥ ಭ್ರಷ್ಟಾಚಾರ ನಿರ್ಮೂಲನೆ ಮಾಡಬಲ್ಲರು?

ಮೇಲ್ಕಂಡ ವಿಚಾರಗಳು ಎಬಿವಿಪಿಯ ದ್ವಂದ್ವಗಳಿಗೊಂದು ಸ್ಯಾಂಪಲ್ ಅಷ್ಟೆ. ಆದರೆ ಅದರ ಮೂಲ ಉದ್ದೇಶ ದೇಶದ ಯುವ ಮನಸ್ಸುಗಳನ್ನು ಕೇಸರೀಕರಣಗೊಳಿಸುವುದು. ಆರೆಸ್ಸೆಸ್, ಭಜರಂಗದಳ ಮುಂತಾದ ಸಂಘಟನೆಗಳಿಗೆ ಕಾರ್ಯಕರ್ತರನ್ನು ಉತ್ಪಾದಿಸುವುದೇ ಇದರ ಘನ ಗುರಿ. ಇದರ ಪರಿಣಾಮ ಮಾತ್ರ ಅತೀ ಭೀಕರ.

ತೀರಾ ಆಗತಾನೆ ಲೋಕ ಅರಿತು ಒಳ್ಳೆಯದನ್ನು ಆರಿಸಿಕೊಂಡು ಬದುಕಿನ ಹೆಜ್ಜೆ ಮುಂದಿಕ್ಕುವ ಪರ್ವಕಾಲ ವಿದ್ಯಾರ್ಥಿ ದಿಸೆ. ಅಂಥಾ ಸಂದರ್ಭದಲ್ಲಿ ಕೇಸರಿ ಪ್ರಣೀತ ಸಿದ್ಧಾಂತಗಳನ್ನೇ ಹರಡಿ 'ಇದೇ ಶ್ರೇಷ್ಠ' ಅಂತ ನಂಬಿಸುವ ಕೆಲಸ ಅವ್ಯಾಹತವಾಗಿ ನಡೆಯುತ್ತಿದೆ. ಅದಕ್ಕೆ ಪಕ್ಕಾದವರಲ್ಲಿ ಸಾಮಾಜಿಕ ಕಳಕಳಿಯೇ ಸತ್ತು ಹೋಗುತ್ತದೆ. ಇಂಥಾ ಅಮಾನವೀಯ ಕೆಲಸವನ್ನು ಲಾಗಾಯ್ತಿನಿಂದ ಮಾಡಿಕೊಂಡು ಬಂದಿರುವ ಎಬಿವಿಪಿ ಮುಖಂಡರು ಭ್ರಷ್ಟಾಚಾರ, ದೇಶಭಕ್ತಿಯ ಮಾತುಗಳನ್ನಾಡಿದರೆ ಪ್ರಜಾಪ್ರಭುತ್ವವನ್ನೇ ಅಣಕಿಸಿದಂತೆ ಭಾಸವಾಗುತ್ತದೆ.

ಇಂಥವರ ಹುನ್ನಾರಗಳಿಗೆ ಯುವ ಸಮೂಹ ಬಲಿಯಾಗದಂತೆ ತಡೆಯುವ ವಿವೇಚನೆಯಷ್ಟೆ ತುರ್ತಿನ ಅವಶ್ಯಕತೆ.


ಉತ್ತರ ಕನ್ನಡ: ಕಣ್ಣಿಟ್ಟು ನೋಡಿ, ಬದಲಾಗುತ್ತಿದೆ ರಾಜಕಾರಣದ ಸಮೀಕರಣ

ಉತ್ತರ ಕನ್ನಡದ ಗ್ರಾಮ ಸಮರದ ಫಲಿತಾಂಶ ...ಆಗಲಿ, ಜಿ.ಪಂ., ತಾ.ಪಂ. ಚುನಾವಣೆ ಬಳಿಕ ...ರಾಜಕಾರಣದಲ್ಲಿ ದೊಡ್ಡ ಸ್ಥಿತ್ಯಂತರ ಆಗುವುದಂತೂ ...ತ: ಕಾಂಗ್ರೆಸ್-ಬಿಜೆಪಿ-ಜೆಡಿಎಸ್‌ನ ಸೂತ್ರ-ಸಮೀಕರಣ ...ಾಗುವ ಸ್ಪಷ್ಟ ಸೂಚನೆ ಈಗಲೇ ಗೋಚರಿಸಲಾರಂಭ ...ಣ ಬದಿದಾಟ-ಬೇಸರ ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ...ದ್ದು ಹೋಗಿದೆ. ಬಿಜೆಪಿಯಲ್ಲಿ ಸೋಗಲಾಡಿ ಸಂಸದ ...್ಮಾಣಿ ಮತ್ತು ಹೇತ್ಲಾಂಡಿ ಮಂತ್ರಿ ಕಾಗೇರಿಗೆ ಒಬ್ಬನ ...ದಿ ಕಂಡರೆ ಮತ್ತೊಬ್ಬನಿಗೆ ಆಗುವುದಿಲ್ಲ. ಈ ...ಮುಕಾರಿ ವಿಪ್ರರಿಗೆ ಶೂದ್ರ-ಮಾಜಿ ಮಂತ್ರಿ ಶಿವಾನಂದ ...ನೆಂದರೆ ಅಲರ್ಜಿ. ಅಲ್ಲಿ ಕಾಂಗ್ರೆಸ್‌ನಲ್ಲಿ ... ಕಾಲು ದೇಶಪಾಂಡೆ ಕೈಲಿದ್ದರೆ, ದೇಶ ... ಕಾಲು 'ಬಂ' ಬಂಟರು ಎಳೆಯುತ್ತಿದ್ದಾರೆ. ... ದೊಡ್ಡ ಪಕ್ಷಗಳ ಧೀರರ ಸಣ್ಣತನ ...್‌ಗೆ ಬೂಸ್ಟ್ಟಾಗಿ ಪರಿಣಮಿಸಿದೆ. ಅದೆಷ್ಟೇ ...ಕ್ಷ ಬದಲಿಸಿದರೂ ಉತ್ತರಕನ್ನಡದಲ್ಲಿನ್ನೂ ... ಉಳಿಸಿಕೊಂಡಿರುವ 'ಬಂ' ಬಂದ ...ನಂತೂ ಜೆಡಿಎಸ್‌ಗೆ ಬಿಜೆಪಿ-ಕಾಂಗ್ರೆಸ್‌ಗೆ ...ತಟ್ಟಿ ಕುಸ್ತಿಗೆ ನಿಲ್ಲುವ ಕಸುವು ...ಬಿಟ್ಟಿದೆ. ಬಿಜೆಪಿ-ಕಾಂಗ್ರೆಸ್‌ನ ಅತೃಪ್ತ ...ತರನೇಕರು ಒಬ್ಬೊಬ್ಬರಾಗಿ ಜೆಡಿಎಸ್‌ನತ್ತ ... ಮಾಡಿ ನಿಲ್ಲತೊಡಗಿದ್ದಾರೆ. ಸ್ಥಳೀಯಾ ...ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ನಡೆದ ...್ ಹೊತ್ತಲ್ಲೇ ಅಂದು ಮಂತ್ರಿಯಾಗಿದ್ದ ... ಅಸ್ನೋಟಿಕರ್, ಮಾಜಿ ಮಂತ್ರಿ, ಹಾಲಿ ...ನು ಕಾರ್ಪೊರೇಷನ್ ಅಧ್ಯಕ್ಷ ಶಿವಾನಂದ ...ರಂಥ ಘಟಾನುಘಟಿಗಳೇ ಮುಂದೆ ...್ ಸೇರುವ ಸಂಕೇತ ಹೊರಬಿದ್ದಿತ್ತು.


...ಜೆಪಿ ಶೂದ್ರರ ಬೇಗುದಿಗೂ ಸಕಾರಣ ...ಬಿಜೆಪಿಗೆ ತನು-ಮನ-ಧನ ಅರ್ಪಿಸಿಕೊಂಡಿದ್ದ ವಿಲ್ಲಾ ...ನ ವಿವಿಧ ಬಿಸಿನೆಸ್ ಆದಿರು ಉದ್ಯಮ ಕುಳ ...ಕುಮಾರ್‌ನ ಎಮ್ಮೆಲ್ಸಿ ಕ್ಯಾಂಡಿಡೇಟಾಗಿಸಲು ಶೂದ್ರ ... ಪ್ರಯತ್ನಿಸಿದ್ದರು. ಆದರೆ ಬ್ರಾಹ್ಮಣ ಕುಲತಿಲಕರಾದ ... ಮಾಣಿ-ಅನಂತ್ಮಾಣಿ ವಗೈರೆ ವಟು ...ೂಸ್‌ಲೆಸ್ ಚೆಡ್ಡಿ ಪುಢಾರಿ ಕುಮಟೆಯ ...ವ ಪ್ರಭುಗೆ ತರತರದ ಕುತಂತ್ರದಿಂದ ... ಕೊಡಿಸಿದ್ದರು. ಅನಿಲ್‌ಕುಮಾರ್ ...ಯ ಅಭ್ಯರ್ಥಿಯಾಗಿ ಅಖಾಡಕ್ಕೆ ಇಳಿ ... ಆತನಿಗೆ ಶಿವಾನಂದ ನಾಯ್ಕ, ಅಸ್ನೋ ...ಬಳಗದ ಒಳ ಸಹಕಾರವಿತ್ತು. ಅನಿಲ್ ...್ ಅದ್ಯಾವ ಥರ ಸ್ಪರ್ಧೆಯೊಡ್ಡಿದ್ದನೆಂದರೆ, ...ಅನಂತ್ಮಾಣಿಗಳು ತತ್ತರಿಸಿಹೋಗಿದ್ದರು. ... ಎದುರು ಸಣ್ಣ ಅಂತರದಲ್ಲಿ ಅನಿಲ್ ...ೂ ಬಿಜೆಪಿಯನ್ನು ಹೇಳಹೆಸರಿಲ್ಲದಂತೆ ... ಅದರ ಹುರಿಯಾಳನ್ನು ಮೂರನೇ ...ತಳ್ಳಿಬಿಟ್ಟಿದ್ದರು.

... ಸಂಘರ್ಷದ ಬಳಿಕ ಬಿಜೆಪಿಯೊಳಗಿನ ... ಸಂಕಟ ಮಿತಿಮೀರಿ ಹೋಯ್ತು. ಅನಿಲ್ ...್-ಶಿವಾನಂದ ನಾಯ್ಕ-ಅಸ್ನೋಟಿಕರ್ ತಮಗಿನ್ನು ... ಬ್ರಾಹ್ಮಣರು ಬದುಕಲು ಬಿಡಲಾರರೆಂಬ ...ನಕ್ಕೆ ಬಂದು ಬಿಟ್ಟರು. ಇವರೆಲ್ಲ ...ಾಗಿ ಸಂಧಿಸಿ ಭವಿಷ್ಯದ ಬಗ್ಗೆ ಒಂದು ...ಕ್ಕೆ ಬಂದರು. ಕಾಂಗ್ರೆಸ್‌ಗಿಂತಲೂ ...್‌ಗೆ ಹೋಗುವುದೇ ಒಳಿತೆಂದು ...ದರು. ಅದರ ಮೊದಲ ಹಂತವಾಗಿ ...ಮುರ-ಮುಂಡಗೋಡ ಕ್ಷೇತ್ರದಿಂದ ...ಮಾಗುವ ಕನಸು ಕಾಣುತ್ತಿರುವ ಅನಿಲ್ ...್‌ನನ್ನು ಜೆಡಿಎಸ್‌ಗೆ ರವಾನಿಸಿದ್ದರು. ... ತನ್ನ ಆದಿರು ಹಣ ಹರಿಸಿ ಕ್ಷೇತ್ರ ...ಳಿಸಿಕೊಳ್ಳುವುದರ ಜೊತೆಗೆ ಜಿಲ್ಲಾ ...ನ ಅಧ್ಯಕ್ಷನಾಗುತ್ತಿದ್ದಾರೆಂಬ ಸುದ್ದಿಯೂ ... ಆದರೆ ಬಗೆಬಗೆಯ ಬಿಸಿನೆಸ್ ...ರಲ್ಲಿ ಮಾಡುತ್ತಿರುವ ಅನಿಲ್ ಫುಲ್ ... ಪಾಲಿಟಿಕ್ಸ್ ಮಾಡಲಾಗದೆ ಬರೀ ... ಮಾತ್ರ ನಿಗಾವಹಿಸತೊಡಗಿದರು.

...ಜೆಪಿಯಲ್ಲಿ ಶಿವಾನಂದ ನಾಯ್ಕ ಉಸಿರುಗಟ್ಟಿ ಒದ್ದಾಡುತ್ತಿದ್ದರೂ ತಕ್ಷಣಕ್ಕೆ ಪಾರ್ಟಿ ಬಿಟ್ಟು ಬರುವ ಸ್ಥಿತಿಯಲ್ಲಿರಲಿಲ್ಲ. ಈತನನ್ನು ಫಲವತ್ತಾದ ಸರ್ಕಾರಿ ಸಾಬೂನು ಕಂಪೆನಿಯ ಗೂಟದ ಕಾರಿನ ಯಜಮಾನನ್ನಾಗಿ ಮಾಡಿದ್ದ ಮಂತ್ರಿಣಿ ಶೋಭಾ ಮತ್ತು ಸಿಎಂ ಯಡ್ಡಿ ಮುಲಾಜೇ ಅದಕ್ಕೆ ಮುಖ್ಯ ಕಾರಣವಾಗಿತ್ತು. ಯಡ್ಡಿ ಸಿಎಂ ಆಗಿರುವಷ್ಟು ದಿನವಾದರೂ ಬಿಜೆಪಿಯಲ್ಲಿರೋಣವೆಂಬ ಲೆಕ್ಕಾಚಾರ ಶಿವಣ್ಣನದಾಗಿತ್ತು. ಅಸ್ನೋಟಿಕರ್‌ಗೂ ಬಿಜೆಪಿಗೂ ಸಹವಾಸ ಸಾಕಾಗಿತ್ತಾದರೂ ಮಂತ್ರಿಗಿರಿ ಆತನ ಕಟ್ಟಿಹಾಕಿತ್ತು. ಆನಂತರ ಆನಂದ್ ಅಸ್ನೋಟಿಕರ್ ಚೆಡ್ಡಿ ಸಂಸ್ಕೃತಿ ಬಗ್ಗೆ ಬಂಡೆದ್ದು ಶಾಸಕ ಸ್ಥಾನಕ್ಕೆ ಸಂಚಕಾರ ತಂದುಕೊಂಡು ಅತಂತ್ರ ಆತ್ಮದಂತೆ ಅಂಡಲೆಯುತ್ತಿರುವುದು ಇತಿಹಾಸ. ಅಸ್ನೋಟಿಕರ್ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿದ್ದಾಗಲೂ ಜೆಡಿಎಸ್ ಯುವರಾಜ ಕುಮಾರಸ್ವಾಮಿಯ ಗುಣಗಾನ ಮಾಡುತ್ತಿದ್ದಾತ. ಶಿಕ್ಷಕರ ಕ್ಷೇತ್ರದ ಎಲೆಕ್ಷನ್‌ನಲ್ಲಿ ಆತ ಜೆಡಿಎಸ್‌ನ ಬಸವರಾಜ ಹೊರಟ್ಟಿಗೆ ಹೆಲ್ಪ್ ಮಾಡಿದ್ದ. ಆನಂದ್ ಕಾಂಗ್ರೆಸ್ ಕದ ಅದೆಷ್ಟೇ ಜೋರಾಗಿ ತಟ್ಟಿದರೂ ದೇಶಪಾಂಡೆ-ವಸ್ಮಾಗಿ ಇಬ್ಬರೂ ಸದ್ಯಕ್ಕಂತೂ ತೆರೆಯುವುದಿಲ್ಲ. ಹಿಂದೆ ಆತ ಕೈಕೊಟ್ಟ ಸಿಟ್ಟನ್ನು ಇವರಿಬ್ಬರಿಗೂ ಇಳಿದಿಲ್ಲ.


ಅನಿಲ್‌ಕುಮಾರ್


ಅಸ್ತಿತ್ವ ಉಳಿಸಿಕೊಂಡು 'ರಾಜಕಾರಣ' ಮಾಡಬೇಕೆಂದಿದ್ದರೆ ಅಸ್ನೋಟಿಕರ್ ಮತ್ತು ಶಿವಾನಂದ ನಾಯ್ಕಗೆ ಜೆಡಿಎಸ್ ಒಂದೇ ಗತಿ ಎಂಬಂತಾಗಿದೆ. ಗ್ರಾಮ ಸಮರ ಮುಗಿದ ನಂತರ ಒಂದು ಸುಮುಹೂರ್ತದಲ್ಲಿ ಈ ಮಾಜಿ ಸಚಿವದ್ವಯರು ಜೆಡಿಎಸ್ ಸೇರುವುದೀಗ ಬಹುತೇಕ ಖಾತ್ರಿಯಾಗಿದೆ. ಬಿಜೆಪಿ-ಕಾಂಗ್ರೆಸ್ ಒಳಗಿನ ಸೂತ್ರ ಸಮೀಕರಣ ಅನಿವಾರ್ಯವಾಗಿ ನಾಯ್ಕ-ಅಸ್ನೋಟಿಕರ್‌ರನ್ನು ಜೆಡಿಎಸ್‌ನತ್ತ ಪುಶ್ ಮಾಡುತ್ತಿದೆ. ನಾಯ್ಕ ಸ್ವಕ್ಷೇತ್ರ ಭಟ್ಕಳ, ಹೊನ್ನಾವರ ಮತ್ತು ಕಾರವಾರ-ಅಂಕೋಲೆಯಲ್ಲಿ ಅಸ್ನೋಟಿಕರ್ ತಂತಮ್ಮ ಶಿಷ್ಯರನ್ನು ಬಂಡಾಯ ಅಭ್ಯರ್ಥಿಗಳಾಗಿ ಕಣಕ್ಕಿಳಿಸಿ ಬಿಜೆಪಿಗೆ ಸೆಡ್ಡು ಹೊಡೆದಿದ್ದಾರೆ. ಗೆಲುವ ಹಿಂಬಾಲಕರ ಸಮೇತ ಜೆಡಿಎಸ್ ಅನ್ನು 'ಗೌರವ'ದಿಂದ ಸೇರಲು ನಾಯ್ಕ-ಅಸ್ನೋಟಿಕರ್ ಸ್ಕೆಚ್ ಹಾಕುತ್ತಿದ್ದಾರೆ.


ಭೀಮಣ್ಣ


ಅಸ್ನೋಟಿಕರ್ ಮತ್ತು ಶಿವಾನಂದ ನಾಯ್ಕರನ್ನು ಬಗ್ಗುಬಡಿಯಲು ಹವಣಿಸುತ್ತಿರುವ ಕಾಗೇರಿ-ಅನಂತ್ಮಾಣಿಗಳಿಗೆ ಕಾರವಾರ ಭಟ್ಕಳದಲ್ಲಿ ಸರಿಯಾದ ಕ್ಯಾಂಡಿಡೇಟುಗಳೇ ಸಿಕ್ಕಿಲ್ಲ. ಗತಿಗೇಡಿ ಮಾಣಿಗಳು ನಾಯ್ಕ ಮತ್ತು ಅಸ್ನೋಟಿಕರ್ ಅನುಯಾಯಿಗಳಿಗೇ ಅನೇಕ ಕಡೆ ಬಿಜೆಪಿ ಟಿಕೆಟ್ ಕೊಡಬೇಕಾಗಿ ಬಂದಿದೆ. ಯಾವ್ಯಾವ ಜಿಪಂ-ತಾಪಂ ಕ್ಷೇತ್ರದಲ್ಲಿ ತಮ್ಮ ನಿಷ್ಠಾವಂತರಿದ್ದಾರೋ ಅಲ್ಲೆಲ್ಲ ಬಿಜೆಪಿಗೆ ಚಾಲಾಕಿ ನಾಯ್ಕ-ಅಸ್ನೋಟಿಕರ್ ಸಪೋರ್ಟ್ ಮಾಡುತ್ತಿದ್ದಾರೆ. ಇನ್ನುಳಿದೆಡೆ ಪಕ್ಷೇತರರಾಗಿ ಹಿಂಬಾಲಕರನ್ನು ಅಖಾಡಕ್ಕೆ ಇಳಿಸಿ ಗೆಲ್ಲಿಸುವ ಹಠಕ್ಕೆ ಬಿದ್ದಿದ್ದಾರೆ. ಮಾವಳ್ಳಿಯಲ್ಲಿ ಮೇಧಾ ಮುರ್ಡೇಶ್ವರ, ಜಾಲಿಯಲ್ಲಿ ಮಂಕಾಳು ವೈದ್ಯ (ಬಂಡಾಯ ಕಾಂಗ್ರೆಸ್), ಶಿರಾಲಿಯಲ್ಲಿ ಭವಾನಿ ದೈಮನೆ, ನಗರಬಸ್ತಿಕೇರಿಯಲ್ಲಿ ಜಿಪಂ ಉಪಾಧ್ಯಕ್ಷೆ ಪುಷ್ಪ ನಾಯ್ಕ (ಬಂಡಾಯ ಕಾಂಗ್ರೆಸಿಗಳು) ಶಿವಾನಂದ ನಾಯ್ಕರ ಡಾರ್ಕ್ ಹಾರ್ಸ್‌ಗಳು. ಅನಂತ್ಮಾಣಿಯ ಚೇಲಾಗಳಾದ ಕೇಶವ ನಾಯ್ಕ (ನಗರ ಬಸ್ತಿಕೇರಿ) ಮತ್ತು ಎಂ.ಎಂ.ನಾಯ್ಕ (ಜಾಲಿ) ಇವರ ಸೋಲಿಸುವುದೇ ನಾಯ್ಕರ ಅಂತಿಮ ಗುರಿ. ತಾಪಂ 7-8 ಕ್ಷೇತ್ರದಲ್ಲಿ ನಾಯ್ಕರ ಅನುಯಾಯಿಗಳು ಬಂಡಾಯ ಬಾವುಟ ಹಾರಿಸಿದ್ದಾರೆ.


ಅನಂತ್‌ಕುಮಾರ್

ಶಿವಾನಂದ ನಾಯ್ಕರ ಜಿದ್ದಿಗಿಂತಲೂ ಕಾರವಾರದಲ್ಲಿ ಆನಂದ್ ಅಸ್ನೋಟಿಕರ್ ಆಡುತ್ತಿರುವ ಆಟ ಮತ್ತೂ ಮೋಜಾಗಿದೆ. ಬಿಜೆಪಿ ಜಿಲ್ಲಾಧ್ಯಕ್ಷ ಪ್ರಸಾದ್ ಕಾರವಾರಕರ್ ಎಂಬ ಮೊದ್ದಣಿಗೆ ಕಾಸು ಕೊಟ್ಟು ಒಂದಿಷ್ಟು ಬಿ-ಫಾರಂ ಈತ ಖರೀದಿಸಿದ್ದಾನೆ. ಚಂಡಿಯಾ ಜಿಪಂ ಕ್ಷೇತ್ರದಲ್ಲಿ ಜನಪರ-ಮೀನುಗಾರ ಪರ ಹೋರಾಟಗಾರ ಗಣಪತಿ ಮಾಂಗ್ರೆಗೆ ಅಸ್ನೋಟಿಕರ್ ಅಭಯ ಸಿಕ್ಕಿದೆ. ಯಲ್ಲಾಪುರದಲ್ಲಿ ಮಾಜಿ ಜಿಪಂ ಸದಸ್ಯ ಶಾಂತಾ ಬಾಂದೇಕರ್ ಎಂಬ ತನ್ನ ಗುಲಾಮನ ಮಡದಿ ಹೀರಾಬಾಯಿ ನಿಲ್ಲಿಸಿದ್ದಾನೆ. ಇದಕ್ಕಿಂತಲೂ ಕುತೂಹಲಕರ ಕಸರತ್ತೆಂದರೆ, ಚಿತ್ತಾಕುಲದಲ್ಲಿ ಬಿಜೆಪಿ ಅಧಿಕೃತ ಅಭ್ಯರ್ಥಿ ರೀನಾ ನಾಯ್ಕ ಅಸ್ನೋಟಿಕರ್‌ನ ನಂಬಿಗಸ್ಥ ಹಿಂಬಾಲಕಿ. ತಾಪಂನ ಹಲವೆಡೆ ಅಸ್ನೋಟಿಕರ್ ಪಡೆಯ ಪಂಟರ್‌ಗಳು ಜಂಗಿ ಕುಸ್ತಿಗಿಳಿದಿದ್ದಾರೆ.


ಕಾಗೇರಿ

ಮಂತ್ರಿ ಕಾಗೇರಿ-ಸಂಸದ ಅನಂತ್ಮಾಣಿಗೆ ಕಾರವಾರದಲ್ಲಿ ಅಸ್ನೋಟಿಕರ್ ಮತ್ತು ಭಟ್ಕಳದಲ್ಲಿ ಶಿವಾನಂದ ನಾಯ್ಕರ ಎದುರು ಹಾಕಿಕೊಂಡು ರಾಜಕೀಯ ಮಾಡುವ ತಾಕತ್ತೂ ಇಲ್ಲ. ಒಂದು ಕಾಲದಲ್ಲಿ ಭಟ್ಕಳ ಅನಂತ್ಮಾಣಿಯ ಹಿಂದೂತ್ವದ ಪ್ರಯೋಗ ಶಾಲೆಯಾಗಿತ್ತು. ಅಲ್ಲಾತ ಮಾಡದ ರಕ್ತಪಾತದ ಪ್ರಯೋಗಗಳೇ ಇಲ್ಲ. ಇದೆಲ್ಲ ಆತ ದೇಶಭಕ್ತಿಯಿಂದ ಮಾಡಿದ್ದಲ್ಲ; ಬ್ರಾಹ್ಮಣರ ಪ್ರೀತಿ-ಅಧಿಕಾರದ ಪ್ರೀತಿಯಿಂದ ಮಾಡಿದ್ದೆಂಬುದು ಜನರಿಗೀಗ ಅರ್ಥವಾಗಿದೆ. ಹೀಗಾಗಿ ಭಟ್ಕಳದಲ್ಲಿ ಅನಂತ್ಮಾಣಿಗೆ ನೆಲೆ-ಬೆಲೆ ಇಲ್ಲ. ಶಿವಾನಂದ ನಾಯ್ಕರಿಗೂ ಈಗ ಬಿಜೆಪಿ ಗರ್ಭಗುಡಿ ಸಂಸ್ಕೃತಿ ಅರ್ಥವಾಗಿದೆ. ಹಾಗಾಗಿ ಆತ ಹಿಂದಿನ ಮುಸ್ಲಿಮ್ ದ್ವೇಷ ಕಡಿಮೆ ಮಾಡಿದ್ದಾರೆ. ನವಾಯತ ಮುಸ್ಲಿಮರ ಸರ್ವೋಚ್ಚ ನಾಯಕ-ಗಲ್ಫ್‌ನಲ್ಲಿ ನಂಬರ್ ಸಿಕ್ಸ್ ಶ್ರೀಮಂತ ಉದ್ಯಮಿಯಾಗಿರುವ ಸಿ.ಎ. ಖಲೀಲ್‌ನಂಥವರೇ ಶಿವಣ್ಣನ ಸಹಿಸಿಕೊಳ್ಳುವ 'ಸ್ಥಿತಿ' ತಲುಪಿದ್ದಾರೆ. ದುಬೈನಲ್ಲಿ ಮೈಸೂರು ಸ್ಯಾಂಡಲ್ಸ್ ಮತ್ತಿತರ ಪ್ರಾಡಕ್ಟ್‌ಗಳ ಡೀಲರ್ ಆಗಿರುವ ಬಲಾಢ್ಯ ಉದ್ಯಮಿ ಎಂ.ಆರ್. ಶೆಟ್ಟಿ ಮಧ್ಯಸ್ಥಿಕೆಯಲ್ಲೇ ಶಿವಣ್ಣ ಜೆಡಿಎಸ್ ಸೇರಿದರೆ ನವಾಯತರ ಬೆಂಬಲ ಕೊಡಿಸುವುದಾಗಿ ಖಲೀಲ್ ಹೇಳಿಯೂ ಆಗಿದೆ. ಕೆಲದಿನಗಳ ಹಿಂದೆ ಸಾಬೂನು ಕಂಪೆನಿ ಅಧ್ಯಕ್ಷ ಶಿವಣ್ಣ ಆಫೀಸಿಯಲ್ ಟೂರ್ ಹಾಕಿಕೊಂಡು ದುಬೈಗೆ ಹೋದಾಗ ಅಂಥದ್ದೊಂದು ಒಪ್ಪಂದವಾಗಿದೆಯಂತೆ!


ಅಸ್ನೋಟಿಕರ್

ಅತ್ತ ಕಾರವಾರದಲ್ಲಂತೂ ಬಿಜೆಪಿಗೆ ಬೇಸೇ ಇಲ್ಲ. ಅಸ್ನೋಟಿಕರ್‌ನ ಧನ ಬಲ-ತೋಳ್ಬಲದ ತರತರದ ವರಸೆ ಎದುರು ಕಾಗೇರಿ ಮಾಣಿ-ಅನಂತ್ಮಾಣಿ ನಿತ್ರಾಣರಾಗಿ ಒದ್ದಾಡುವುದು ಮಾಮೂಲು. ಈ ಸಂದರ್ಭ ಸ್ನೇಹಿತರಿಗೆಲ್ಲ ಅಸ್ನೋಟಿಕರ್ ಮತ್ತು ಶಿವಾನಂದ್‌ಗೆ ಜೆಡಿಎಸ್ ಸೇರಲು ಪ್ರಶಸ್ತವಾಗಿದೆ. ಈ ಹಣವಂತರು ಬಂದರೆ ದುರ್ಬಲ ಜೆಡಿಎಸ್ ಶಕ್ತಿಶಾಲಿ ಆಗುವುದರಿಂದ ಅವರನ್ನು ಬರಬೇಡವೆಂದು ಹೇಳುವವರ್ಯಾರೂ ಆ ಪಕ್ಷದಲ್ಲಿ ಇಲ್ಲ. ಒಂದು ಮೂಲದ ಪ್ರಕಾರ ಜೆಡಿಎಸ್ ಯಜಮಾನ ಕುಮಾರಸ್ವಾಮಿ ಜತೆ ನಿಕಟ ಸ್ನೇಹವಿರುವ ಆನಂದ್ ಅಸ್ನೋಟಿಕರ್ ಶಿವಾನಂದನಾಯ್ಕರ ಪರ ವಕಾಲತ್ತು ಜೆಡಿಎಸ್‌ನಲ್ಲಿ ಮಂಡಿಸಿದ್ದರಂತೆ. ಈಗಾಗಲೇ ಜೆಡಿಎಸ್‌ನಲ್ಲಿ ಸಕ್ರಿಯನಾಗಿರುವ ಯಲ್ಲಾಪುರದ ಅನಿಲ್‌ಕುಮಾರ್ ಸ್ವಪಕ್ಷದ ಹೈಕಮಾಂಡ್‌ಗೆ ಶಿವಾನಂದನಾಯ್ಕ ಸಂದರ್ಭ ಬಂದಾಗ ಬರ್ತಾರೆಂದು ಹೇಳಿಯೂ ಆಗಿದೆ. ಭಟ್ಕಳ-ಹೊನ್ನಾವರ-ಕಾರವಾರದಲ್ಲಿ ಬಿಜೆಪಿ ಖಾಲಿಯಾಗುವ ದಿನ ದೂರವಿಲ್ಲ.


ಶಿವಾನಂದ ನಾಯ್ಕ

ಇದೇರೀತಿ ಕಾಂಗ್ರೆಸ್‌ನಿಂದಲೂ ಜೆಡಿಎಸ್‌ಗೆ ಪಂಚಾಯತಿ ಫಾರ್ಮೇಷನ್ ನಂತರ ಗುಂಪು-ಗುಂಪಾಗಿ ವಲಸೆ ಶುರುವಾಗುವ ಸಾಧ್ಯತೆಯಿದೆ. 'ಬಂ' ಬೆಟಾಲಿಯನ್‌ನ ಹಲವರು ಇನ್ನೂ ಕಾಂಗ್ರೆಸ್‌ನಲ್ಲಿದ್ದಾರೆ. ಅಲ್ಲಲ್ಲಿ ಕೊನೇ ಕ್ಷಣದ 'ಬಂ' ನಿರ್ಧಾರದಿಂದ ಗೊಂದಲಗೊಂಡ ಆತನ ಅಭಿಮಾನಿಗಳು ಬಂಡಾಯ ಅಭ್ಯರ್ಥಿಗಳಾಗಿ ಕಣದಲ್ಲಿದ್ದಾರೆ. ಇವರೆಲ್ಲಾ ಇಂದಲ್ಲ ನಾಳೆ 'ಬಂ' ಬೆನ್ನಿಗೆ ಬರುವವರೇ. 'ಬಂ' ಪಕ್ಷಾಂತರ ಮಾಡಿದಾಗ- ಹೊಸ ಪಕ್ಷ ಕಟ್ಟಿದಾಗ ಕಣ್ಣುಮುಚ್ಚಿಕೊಂಡು ಹಿಂಬಾಲಿಸುತ್ತಿದ್ದ ಆತನ ಭಾಮೈದ ಶಿರಸಿಯ ಅನಪಡ್ ಭೀಮಣ್ಣ ನಾಯ್ಕ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿರುವುದರಿಂದ ತಕ್ಷಣಕ್ಕೆ ಪಾರ್ಟಿ ಬಿಡದೆ ಕಾದು ನೋಡುವ ತಂತ್ರ ಮಾಡುತ್ತಿದ್ದಾನೆ. ದೇಶಪಾಂಡೆಗೆ ಮಸ್ಕಾ ಹೊಡೆದು ಒಂದಿಷ್ಟು 'ಬಂ' ಬೆಟಾಲಿಯನ್ ಭೂಪರಿಗೆ ಜಿಪಂ-ತಾಪಂ ಟಿಕೆಟ್ ಕೊಡಿಸಿರುವ ಆತ ಗೆದ್ದವರನ್ನೆಲ್ಲ ಜೆಡಿಎಸ್‌ಗೆ ಕರೆದೊಯ್ದರೆ ಆಶ್ಚರ್ಯವಿಲ್ಲ. 'ಬಂ' ಬಿಟ್ಟು ರಾಜಕೀಯ ಮಾಡುವ ಯೋಗ್ಯತೆ ಇಲ್ಲದ ಭೀಮಣ್ಣ ನಾಯ್ಕ ಭಾವನನ್ನು ಹಿಂಬಾಲಿಸುವುದು ಗ್ಯಾರಂಟಿ. ಹಾಗಂತ ಭಾವ-ನೆಂಟನ ಇತಿಹಾಸ-ಭೂಗೋಳ ಬಲ್ಲವರು ಖಡಾಖಂಡಿತವಾಗಿ ಹೇಳುತ್ತಿದ್ದಾರೆ.

ಜಿಲ್ಲೆಯ ರಾಜಕೀಯ ಪಡಸಾಲೆಯಲ್ಲಿ ಆಗುತ್ತಿರುವ ತಲ್ಲಣ ಜೆಡಿಎಸ್‌ನತ್ತ ದೊಡ್ಡ ಮಟ್ಟದ ಧ್ರುವೀಕರಣ ಆಗುವ ಸಾಧ್ಯತೆಯನ್ನು ನಿಚ್ಚಳವಾಗಿ ಬಿಚ್ಚಿಡುತ್ತಿದೆ. ಶಿರಸಿ ಕ್ಷೇತ್ರ ಒಂದನ್ನು ಬಿಟ್ಟರೆ ಜಿಲ್ಲೆಯ ಉಳಿದ ಐದು ಅಸೆಂಬ್ಲಿ ಕ್ಷೇತ್ರಕ್ಕೆ ಜೆಡಿಎಸ್‌ಗೆ ಜಗಜಟ್ಟಿಗಳೇ ಸಿಕ್ಕಂತಾಗಿದೆ. ಕಾರವಾರದಿಂದ ಆನಂದ ಅಸ್ನೋಟಿಕರ್, ಕುಮಟಾದಿಂದ ಹಾಲಿ ಶಾಸಕ ದಿನಕರ ಶೆಟ್ಟಿ, ಭಟ್ಕಳದಿಂದ ಶಿವಾನಂದ ನಾಯ್ಕ, ಯಲ್ಲಾಪುರದಿಂದ ಅನಿಲ್‌ಕುಮಾರ್ ಮತ್ತು ಹಳಿಯಾಳದಿಂದ ಹಾಲಿ ಶಾಸಕ ಸುನಿಲ್ ಹೆಗಡೆ ಎಮ್ಮೆಲ್ಲೆ ಎಲೆಕ್ಷನ್ ಅಭ್ಯರ್ಥಿಗಳೆಂಬ ತೀರ್ಮಾನ ಆಗಿಹೋಗಿದೆಯೆಂಬ ಗುಸುಗುಸು ಜೆಡಿಎಸ್ ಬಿಡಾರದಿಂದ ಕೇಳಿಬರುತ್ತಿದೆ. ಶಿರಸಿಯಲ್ಲಿ 'ಬಂ' ತೋರಿಸುವಾತನಿಗೆ ಛಾನ್ಸ್ ಗ್ಯಾರಂಟಿ.

ಒಂದಂತೂ ಖರೆ; ಜಿಲ್ಲಾ ರಾಜಕಾರಣದ ದಿಕ್ಕು ಬದಲಾಗುತ್ತಿದೆ! ದೆಸೆಯೂ ಬದಲಾದೀತಾ? ಪಾಪಿ ಚೆಡ್ಡಿ ಬಳಗದ ಕೈಗೆ ಸಿಲುಕಿ ಒದ್ದಾಡುತ್ತಿರುವ ಜಿಲ್ಲೆಯ ಜನರ ಮುಕ್ತಿಯ ಹಂಬಲವಿದು!


• ನಹುಶ

ಮೈಸೂರು: ರೆಡ್ಡಿಗಳಿಗೇ ಸೈಡು ಹೊಡೆಯಲಿರುವ ಯಡ್ಡಿ ಶಿಷ್ಯ ಸಿದ್ದು!

ಮುಖ್ಯಮಂತ್ರಿ ಯಡಿಯೂರಪ್ಪನವರು 'ಈ ಚುನಾವಣೆಯಲ್ಲಿ ರೆಡ್ಡಿಗಳ ಸಾಥ್ ಇಲ್ಲದಿದ್ದರೂ ಪರವಾಗಿಲ್ಲ ನಾವೇ ಗೆದ್ದುಕೊಳ್ಳುತ್ತೇವೆ' ಎಂದು ಆತ್ಮವಿಶ್ವಾಸದಿಂದ ಓಡಾಡಲು ಏನು ಕಾರಣ ಎಂಬುದನ್ನು ತಿಳಿಯಲು ಮೈಸೂರು ಜಿಲ್ಲೆಗೆ ಬರಬೇಕು. ಅಲ್ಲಿ ರೆಡ್ಡಿಗಳನ್ನು ಮೀರಿಸುವ ಮಟ್ಟಿಗೆ ಖರೀದಿ ರಾಜಕಾರಣವನ್ನು ಮಾಡಲು ಯಡ್ಡಿಯ ಶಿಷ್ಯ ಸಾಕ್ಷಾತ್ ಸಿದ್ದಲಿಂಗಸ್ವಾಮಿಯೇ ಅವತರಿಸಿದ್ದಾನೆ.

ಕಳೆದ ಒಂದು ವರ್ಷದಿಂದ ಈ ಭಾಗದಲ್ಲಿ ಯಾವುದೇ ಬಿಜೆಪಿ ಕಟೌಟ್ ಪ್ರತ್ಯಕ್ಷವಾದರೂ ಅದರಲ್ಲಿ ವಾಜಪೇಯಿ ಫೋಟೋ ಇರುತ್ತೋ ಇಲ್ಲವೋ, ಆದರೆ ಸಿದ್ದಲಿಂಗಸ್ವಾಮಿಯದಂತೂ ಫೋಟೋ ಇದ್ದೇ ಇರುತ್ತದೆ. ಸ್ವತಃ ಎಚ್.ಡಿ.ಕುಮಾರಸ್ವಾಮಿಯೇ ಬೆಚ್ಚಿಬೀಳುವಂತೆ ಇದೇ ಬುಧವಾರ ಮೈಸೂರಿನ 'ಆಂದೋಲನ' ಪತ್ರಿಕೆಯಲ್ಲಿ ಒಂದು ಜಾಹೀರಾತು ಪ್ರಕಟವಾಗಿದೆ. ಅದರಲ್ಲಿ ಜೆಡಿಎಸ್‌ನ ಜಿಲ್ಲಾ ಪಂಚಾಯತಿ ಅಭ್ಯರ್ಥಿ ರಾಜಣ್ಣ ಎಂಬಾತ ಸಿದ್ದಲಿಂಗಸ್ವಾಮಿಯ ಫೋಟೋ ಹಾಕಿಸಿ ಬಿಜೆಪಿ ಅಭ್ಯರ್ಥಿ ಸಿದ್ದವೀರಪ್ಪನ ಪರವಾಗಿ ಮತಯಾಚಿಸಿದ್ದಾನೆ. ಡೌಟೇ ಇಲ್ಲ, ರಾಜಣ್ಣ ಖರೀದಿಯಾಗಿದ್ದಾನೆ. ಏಕೆಂದರೆ ಸಿದ್ದವೀರಪ್ಪ ಬೇರೆ ಯಾರೂ ಅಲ್ಲ, ಇದೇ ಸಿದ್ದಲಿಂಗಸ್ವಾಮಿಯ ತಮ್ಮ. ಹೀಗೆ ಸಿದ್ದಲಿಂಗಸ್ವಾಮಿಯ ಹಣದ ಮದ ಇಂದು ಮೈಸೂರು ಭಾಗದಲ್ಲಿ ಜೆಡಿಎಸ್‌ನ ಕುಮಾರಸ್ವಾಮಿ ಮತ್ತು ಕಾಂಗ್ರೆಸ್‌ನ ಸಿದ್ದರಾಮಯ್ಯ ಇಬ್ಬರಿಗೂ ಸೈಡು ಹೊಡೆದಿದೆ.

ಬೆಂಗಳೂರಿನಲ್ಲಿ ಕಳೆದ ಹಲವು ವರ್ಷಗಳಿಂದ ಯಡ್ಡಿಯ ಬೆನ್ನು, ಕಾಲು, ಮೈ ತಿಕ್ಕುತ್ತಾ ಸಿದ್ದಲಿಂಗು ಸಂಪಾದಿಸಿದ ಅಮೇಧ್ಯ ಇಂದು ಮೈಸೂರು ಜಿಲ್ಲೆಯಲ್ಲಿ, ಅದರಲ್ಲೂ ನಂಜನಗೂಡು ತಾಲೂಕಿನಲ್ಲಿ ಚೆಲ್ಲಾಡುತ್ತಿದೆ. ಅಲ್ಪಕಾಲದಲ್ಲಿ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲೂ ಕೊಡೆ ಹಿಡಿದರಂತೆ ಎಂಬ ಹಳೆಯ ಗಾದೆ ಈ ಸಿದ್ದಲಿಂಗಸ್ವಾಮಿಗೆ ಸರಿಯಾಗಿ ಅನ್ವಯಿಸುತ್ತದೆ. ಏಕೆಂದರೆ ರಾಜಣ್ಣನಿಗೆ ಕೊಟ್ಟ ಮೊತ್ತ ಒಂದೂ ಕಾಲು ಕೋಟಿ ಎಂಬ ಗುಲ್ಲೆದ್ದಿದೆ. ಇಷ್ಟು ಹಣ ಕೊಟ್ಟರೆ ಸಿದ್ದರಾಮಯ್ಯನವರ ತೀರಾ ಹತ್ತಿರದ ಬಂಟರೂ



ಪಕ್ಷ ಬದಲಾಯಿಸಿದರೆ ಯಾವುದೇ ಆಶ್ಚರ್ಯವಿಲ್ಲ.

ಈ ಪರಿ ಅಸಹ್ಯದ ರಾಜಕಾರಣಕ್ಕೆ ಸಿದ್ದಲಿಂಗಸ್ವಾಮಿ ಕೈಹಾಕಿರುವುದು ಯಾಕೆಂದರೆ ಆತ ಮುಂಬರುವ ಚುನಾವಣೆಯಲ್ಲಿ ಎಮ್ಮೆಲ್ಲೆ ಆಗಬೇಕಂತೆ. ಅದಕ್ಕಾಗಿ ಈತ ಮೈಸೂರಿನ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಗಳಲ್ಲಿ ಬಿಜೆಪಿಯ ಕ್ಯಾಂಡಿಡೇಟ್‌ಗಳನ್ನು ಗೆಲ್ಲಿಸಿಕೊಂಡು ನಂತರ ಎಂಎಲ್‌ಎ ಆಗುವ ಹುಚ್ಚಿಗೆ ಬಿದ್ದು ಮಾಡಬಾರದ್ದನ್ನೆಲ್ಲಾ ಮಾಡುತ್ತಿದ್ದಾನೆ.

ಇದಕ್ಕಿಂತ ಮುಂಚೆ, ಸಿದ್ದಲಿಂಗಸ್ವಾಮಿಯ ಸ್ವಂತ ಊರು ಸೇರಿಕೊಳ್ಳುವ ಕಾರ್ಯ ತಾಲ್ಲೂಕು ಪಂಚಾಯತಿ ಕ್ಷೇತ್ರದಲ್ಲಿ ಬಿಜೆಪಿಯ ಅಭ್ಯರ್ಥಿ ನಾಗಪ್ಪ ಅವಿರೋಧವಾಗಿ ಆಯ್ಕೆಯಾಗಿಬಿಟ್ಟರು! ಅದಕ್ಕೆ ಕಾರಣ ಕಾಂಗ್ರೆಸ್‌ನಿಂದ ಬಿ ಫಾರಂ ಪಡೆದಿದ್ದ ನಿಂಗಣ್ಣ ನಾಮಪತ್ರ ಸಲ್ಲಿಸುವ ಸಮಯಕ್ಕೆ ಸರಿಯಾಗಿ ಹೋಗಿ ತಾಲ್ಲೂಕು ಕಚೇರಿಯಲ್ಲಿ ಕುಳಿತಿದ್ದದ್ದು. ಕಾಂಗ್ರೆಸ್ ಎಂಬ ರಾಷ್ಟ್ರೀಯ ಪಕ್ಷದಿಂದ ತಾಲೂಕು ಪಂಚಾಯತಿಗೆ ಸ್ಪರ್ಧಿಸಬಯಸಿದ್ದ ನಿಂಗಣ್ಣನಿಗೆ ನಾಮಪತ್ರ ಎಲ್ಲಿ ಸಲ್ಲಿಸಬೇಕೆಂದೇ ಗೊತ್ತಿರಲಿಲ್ಲವಂತೆ. ಏಕೆಂದರೆ ಅಷ್ಟು ಹೊತ್ತಿಗಾಗಲೇ ಯಡ್ಡಿ-ಸಿದ್ದು ಜೋಡಿಯಿಂದ 25 ಲಕ್ಷ ರೂಪಾಯಿಗಳನ್ನು ಈ ನುಂಗಣ್ಣ - ಅಲ್ಲ ನಿಂಗಣ್ಣ - ಜೇಬಿಗಿಳಿಸಿದ್ದ ಎಂಬುದು ಕೇವಲ ವದಂತಿಯಿರಲಿಕ್ಕಿಲ್ಲ. ಸಿದ್ದಲಿಂಗಸ್ವಾಮಿಯ ಕುಲಬಾಂಧವನಾದ ನಿಂಗಣ್ಣನಿಗೆ ಬಿ ಫಾರಂ ನೀಡಿದ್ದ ಸಿದ್ದರಾಮಯ್ಯ ಇದನ್ನು ಕೇಳಿ ಬೇಸ್ತು ಬಿದ್ದು ಹೋಗಿದ್ದಾರೆ.

ಇಲ್ಲಿ ಜೆಡಿಎಸ್ ಪಕ್ಷಕ್ಕೆ ಅಭ್ಯರ್ಥಿಯೇ ಸಿಕ್ಕದೆ ಅಲ್ಲಿಂದ ಯಾರೂ ನಾಮಪತ್ರವನ್ನೇ ಹಾಕಲಿಲ್ಲ, ಪಕ್ಷೇತರನಾಗಿ ಅರ್ಜಿ ಹಾಕಿಕೊಂಡಿದ್ದ ಗಿರೀಶ ಎಂಬಾತನಿಗೂ 25 ಲಕ್ಷದ ಲಾಟರಿ ಹೊಡೆದಿದೆಯಂತೆ.

ಮಾಜಿ ಸಚಿವ ಡಿ.ಟಿ.ಜಯಕುಮಾರ್ ಅವರ ಪತ್ನಿ ಸುಧಾ ಜಯಕುಮಾರ್, ಡಿಟಿಜೆ ಬೆಂಬಲಿಗ ಚಿಕ್ಕರಂಗನಾಯ್ಕ, ನಂಜನಗೂಡು ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಮತ್ತು ಹಾಲಿ ಜಿ.ಪಂ ಸದಸ್ಯ ಕೆ.ಬಿ.ಸ್ವಾಮಿ, ಕಾಂಗ್ರೆಸ್‌ನ ಹೆಮ್ಮರಗಾಲ ಸೋಮಣ್ಣ, ಹಾಲಿ ಜಿ.ಪಂ.ಸದಸ್ಯೆ ಹುಲ್ಲಹಳ್ಳಿ ಮಂಗಳಾ ಸೋಮಶೇಖರ್, ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗ ದಲಿತ ಮುಖಂಡ ಕಡಕೋಳ ನಾಗರಾಜ್ ಇವರೆಲ್ಲರೂ ಬಿಜೆಪಿಗೆ ಸೇರಿಕೊಂಡಿದ್ದಾರೆ. ಮೊನ್ನೆಯ ತನಕ ನಾಯಕರ ಮುಖಂಡ ಎಡಬಡಂಗಿ ಅಪ್ಪಣ್ಣ ಬಿಜೆಪಿಯ ಬಾಗಿಲು ಬಡಿಯುತ್ತಿದ್ದು ಇದೀಗ ಒಳ ಹೊಕ್ಕಿಯಾಗಿದೆ.

ಇದ್ದುದರಲ್ಲಿ ಬಿಳಿಗೆರೆ ಜಿ.ಪಂ ಕ್ಷೇತ್ರದ ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿ ಎಲ್.ಮಾದಪ್ಪನೇ ವಾಸಿ. ಮಾದಪ್ಪರ ಬಳಿ ಹಡಬೆ ದುಡ್ಡು ಹಿಡಿದು ಬಂದ ಸಿದ್ದಲಿಂಗಸ್ವಾಮಿ, 'ತಾವು ಕಣದಿಂದ ನಿವೃತ್ತರಾಗಿ ಬಿಜೆಪಿಗೆ ಬೆಂಬಲ ಕೊಡಿ' ಎಂದು ಕೇಳಿದ್ದ, ಆಗ ಮಾದಪ್ಪನವರು ಸಿದ್ದಲಿಂಗಸ್ವಾಮಿಗೆ ಸರಿಯಾಗಿ ಇಕ್ಕಿ, 'ನಿನ್ನ ಲೆವೆಲ್‌ಗೆ ನಾನು ಇಳಿಯುವುದಿಲ್ಲ' ಎಂದು ಆತನನ್ನು ಒದ್ದೋಡಿಸಿದ್ದಾರೆ.


ಮಂಡ್ಯ ಜಿಲ್ಲೆಯಲ್ಲಿ ರೈತ ಸಂಘವು ಕಾಂಗ್ರೆಸ್ ಜೊತೆ ಹೊಂದಾಣಿಕೆ ಮಾಡಿಕೊಂಡು ಸ್ಪರ್ಧಿಸಿದ್ದರೆ, ಮೈಸೂರು ಜಿಲ್ಲೆಯ ದಸಂಸ ಮುಖಂಡರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ತಮಗೆ ಸೀಟು ಕೊಡದಿರುವುದರಿಂದ ಕಾಂಗ್ರೆಸ್ ದಲಿತ ವಿರೋಧಿಯಾಗಿದೆ, ಈಗ ಮೀಸಲು ಕ್ಷೇತ್ರಗಳಿಂದ ಸ್ಪರ್ಧೆಗಿಳಿದವರು ಬುದ್ಧಿವಂತರಲ್ಲ' ಎಂದು ಆರೋಪಿಸಿ ಬಿಜೆಪಿಯನ್ನು ಬೆಂಬಲಿಸುವಂತೆ ಕರೆ ನೀಡಿದ್ದರೆ. ಇನ್ನು ಇಲ್ಲಿನ ಮಾಜಿ ಪ್ರಗತಿಪರರೊಬ್ಬರು ಈ ಹಿಂದೆ ಎಷ್ಟು ಸಕ್ರಿಯವಾಗಿ ಸಿದ್ದು ಪರ ಕೆಲಸ ಮಾಡುತ್ತಿದ್ದರೋ, ಈಗ ಅಷ್ಟೇ ಸಕ್ರಿಯವಾಗಿ ಬಿಜೆಪಿಯ ಪರವಾಗಿ ದುಡಿಯುತ್ತಿದ್ದಾರೆ.

ಮೈಸೂರು ಜಿಲ್ಲೆಯ ರಾಜಕಾರಣ ಯಾವ ಪರಿ ಕೆಟ್ಟುನಿಂತಿದೆ ಎನ್ನುವುದಕ್ಕೆ ಈ ಮೇಲಿನ ಚಿತ್ರಣ ಸಾಕ್ಷಿಯಾಗಿದೆ. ಭೂಹಗರಣ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಮುಂತಾದ ಹತ್ತಾರು ಹಗರಣಗಳಿಂದ ಕೆಸರಿನಲ್ಲಿ, ಕೊಳಕಿನಲ್ಲಿ ಮುಳುಗಿದ್ದ ಬಿಜೆಪಿಗೆ ನೈತಿಕವಾಗಿ, ಸಂಘಟಿತವಾಗಿ ಉತ್ತರ ಕೊಡುವಲ್ಲಿ ಸಿದ್ದರಾಮಯ್ಯ, ಶ್ರೀನಿವಾಸ್ ಪ್ರಸಾದ್, ಮಹದೇವಪ್ಪಗಳು ಸೋತಿದ್ದಾರೆ. ಬೆಂಕಿ ಮಹದೇವ್ ಯಡ್ಡಿ ವಿರುದ್ಧ ಉಗುಳುತ್ತಿರುವ ಬೆಂಕಿಯಲ್ಲಿ ಉರಿಯೇ ಇಲ್ಲದಿರುವುದರಿಂದ ಜೆಡಿಎಸ್‌ಗೆ ಹೆಚ್ಚೇನೂ ಲಾಭವಾಗಿಲ್ಲ.

ಸಿದ್ದಲಿಂಗಸ್ವಾಮಿಗೆ ಬ್ರೇಕ್ ಹಾಕುವ ಕೆಲಸವನ್ನು ಮಾಡದಿದ್ದರೆ ಈತ ಕರ್ನಾಟಕಕ್ಕೆ ಅಪಾಯಕಾರಿಯಾಗಿ ಬೆಳೆಯುವ ಎಲ್ಲಾ ಲಕ್ಷಣಗಳೂ ಇವೆ. ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವ ಛಾತಿ ಯಾರಿಗಿದೆ?

• ಲಕ್ಷ್ಮಣ್ ಚೀರನಹಳ್ಳಿ

ಭ್ರಷ್ಟ ಟ್ರಸ್ಟಿಗಳ ಆರ್ಭಟ ಸಾವಿನ ಸಮ್ಮುಖದಲ್ಲಿ ಸಂಯುಕ್ತ ಕರ್ನಾಟಕ!



ಅಶೋಕ್ ಹಾರ್ನಳ್ಳಿ

ಅಕ್ಷರಾಸಕ್ತರ ವಲಯದಲ್ಲಿ ಈ ರೀತಿಯದ್ದೊಂದು ಗುಮಾನಿ ದಟ್ಟವಾಗಿದೆ. ಯಾಕೆಂದರೆ, ಸಂಯುಕ್ತ ಕರ್ನಾಟಕ ಸಿಬ್ಬಂದಿಯೆ ಟ್ರಸ್ಟಿಗಳ ವಿರುದ್ಧ ತಿರುಗಿ ಬಿದ್ದಿದ್ದಾರೆ. ಭ್ರಷ್ಟ ಟ್ರಸ್ಟಿಗಳು ಬ್ಲಾಕ್‌ಮೇಲ್‌ಗಳ ಮೂಲಕ ಈ 'ಬಂಡಾಯ'ದ ಬಾಯ್ಮುಚ್ಚಿಸಿದ್ದಾರಾದರೂ ಎಲ್ಲರೆದೆಯೊಳಗೂ ಕೆಂಡ ನಿಗಿನಿಗಿಸುತ್ತಿರುವುದು ಸುಳ್ಳಲ್ಲ. ಈ ಆಂತರಿಕ ಬೇಗುದಿಗಳೇ ಸಂಕ ಪತ್ರಿಕೆಯನ್ನು ಸಾವಿನ ಸಮ್ಮುಖದಲ್ಲಿ ತಂದು ನಿಲ್ಲಿಸಿರುವುದು ಸತ್ಯ.

ಅಷ್ಟಕ್ಕೂ ಸಂಯುಕ್ತ ಕರ್ನಾಟಕ ನಿಂತುಹೋದರೆ ಅಕ್ಷರ ಜಗತ್ತಿಗೆ ಒಂದಷ್ಟು ಲಾಭವಾಗಬಹುದೇ ಹೊರತು ನಷ್ಟವೇನಿಲ್ಲ, ಅದೀಗ ಆಳುವ ಮಂದಿಯ ಕಣ್ಣು ಮುಂತಾದ ವ್ರಣಗಳನ್ನು ಒರೆಸುವ ಕರವಸ್ತ್ರದಂತಾಗಿದೆ. ಆದರೆ ಅದರೊಳಗೆ ಬಹುವರ್ಷಗಳಿಂದ ದುಡಿಯುತ್ತಿರುವವರ ಪಾಡು, ಭ್ರಷ್ಟ ಟ್ರಸ್ಟಿಗಳ ನಿರಂತರ ಪೀಡನೆ ಇವೆಲ್ಲ ಚರ್ಚಿಸಬೇಕಾದಂತಹ ಅಂಶಗಳು.

ದೀಪಾವಳಿ ಹಬ್ಬದಿಂದೀಚೆಗೆ ಸಂಕ ಸಿಬ್ಬಂದಿಯ ಅಸಹನೆಯ ಆಟಂಬಾಂಬುಗಳು ಆಸ್ಫೋಟಗೊಳ್ಳಹತ್ತಿದ್ದವು. ಸದ್ಯ ದಿವಂಗತ ಹಾರ್ನಳ್ಳಿ ರಾಮಸ್ವಾಮಿಯ ಮಗ ಅಶೋಕ್ ಹಾರ್ನಳ್ಳಿಯ ಸುಪರ್ದಿಯಲ್ಲಿರುವ ಟ್ರಸ್ಟ್ ಕಡೆಯಿಂದ ಸಿಬ್ಬಂದಿಗಳ ಪರವಾಗಿ ಯಾವುದೇ ಕೆಲಸಗಳಾಗುತ್ತಿಲ್ಲ, ತೀರಾ ನ್ಯಾಯಯುತವಾಗಿ ದಕ್ಕಬೇಕಾದ ಸವಲತ್ತುಗಳೂ ದಕ್ಕದೆ ಇರುವ ಬಗ್ಗೆ ಹಾಗೂ ಪತ್ರಿಕೆ ಹೆಸರಲ್ಲೇ ನುಂಗಿ ನೊಣೆಯುತ್ತಿರುವ ಟ್ರಸ್ಟಿಗಳ ಬಗ್ಗೆ ನಿಷ್ಠಾವಂತ ಸಿಬ್ಬಂದಿ ಆಕ್ರೋಶಗೊಂಡಿದ್ದರು. ಈಗ್ಗೆ ಒಂದು ತಿಂಗಳ ಹಿಂದೆ ಬೋನಸ್ ವಿಚಾರದಲ್ಲೂ ನಖರಾ ಶುರುವಿಟ್ಟರು ನೋಡಿ ಟ್ರಸ್ಟ್‌ನ ದಗಲ್ಬಾಜಿಗಳು? ಆಗ ಅಸಹನೆಯ ಕಟ್ಟೆಯೊಡೆದು ಸಂಕ ಸಿಬ್ಬಂದಿ ಬಹಿರಂಗ ಬಂಡಾಯ ಸಾರಿದ್ದಾರೆ.

ಇದೆಲ್ಲದಕ್ಕೂ ಮೂಲ, ಟ್ರಸ್ಟ್‌ನ ಕಾರ್ಯದರ್ಶಿ ನಾರಾಯಣಮೂರ್ತಿ. ಸಿಬ್ಬಂದಿ ವರ್ಗ ಈ ಬಾರಿ ಒಂದು ತಿಂಗಳ ಸಂಬಳದಷ್ಟು ಬೋನಸ್ ಕೊಡಬೇಕೆಂಬ ಬೇಡಿಕೆಯಿಟ್ಟಿತ್ತು, ಇದಕ್ಕೆ ಮೂರ್ತಿಯೂ ಗೋಣಾಡಿಸಿದ್ದ. ಆದರೆ ಬೋನಸ್ ಹೆಸರಲ್ಲಿ ಕೇವಲ 4 ಸಾವಿರ ರೂಪಾಯಿ ಹಾಗೂ ಎರಡೆರಡು ಶರ್ಟ್ ಕೊಟ್ಟು ಕೈತೊಳೆದುಕೊಳ್ಳಲೆತ್ನಿಸಿದ. ಅದರಲ್ಲೂ ಹದಿನೈದಿಪ್ಪತ್ತು ವರ್ಷದಿಂದ ದುಡಿದವರಿಗೂ, ಈಗ ತಾನೇ ಗುತ್ತಿಗೆ ಆಧಾರದಲ್ಲಿ ಸೇರಿಕೊಂಡಿರುವವರಿಗೂ ಒಂದೇ ರೀತಿಯ ಬೋನಸ್! ಸಹಜವಾಗೇ ಅರ್ಹ ಸಿಬ್ಬಂದಿಗಳಿಗೆ ಅಸಹನೆ ಹೊತ್ತಿಕೊಂಡಿದೆ.

ನಂತರ ಶುರುವಾದದ್ದು ಸಿಬ್ಬಂದಿಗಳ ಬಹಿರಂಗ ಆಕ್ರೋಶದ ಪರ್ವ. ತಮಗಾದ ವಂಚನೆಗಳಿಗೆ ಕಾರಣೀಭೂತನಾದ ನಾರಾಯಣಮೂರ್ತಿ ತೊಲಗಬೇಕೆಂದು ಪತ್ರ ಸಮರ ನಡೆಸಿದರು. ಇದು ಆರಂಭದ ಹಂತದಲ್ಲೇ ಸಂಕದೊಳಗಿರುವ ಪಿನ್ನು ಗಿರಾಕಿಗಳಿಂದ ಮೂರ್ತಿಯ ಕಿವಿ ತಲುಪಿತು. ಇಡೀ ಸಂಸ್ಥೆಯನ್ನೇ ಎಕ್ಕುಟ್ಟಿಸುವಂತೆ ನುಂಗಿ ನೀರು ಕುಡಿದ ಮೂರ್ತಿಗೆ ಈ ಬಾರಿ ಧರ್ಮದೇಟು ಬೀಳೋದು ಖರೆ ಅಂತ ಖಾತ್ರಿಯಾಗಿದ್ದೇ ಕಚೇರಿ ಬಿಟ್ಟು ಭೂಗತನಾದ. ಅಲ್ಲಿಂದಲೇ ರಾಜೀನಾಮೆ ಪತ್ರವೊಂದನ್ನು ಅಶೋಕ್ ಹಾರ್ನಳ್ಳಿಗೆ ರವಾನಿಸಿದ. ಮೂರ್ತಿಯ ಕಳ್ಳಾಟದ ಪಾಲುದಾರನಾದ ಅಶೋಕ್ ರಾಜೀನಾಮೆಯನ್ನು ಅಂಗೀಕರಿಸದೆ ಕೆಲಸಕ್ಕೆ ಬರಲೇಬೇಕಂತ ಪಟ್ಟು ಹಿಡಿದರು. ಮಾನಗೇಡಿ ಮೂರ್ತಿ 'ಆಫೀಸ್‌ಗೆ ಬಂದ್ರೆ ಹೊಡೆದಾಕ್ತಾರೆ' ಅಂತ ಗೋಳು ತೋಡಿಕೊಂಡಿದ್ದನಂತೆ!

ಸಿಬ್ಬಂದಿಯ ಬಂಡಾಯ ಕುತ್ತಿಗೆಗೆ ಬಂದು ಉಂಡ ಅಮೇಧ್ಯಾವನ್ನೆಲ್ಲಾ ಕಾರಿಕೊಳ್ಳಬೇಕಾದೀತೆಂದು ಹೆದರಿದ ಅಶೋಕ್ ಪಕ್ಕಾ ದೌರ್ಜನ್ಯ ಶುರುವಿಟ್ಟರು. ಇದಕ್ಕೆ ಪ್ರಚೋದನೆ ನೀಡಿದವನು ಪ್ರೊಡಕ್ಷನ್ ಮ್ಯಾನೇಜರ್ ಹಾಗೂ ನಿವೃತ್ತಿ ಆದರೂ 5-6 ವರ್ಷದಿಂದ ಕಂಟ್ರಾಕ್ಟ್ ಸೇವೆಯಲ್ಲಿರುವ ಸ.ಕ. ಕಚೇರಿಯನ್ನೇ ಅರೆದು ನುಂಗಿರುವ ಬಸವರಾಜ್. ಈತ, ಯೂನಿಯನ್ ಲೀಡರ್ ಹಾಗೂ ಕಂಪ್ಯೂಟರ್ ವಿಭಾಗದ ಮುಖ್ಯಸ್ಥ ವೆಂಕಟೇಶ ಜೋಷಿಯನ್ನು ಎತ್ತಂಗಡಿ ಮಾಡೋದೇ ಬೆಂಗಳೂರು ಬಂಡಾಯಕ್ಕೆ ಮದ್ದು ಅಂತ ಅಶೋಕನ ಕಿವಿ ಚುಚ್ಚಿದ. ಅದರಂತೆಯೇ ಜೋಷಿ ಮಂಗಳೂರಿಗೆ ಟ್ರಾನ್ಸ್‌ಫರ್ ಆಗಿದ್ದೂ ನಡೆಯಿತು.

ನಂತರ ಅಶೋಕ್ ಸಿಬ್ಬಂದಿಯನ್ನೆಲ್ಲಾ ಕರೆದು ಕೂಡಿಸಿಕೊಂಡು ಜೋಷಿಗಾದ ಗತಿಯೇ ನಿಮಗೂ ಆಗುತ್ತದೆಂದು ಬ್ಲಾಕ್‌ಮೇಲ್ ಮಾಡಲಾರಂಭಿಸಿದರು. ಟ್ರಾನ್ಸ್‌ಫರ್ ಆದರೆ ಬದುಕು ಲಯ ಕಳಕೊಳ್ಳುತ್ತದೆ. ಯಾಕೆಂದರೆ ಇವರು ಕೊಡೋ ಸಂಬಳದಲ್ಲಿ ಹೊಸಾ ಜಾಗೆಯಲ್ಲಿ ಬದುಕು ಕಟ್ಟಿಕೊಳ್ಳುವುದು ದುಸ್ತರ. ಇದೆಲ್ಲದರಿಂದಾಗಿಯೇ ಸಹಜವಾಗಿ ಸಿಬ್ಬಂದಿ ಹೆದರಿದ್ದಾರೆ. ಇದನ್ನೇ ದಾಳವನ್ನಾಗಿಸಿಕೊಂಡ ಅಶೋಕ್ 'ಮ್ಯಾನೇಜ್‌ಮೆಂಟಲ್ಲಿ ತಲೆ ಹಾಕೋಕೆ ನೀವ್ಯಾರು? ಕಾರ್ಯದರ್ಶಿ ರಾಜೀನಾಮೆ ಕೇಳೋಕೆ ನಿಮಗೇನು ಅಧಿಕಾರ ಇದೆ?' ಅಂತೆಲ್ಲ ಆವಾಜು ಹಾಕಿ ಸಿಬ್ಬಂದಿಗಳಿಂದ ಕ್ಷಮೆಯಾಚನೆ ಪತ್ರ ಬರೆಸಿಕೊಂಡಿದ್ದಾರೆ. ಅಲ್ಲಿಗೆ ಕಾರ್ಮಿಕರ ಆಕ್ರೋಶಗಳು ಸಮಾಪ್ತಿಗೊಂಡಂತಾಗಿತ್ತು.

ಆದರೆ ಇದು ಸಂಯುಕ್ತ ಕರ್ನಾಟಕವನ್ನು ಬದುಕಿಸಬಲ್ಲುದಾ ಅಂತ ನೋಡ ಹೋದರೆ ಅದರ ಆಯುಸ್ಸು ಕಣ್ಣಳತೆಯಲ್ಲೇ ಇದ್ದಂತಿದೆ. ಯಾಕೆಂದರೆ, ಇಡೀ ಟ್ರಸ್ಟ್ ತುಂಬಾ ಕೂಳುಬಾಕರೇ ತುಂಬಿ ತುಳುಕುತ್ತಿದ್ದಾರೆ. ದುಡ್ಡನ್ನು ಯಾವ್ಯಾವ ಮಾರ್ಗದಿಂದ ಗೆಬರಬಹುದೆಂಬುದೇ ಇವರ ನಿತ್ಯದ ಚಿಂತೆ!


ಟ್ರಸ್ಟಿನ ಕಾರ್ಯದರ್ಶಿ ನಾರಾಯಣಮೂರ್ತಿಯ ವಿಚಾರಕ್ಕೆ ಬಂದರೆ ಇವನೊಬ್ಬನೇ ಲಕ್ಷಾಂತರ ರೂಪಾಯಿ ದೋಚಿಕೊಂಡಿದ್ದಾನೆ. ಎಲ್ಲಾ ಖರೀದಿ ವ್ಯವಹಾರಗಳೂ ಈತನ ಕೈಕೆಳಗೆ ನಡೆಯುವುದರಿಂದ ಪ್ರತಿದಿನವೂ ಸುಗ್ಗಿಯ ಹಿಗ್ಗು. ಸಂಕ ಪ್ರೆಸ್‌ನ ಯಂತ್ರೋಪಕರಣ ಖರೀದಿಯಿಂದ ಹಿಡಿದು ರದ್ದಿ ಪೇಪರಿನ ಮಾರಾಟದ ತನಕ ಎಲ್ಲದರಲ್ಲೂ ಈತನಿಗೊಂದು ಪಾಲು ಇದ್ದೇ ಇದೆ. ಇದೆಲ್ಲ ಹಣ ಒಗ್ಗೂಡಿಸಿ ಈತನೀಗ ಲಕ್ಷಣವಾಗಿ ಕಾರಲ್ಲಿ ಓಡಾಡುತ್ತಾ ವೈಭವೋಪೇತ ಜೀವನ ನಡೆಸುಮಾಡುತ್ತಿದ್ದಾನೆ.

ಮೇಲ್ಕಂಡದ್ದು ಟ್ರಸ್ಟ್ ಹಾಗೂ ಸಿಬ್ಬಂದಿಯ ಸ್ಥಿತಿ. ಇಷ್ಟೆಲ್ಲದರ ನಡುವೆಯೂ ಜಾಣನೊಬ್ಬ ಸಂಪಾದಕನಾಗಿದ್ದರೆ ಪತ್ರಿಕೆಯಾದರೂ ಒಂದಷ್ಟು ಚೆಂದಗೆ ನಡೆಯುತ್ತಿತ್ತು. ಆದರೆ ಸಂಕದ ಸಂಪಾದಕ ಸ್ಥಾನದಲ್ಲಿರುವಾತ ಹುಣಸವಾಡಿ ರಾಜನ್. ಮುಖ್ಯಮಂತ್ರಿ ಯಡಿಯೂರಪ್ಪನ ಸಂಕಟವನ್ನ ತನ್ನದೇ ಎಂಬಂತೆ ಫೀಲ್ ಮಾಡಿಕೊಂಡು ಶುಷ್ಕವಾಗಿ ಬರೆಯುವ, ಯಡ್ಡಿಯ ಭ್ರಷ್ಟಾಚಾರದ ವಿರುದ್ಧ ಮಾತಾಡುವವರೆಡೆಗೊಂದು ಅಸಹನೆ ವ್ಯಕ್ತಪಡಿಸುವ ಹುಣಸವಾಡಿ ನೀರಸ ಪತ್ರಕರ್ತ. ಲೋಕಾಯುಕ್ತ ಸಂತೋಷ್ ಹೆಗ್ಡೆ ರಾಜೀನಾಮೆ ಕೊಟ್ಟ ಸಂದರ್ಭದಲ್ಲೀತ 'ಯಾಕೆ ಸ್ವಾಮಿ ನಮ್ಮ ಯಡಿಯೂರಪ್ಪನೋರಿಗೆ ತೊಂದ್ರೆ ಕೊಡ್ತೀರಿ' ಎಂಬರ್ಥದಲ್ಲಿ ತನ್ನ ಕಾಲಂ ತುಂಬಾ ಪೇಚಾಡಿಕೊಂಡಿದ್ದರು. ಈತ ಭ್ರಷ್ಟ ಟ್ರಸ್ಟಿಗಳ ವಿರುದ್ಧ ಮಾತಾಡುತ್ತಿಲ್ಲ.



ಹುಣಸವಾಡಿರಾಜನ್

ಇಂಥಾ ವ್ಯವಸ್ಥೆಯಡಿಯಲ್ಲಿ ನೈಜ ಪತ್ರಿಕೋದ್ಯಮ ರೂಪುಗೊಳ್ಳಲು ಸಾಧ್ಯವಿಲ್ಲ. ಅದಕ್ಕೆ ಇತ್ತೀಚಿನ ಸಂಕದ ಪ್ರತಿ ಸಂಚಿಕೆಗಳೂ ಸಾಕ್ಷಿ ಹೇಳುತ್ತವೆ. ಇದೆಲ್ಲದರಿಂದಲೇ ಸುದೀರ್ಘ ಇತಿಹಾಸವಿರುವ ಸಂಯುಕ್ತ ಕರ್ನಾಟಕ ಇಂದು ಸಾವಿನ ಸಮೀಪಕ್ಕೆ ಹೋಗುತ್ತಿರುವಂತಿದೆ.



ರಬ್ಬರ್ ಸ್ಟ್ಯಾಂಪ್ ಕೃಷ್ಣ

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ತಲೆ ಮೇಲಿರುವ ವಿಗ್ ತೆಗೆದರೆ ಅಲ್ಲಿ ಒಂದೇ ಒಂದು ಬಿಳಿ ಕೂದಲೂ ಉಳಿದಿಲ್ಲ. ಅದಕ್ಕಿಂತ ಮುಖ್ಯವಾಗಿ ಅವರಿಗೆ ಈಗೀಗ ಸರಿಯಾಗಿ ಕಿವಿಯೂ ಕೇಳಿಸುತ್ತಿಲ್ಲ. ಆದರೂ ಅವರು ಕಳೆದ ಎರಡು ವರ್ಷಗಳ ಕಾಲ ಭಾರತದ ವಿದೇಶಾಂಗ ಮಂತ್ರಿಯಾಗಿ ಬಹಳ ಸುಲಲಿತವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆದಕ್ಕೆ ಕಾರಣ ಅವರ ಚಾಕಚಕ್ಯತೆಯಲ್ಲ, ಬದಲಾಗಿ ಅವರು ಅಮೆರಿಕಾದ ಸರ್ಕಾರ ನಿರ್ದೇಶಿಸಿದಂತೆ, ನಮ್ಮ ಪ್ರಧಾನಿ ಮನಮೋಹನ್ ಸಿಂಗ್ ಸೂಚಿಸಿದಂತೆ ಎಲ್ಲದಕ್ಕೂ ಕೃಷ್ಣ ಕೋಲೆಬಸವನಂತೆ ತಲೆದೂಗುವುದೇ ಅವರ ಯಶಸ್ಸಿನ ಗುಟ್ಟು!

ಕರ್ನಾಟಕದಲ್ಲಿ ಕಾಂಗ್ರೆಸ್ಸನ್ನು ನೆಲಕಚ್ಚಿಸಿದ್ದರೂ, ಸ್ವತಃ ಲೋಕಸಭಾ ಚುನಾವಣೆಗೆ ನಿಲ್ಲುವ ಧೈರ್ಯವನ್ನು ತೋರದಿದ್ದರೂ, ಕೃಷ್ಣರಿಗೆ ಕೇಂದ್ರ ಸಚಿವ ಸಂಪುಟದಲ್ಲಿ ವಿದೇಶಾಂಗ ಸಚಿವ ಎಂಬ ಹುದ್ದೆಯನ್ನು ದಯಪಾಲಿಸಲಾಗಿತ್ತು. ಅದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಒಂದು, ರಾಜ್ಯದಲ್ಲಿನ ಅವರ ಜಾತಿ ಒಕ್ಕಲಿಗರನ್ನು ಓಲೈಸುವುದು. ಎರಡು, ಮನಮೋಹನ್ ಸಿಂಗ್‌ರ ವಿದೇಶಾಂಗ ನೀತಿಗಳನ್ನು ತುಟಿಕ್‌ಪಿಟಿಕ್ ಎನ್ನದೆ ಪಾಲಿಸುವ ಕೈಗೊಂಬೆಯಂತೆ ಕೃಷ್ಣರ ವ್ಯಕ್ತಿತ್ವ ಇದ್ದದ್ದು.

ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ತಾನೋರ್ವ ಅರ್ಥಶಾಸ್ತ್ರಕ ತಜ್ಞ ಮತ್ತು ರಾಯಭಾರಿ ಎಂಬ ಭ್ರಮೆ ಇದೆ. ಹೀಗಿರುವುದರಿಂದಲೇ ಅವರು ವಿದೇಶಾಂಗ ನೀತಿಗಳನ್ನು ಕೃಷ್ಣರ ವಿದೇಶಾಂಗ ಸಚಿವಾಲಯಕ್ಕೆ ಬಿಟ್ಟುಕೊಡದೆ ತಾನೇ ರಿಮೋಟ್ ಕಂಟ್ರೋಲ್‌ನಂತೆ ಆ ಖಾತೆಯನ್ನು ನಿರ್ವಹಿಸುತ್ತಿದ್ದಾರೆ. ಕೃಷ್ಣ ಕೂಡಾ ಸಿಂಗ್‌ರೊಂದಿಗೆ ಸಹಕರಿಸುತ್ತಾ ಬಂದಿ ದ್ದಾರೆ.

ಅಂದಹಾಗೆ ಸಿಂಗ್‌ರಂತೆ ಕೃಷ್ಣರಿಗೂ ಈಗ 78 ವರ್ಷ ವಯಸ್ಸಾಗಿದ್ದು ಅವರಿಬ್ಬರೂ ಸಚಿವ ಸಂಪುಟದ ಅತಿ ಹಿರಿಯ (ಅಂದರೆ ಮುದಿಯ) ಸದಸ್ಯರಾಗಿದ್ದಾರೆ.


ಈಗ ಸಚಿವ ಸಂಪುಟದಲ್ಲಿರುವ ಕೆಲ ಹಿರಿಯರಿಗೆ ಗೇಟ್‌ಪಾಸ್ ನೀಡಿ ಕಾಂಗ್ರೆಸ್‌ನ ಕೆಲ ಕಿರಿಯರಿಗೆ ಸ್ಥಾನ ಕಲ್ಪಿಸುವ ಉದ್ದೇಶ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಗಾಂಧಿ ಮತ್ತಾಕೆಯ ಪುತ್ರ ರಾಹುಲ್ ಗಾಂಧಿಯವರದ್ದಾಗಿದೆಯಂತೆ. ಈಗ ಅವರಿಬ್ಬರ ಕಣ್ಣು ಬಿದ್ದಿರುವುದು ಸಿಂಗ್‌ರ ರಬ್ಬರ್ ಸ್ಟ್ಯಾಂಪ್‌ನಂತೆ ಕಾರ್ಯ ನಿರ್ವಹಿಸುತ್ತಿರುವ ಕೃಷ್ಣರ ಮೇಲೆ.

ಇತ್ತೀಚೆಗೆ ಬುರಾರಿಯಲ್ಲಿ ನಡೆದ ಕಾಂಗ್ರೆಸ್ ಪಕ್ಷದ **Plenary** ಮೀಟಿಂಗ್‌ನಲ್ಲಿ ವಿದೇಶಾಂಗ ನೀತಿಯ ಬಗ್ಗೆ ಚರ್ಚೆ ನಡೆದಾಗ ಅದರಲ್ಲಿ ಭಾಗವಹಿಸಲು ಕೃಷ್ಣರನ್ನು ವೇದಿಕೆಗೆ ಆಹ್ವಾನಿಸಲೇ ಇಲ್ಲ. ಮಾತ್ರವಲ್ಲ, ಕೃಷ್ಣರ ಬದಲಾಗಿ ವಾಣಿಜ್ಯ ಸಚಿವ ಆನಂದ್ ಶರ್ಮಾ ಮತ್ತು ಕಾಂಗ್ರೆಸ್ ವಕ್ತಾರೆ ಜಯಂತಿ ನಟರಾಜನ್ ಮಾತನಾಡಿದರು.

ಇಂತಹ ಮುಖಭಂಗಕ್ಕೆ ಗುರಿಯಾದ ಕೃಷ್ಣರನ್ನು ಸದ್ಯದಲ್ಲೇ ಸಚಿವ ಸಂಪುಟದಿಂದ ಉಚ್ಚಾಟನೆ ಮಾಡಲಾಗುತ್ತದೆ ಎಂದು ದೆಹಲಿಯ ಪತ್ರಕರ್ತರು ಮತ್ತು ಕಾಂಗ್ರೆಸ್ ನಾಯಕರು ಚರ್ಚಿಸುತ್ತಿದ್ದಾರೆ. ಅಷ್ಟೇ ಅಲ್ಲ, ಅವರನ್ನು ಯಾವುದಾದರೂ ರಾಜ್ಯದ ರಾಜ್ಯಪಾಲರಾಗಿ ಬಿಸಾಡಲಾಗುತ್ತದೆ ಎಂಬ ಮಾತೂ ಕೇಳಿಬರುತ್ತಿದೆ.

ಈಗಾಗಲೇ ಸಿಂಗ್‌ರ ರಬ್ಬರ್ ಸ್ಟ್ಯಾಂಪ್‌ನಂತೆ ವರ್ತಿಸುತ್ತಿರುವ ಕೃಷ್ಣರಿಗೆ ರಾಜ್ಯಪಾಲನಂತಹ ರಬ್ಬರ್ ಸ್ಟ್ಯಾಂಪ್ ಹುದ್ದೆ ಸರಿಯಾಗಿ ಹೊಂದುತ್ತದೆ ಎಂಬುದು ಕೆಲ ಕಿಡಿಗೇಡಿ ಕಾಂಗ್ರೆಸ್ಸಿಗರ ನಡುವೆ ಚಾಲ್ತಿಗೆ ಬಂದಿರುವ ಜೋಕ್! ●

ಆಹಾ... ವರುಣ್ ಗಾಂಧಿಗೆ ಮದುವೆಯಂತೆ!



"ಮುಸಲ್ಮಾನರ ಕೈಗಳನ್ನು ಕಡಿಯಿರಿ, ಸಿಖ್ಖರ ಗಡ್ಡವನ್ನು ಕತ್ತರಿಸಿ" ಎಂದೆಲ್ಲ ಕಳೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಅಬ್ಬರಿಸಿ ಕೆಲ ದಿನಗಳ ಕಾಲ ಜೈಲುವಾಸ ಕಂಡಿದ್ದ ಬಿಜೆಪಿಯ ಮರಿ ಚಿಡ್ಡಿನಾಯಕ ವರುಣ್ ಗಾಂಧಿ ಸದ್ಯದಲ್ಲೇ ಮದುವೆ ಆಗುತ್ತಿದ್ದಾನಂತೆ.

ಅವನ ಕೈ ಹಿಡಿಯಲಿರುವವಳು ಯಾಮಿನಿ ರಾಯ್ ಚೌಧುರಿ ಎಂಬ ಬೆಂಗಾಳಿ ಕನ್ಯೆ. ಈಗ ದೆಹಲಿಯ ನಿವಾಸಿ ಆಗಿರುವ ಯಾಮಿನಿ ಅದೆಂತಹದ್ದೋ ಆರ್ಟ್-ಪಾರ್ಟ್ ಕಲೆಗಳನ್ನು ಕಲಿತಿದ್ದಾಳಂತೆ. ಅಂದಹಾಗೆ ಈ ಯಾಮಿನಿ ಅಪ್ಪಟ ಬ್ರಾಹ್ಮಣ ಜಾತಿಯವಳಂತೆ.

ಆಕೆಯ ಜಾತಿ ಯಾಕೆ ಮುಖ್ಯವೆಂದರೆ ವರುಣ್‌ನ ಮುತ್ತಜ್ಜ–ಅಂದರೆ ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರು 94 ವರ್ಷಗಳ ಹಿಂದೆ ಕಮಲ ಅವರನ್ನು ಮದುವೆ ಆದ ನಂತರ ನೆಹರೂ ಕುಟುಂಬದ ಯಾವ ಕುಡಿಯೂ ಬ್ರಾಹ್ಮಣರನ್ನು ಮದುವೆ ಆಗಿಲ್ಲ.

ಹಾಗೇ ಸುಮ್ಮನೆ ಗಮನಿಸಿ: ನೆಹರೂ ಅವರ ಏಕೈಕ ಪುತ್ರಿ ಇಂದಿರಾ ...ರು ಫಿರೋಜ್ ಗಾಂಧಿ ಎಂಬ ಪಾರ್ಸಿಯನ್ನು ಮದುವೆಯಾಗಿದ್ದರು. ಹಾಗೆಯೇ ಇಂದಿರಾರ ಪುತ್ರರಲ್ಲಿ ರಾಜೀವ್ ...ಧಿ ಸೋನಿಯಾ ಎಂಬ ಕ್ರಿಶ್ಚಿಯನ್‌ರನ್ನು ಮದುವೆ ಆಗಿದ್ದರೆ, ಅವರ ಇನ್ನೋರ್ವ ಪುತ್ರ ಸಂಜಯ್ ಮನೇಕಾ ಎಂಬ ... ಸಮುದಾಯದವಳೊಂದಿಗೆ ವಿವಾಹವಾಗಿದ್ದರು. ರಾಜೀವ್-ಸೋನಿಯಾರ ಪುತ್ರಿ ಪ್ರಿಯಾಂಕ ಕೂಡಾ ಅರೆ ...ರುನ್ ಮತ್ತು ಅರೆ ಹಿಂದೂವಾದ ರಾಬರ್ಟ್ ವದ್ರಾ ಎಂಬಾತನನ್ನೇ ವರಿಸಿದಳು.

ಈಗ ಸಂಜಯ್-ಮನೇಕಾರ ಮಗ ವರುಣ್ ಯಾಮಿನಿಯೆಂಬ ಬ್ರಾಹ್ಮಣ ಕನ್ಯೆಯನ್ನು ಮದುವೆಯಾಗಲು ...ರಿ ನಡೆಸಿದ್ದಾನೆ. ಹೇಳಿಕೇಳಿ ಇತರೆ ರಾಜ್ಯಗಳಿಗಿಂತ ಶೇಕಡವಾರು ಹೆಚ್ಚಿನ ಸಂಖ್ಯೆಯಲ್ಲಿ ...ಹ್ಮಣರು ಇರುವ ಉತ್ತರಪ್ರದೇಶದ ಫಿಲಿಬಿಟ್ ಕ್ಷೇತ್ರವನ್ನು ವರುಣ್ ಪ್ರತಿನಿಧಿಸುತ್ತಿದ್ದಾನೆ.

...ಅದೆಲ್ಲ ಬದಿಗಿರಲಿ, 30 ವರ್ಷ ವಯಸ್ಸಿನ ವರುಣ್ ಹಸೆಮಣೆ ಏರುತ್ತಿದ್ದರೂ ...ಯಲ್ಲಿ ಆತನಿಗೆ ಅಣ್ಣನಾದ ಕಾಂಗ್ರೆಸ್‌ನ 'ಯುವರಾಜಕುಮಾರ' ರಾಹುಲ್ ಗಾಂಧಿ ...ಕ್ಕೆ ಇನ್ನೂ ಭಾವಿ ಪತ್ನಿಯ ತಲಾಶ್‌ನಲ್ಲಿದ್ದಾನೆ.

...ನೋಡಲು ಸ್ಮಾರ್ಟ್ ಆಗಿರುವ ರಾಹುಲ್‌ಗೆ ಈಗಾಗಲೇ 40 ವರ್ಷ ತುಂಬಿದೆ. ... ಫಾರಿನ್ ಗೆಳತಿ ಟಾಟಾ ಹೇಳಿ ಈಗಾಗಲೇ ಕೆಲ ವರ್ಷಗಳಾಗಿದೆ. ತಲೆ ಮೇಲಿನ ...ಲೂ ಇತ್ತೀಚೆಗೆ ಕಡಿಮೆ ಆಗುತ್ತಿರುವಂತಿದೆ. ಆತನನ್ನು ಮದುವೆ ಆಗಲು ಸಾವಿರಾರು ...ಗಿಯರು ಕಾತುರರಾಗಿದ್ದರೂ ಎಂಥವರನ್ನು ತಾನು ಮದುವೆ ಆಗಬೇಕು ಎಂಬ ...ಸಲ್ಲಿ ರಾಹುಲನೂ, ಯಾರು ತನ್ನ ಸೊಸೆ ಆಗಲಿದ್ದಾರೆ ಎಂಬ ಆತಂಕದಲ್ಲಿ ಆತನ ... ಸೋನಿಯಾ ಗಾಂಧಿ ಇರುವಂತಿದೆ.

...ವಾಕ್ಸ್ ವರುಣ್ ಗಾಂಧಿ ಮದುವೆ ಆಗುತ್ತಿರುವ ಈ ಸಂದರ್ಭದಲ್ಲಿ 'ಕ್ಯೂಟ್' ...ಲ್ ಕೂಡಾ ಆದಷ್ಟು ಬೇಗ ಹಸೆಮಣೆ ಏರುವಂತಾಗಲಿ ಎಂಬುದು ಕಾಂಗ್ರೆಸ್‌ಗಳ ...ಷೆ ಆಗಿದ್ದರೂ ಅಚ್ಚರಿಯಿಲ್ಲ! ●




ಮಂಡ್ಯದಲ್ಲಿ ಕೈ ಕಮಲ ಹಿಡಿದಿದ್ದು ನಿಜವೇ?

"ಈ ಕಾಂಗ್ರೆಸ್ಸಿನವರು ಜಿಲ್ಲಾ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ" ಎಂದು ಹೋದಲ್ಲಿಬಂದಲ್ಲಿ ಕೂಗಾಡುತ್ತಿರುವ ಕುಮಾರಣ್ಣ ಮತ್ತು ಚಲುವಣ್ಣನ ಮಾತನ್ನ ಕಾಂಗ್ಯೆಗಳು ಗಂಭೀರವಾಗಿ ಪರಿಗಣಿಸಿದರಂತಲ್ಲಾ. ಇಂತಹ ಅಪವಿತ್ರ ಮೈತ್ರಿ ನಿಜವೆ ಎಂದು ಅವರು ಪರಿಶೀಲಿಸಿದಾಗ, ಮಂಡ್ಯ ಜಿಲ್ಲೆ ಮಟ್ಟಿಗೆ ಕುಮಾರಸ್ವಾಮಿ ಪಾರ್ಟಿ ಬಿಜೆಪಿ ಹಂಗಿಗೆ ಬಿದ್ದಿರುವುದು ಪತ್ತೆಯಾಗಿದೆಯಂತಲ್ಲಾ. ಯಾವುದೇ ಪಾರ್ಟಿ ಅಧಿಕಾರಕ್ಕೆ ಬಂದರೂ ತನ್ನ ಅಕ್ರಮ ಮತ್ತು ಕೇಸುಗಳಿಂದ ಬಚಾವಾಗಲು ಆಡಳಿತ ಪಕ್ಷದ ಅಧಿಪತಿಯ ಕಾಲಿಡಿಯುವ ಶಿವರಾಮೇಗೌಡ, ಎಡೂರಪ್ಪನ ಎಡಗೈಯಾಗಿರುವುದಲ್ಲದೆ "ಮಂಡ್ಯದಲ್ಲಿ ಬಿಜೆಪಿ ಗೆಲ್ಲಿಸಿ ತರುವ ಜವಾಬ್ದಾರಿ ನನಗಿರಲಿ" ಎಂದು ಯಡ್ಡಿಯಿಂದ ಕಾಸು ಕಿತ್ತು ಪರಾರಿಯಾದವನು ಮಂಡ್ಯದಲ್ಲೂ ಯಾರ ಮೊಬೈಲ್‌ಗೂ ಸಿಗುತ್ತಿಲ್ಲವಂತಲ್ಲಾ.

ಮಂಡ್ಯದಲ್ಲಿ ಬಿಜೆಪಿ ಅಭ್ಯರ್ಥಿಗಳು ಮಣ್ಣುಮುಕ್ಕುವುದು ಗ್ಯಾರಂಟಿ. ಇಲ್ಲಿ ಬಿಜೆಪಿಗಳು ಸೋಲುವುದರಿಂದ ಕಾಂಗ್ಯೆಗಳ ಬಾಯಿಗೆ ಮಣ್ಣು ಹಾಕಲೇಬೇಕೆಂದು ನಿರ್ಧರಿಸಿದ ಶಿವರಾಮೇಗೌಡ, ಚಲುವಣ್ಣನನ್ನು ಸಂಪರ್ಕಿಸಿ "ಹಲೋ ಬ್ರದರ್, ನೀವೇನೂ ಯೋಚನೆ ಮಾಡಬೇಡಿ. ಈ ಬಿಜೆಪಿ ಓಟುಗಳೆಲ್ಲ ಜೆಡಿಎಸ್‌ಗೆ ಟರ್ನಾಗಂಗೆ ಮಾಡ್ತಿನಿ" ಎಂದುಬಿಟ್ಟನಂತಲ್ಲಾ. ಇದರಿಂದ ಪುಲಕಿತನಾದ ಚಲುವಣ್ಣ "ತುಂಬ ಥ್ಯಾಂಕ್ಸ್ ಬ್ರದರ್. ನಾಸೀಗ್ಲೆ ಡವುಟ್ ಬರದಂಗೆ ಸ್ಟೇಟ್‌ಮೆಂಟ್ ಕೊಡ್ತೀನಿ" ಎಂದದ್ದೂ ಅಲ್ಲದೆ "ಸದರಿ ಅಕ್ರಮ ಸಂಬಂಧದ ವಿರುದ್ಧವಾಗಿ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಒಳಒಪ್ಪಂದ ಮಾಡಿಕೊಂಡಿವೆ" ಎಂಬ ಮಾತನ್ನ ಕುಮಾರಣ್ಣನ ಬಾಯಲ್ಲೂ ಹೇಳಿಸಿದರಂತಲ್ಲಾ, ಥೂತ್ತೇರಿ!

****



ಇತ್ತ ಮಂಡ್ಯ ಜಿಲ್ಲೆಯದು ಈ ಕತೆಯಾದರೆ, ಅತ್ತ ಶಿವಮೊಗ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ ಪಾರ್ಟಿಯಿಂದ ಕಾಸು ತೆಗೆದುಕೊಂಡ ಕುಮಾರ್ ಬಂಗಾರಪ್ಪ, ಅಲ್ಲಿ ಚುನಾವಣೆ ಮುಗಿದರೂ ಶಿವಮೊಗ್ಗ ತಲುಪಿಲ್ಲವಂತಲ್ಲಾ. 'ಬಂ' ಸಂಚಿನಿಂದ ಕುಮಾರ್ ಬಂಗಾರಿ ಮನೆ ಹರಾಜಿಗೆ ಬಂದಿತ್ತು, ಬಂಗಾರಪ್ಪನೇನೋ ಕುಮಾರಸ್ವಾಮಿ ಕಾಲಿಗೆ ಬಿದ್ದು ಬಚಾವಾದರು. ಆದರೆ 'ಕುಬಂ' ಎಲ್ಲಿಂದ ಹಣ ತರಬೇಕು? ಅದಕ್ಕಾಗಿ ಸೂಕ್ತ ಸಂದರ್ಭದಲ್ಲಿ ಸಿಕ್ಕ ಕಾಂಗ್ರೆಸ್ ನಿಧಿಯೊಂದಿಗೆ ಸಾಲ ಕೊಟ್ಟವರ ಮನೆಗೆ ಹೋಗಿರಬಹುದೆಂದು ಕಾಂಗ್ಯೆ ಕಕವಾಗಳು ಅಳುದನಿಯಲ್ಲಿ ಆಡಿಕೊಳ್ಳುತ್ತಿದ್ದಾರಂತಲ್ಲಾ. ಇದನ್ನು ಕೇಳಿದ ಬಂಗಾರಪ್ಪ ತುಂಬ ಖುಷಿಯಿಂದ "ಕೃಷ್ಣ ನೀ ಬೇಗನೇ ಬಾರೋ. ಬೇಗನೆ ಬಂದೂ ಮುಖವನ್ನು ತೋರೋ ಕೃಷ್ಣಾ..." ಎಂದು ಶೀಟಿ ಹೊಡೆಯುತ್ತ "ನಾನು ನನ್ನ ಹಿರಿಮಗನ್ನ ಯಾಕೆ ದೂರ ಇಟ್ಟಿದ್ದೀನಿ ಅಂತ ಈಗ್ಲಾದ್ರೂ ಗೊತ್ತಾಯ್ತೇನ್ರಿ? ನನ್ನ ಜೀವನದಲ್ಲಿ ನಾನೆಂದೂ ಮತದಾರರಿಗೆ ತೊಂದ್ರೆ ಕೊಟ್ಟಿಲ್ಲ. ನಾನು ತೊಂದ್ರೆ ಕೊಟ್ಟಿರೋದು ಬರೀ ಕಳ್ಳುಬಳ್ಳಿಗೆ. ಇದು ಬಂಗಾಪ್ಪನ ಸ್ಟೈಲ್" ಎಂದರಂತಲ್ಲಾ. ಕೂಡಲೇ ಇಂಧೋಳ ರಾಗವನ್ನು ತಾರಕದಲ್ಲಿ ಎತ್ತಿಕೊಂಡು "ಕುಮಾರಣ್ಣ ನನ್ನ ನಾಯಕ. ಅವರಪ್ಪ ಅವನ ನಾಯಕ. ಇನ್ನ ನಾನೇನಿದ್ರು ಅವರ ಸೇವಕ" ಎಂದು ಕಣ್ಮುಚ್ಚಿ ಹಾಡತೊಡಗಿದರಂತಲ್ಲಾ, ಥೂತ್ತೇರಿ!!

****

ಕರ್ನಾಟಕದ ರಾಜ್ಯಪಾಲರಿಗೂ ಎಡೂರಪ್ಪನಿಗೂ ಬಿದ್ದ ಗುದುಮುರುಗಿ ಬಿಗಿಯಾಗುತ್ತಾ, ಯಾಕೋ ತನಗೇ ಯಡವಟ್ಟಾಗುವುದನ್ನು ಯಡ್ಡಿ ಗಮನಿಸಿದರಂತಲ್ಲಾ. ಆಗ ಮಾಜಿ ವಕೀಲ, ಮಾಜಿ ಕಾಂಗ್ಯೆ, ಮಾಜಿ ದಳ ಇತ್ಯಾದಿ ಯಾವ್ಯಾವುದರಿಂದಲೂ ಮಾಜಿಯಾಗಿ ಈಗ ಬಿಜೆಪಿಗಳ ಭಾವನಂತಿರುವ ಡಿ.ಬಿ. ಚಂದ್ರೇಗೌಡನೆಂಬ ಹಳೇ ಪುಟ್‌ರಗ್ಗನ್ನು ಸಂಪರ್ಕಿಸಿ "ನೀರಾದರೂ ಬಾಯಿಬಿಟ್ಟು ನನಗೆ ಸಹಾಯ ಮಾಡಿ" ಎಂದು ಬೇಡಿಕೊಂಡರಂತಲ್ಲಾ. ಕೂಡಲೇ ಚಂದ್ರೇಗೌಡ ಮಹಾ ಕಾನೂನು ಪಂಡಿತನ ಹಾವಭಾವ ಮತ್ತು ದನಿಯಲ್ಲಿ "ರಾಜ್ಯಪಾಲರು ತಮ್ಮ ಕರ್ತವ್ಯದ ವ್ಯಾಪ್ತಿ ಮೀರಿ ಕೆಲಸ ಮಾಡೋದೆ ಆದ್ರೆ, ಅದರ ಪರಿಣಾಮವನ್ನ ಎದುರಿಸಬೇಕಾಗುತ್ತದೆ" ಎಂದರಂತಲ್ಲಾ. ಇದನ್ನು ಗಮನಿಸಿದ ರಾಜ್ಯಪಾಲರು "ನಾನು ಕರ್ನಾಟಕಕ್ಕೆ ನೌಕರಿ ಹುಡುಕಿ ಬಂದಿರುವ ನಿರುದ್ಯೋಗಿಯಲ್ಲಾ" ಎಂದು ಗುಡುಗಿದ ಕೂಡಲೇ ಗೌಡ ಎಂಬ ಪುಟ್‌ರಗ್ಗಿನ ಸದ್ದು ನಿಂತೇಹೋಯ್ತಂತಲ್ಲಾ, ಥೂತ್ತೇರಿ!!

ಥೂತ್ತೇರಿ

–ಯಾಹೂ

****

ಯಡ್ಡಿ ಸರ್ಕಾರದಲ್ಲಿ ನಡೆದಿರುವ ಯರ್‍ರಾಬಿರ್‍ರಿ ಅಕ್ರಮಗಳ ವಿವರ ಕೊಡಿ ಎಂದು ರಾಜ್ಯಪಾಲರು ಕೇಳಿದ್ದಕ್ಕೆ ಎಡೂರಪ್ಪ "ನನ್ನ ಸರ್ಕಾರದಲ್ಲಿ ಏನೇನು ನಡೆದಿಲ್ಲ" ಎಂದು ಒಂದೇ ಸಾಲಿನಲ್ಲಿ ಉತ್ತರಿಸಿದರಂತಲ್ಲಾ. ಇದರಿಂದ ದಂಗುಬಡಿದ ರಾಜ್ಯಪಾಲರು, "ಈ ನಾಡಿನಲ್ಲಿ ನಡೆಯುತ್ತಿರುವ ಗಣಿ, ಅರಣ್ಯ ಲೂಟಿಯನ್ನು ತಡೆಯಲಾರದ ಅಸಮರ್ಥನಾಗಿರುವ ನನ್ನನ್ನ ಕ್ಷಮಿಸಿ" ಎಂದು ಯಡ್ಡಿ ಸದನದಲ್ಲೇ ಹೇಳಿದ್ದನ್ನು ನೆನಪಿಸಿಕೊಂಡರಂತಲ್ಲಾ. ಆದರೀಗ ಎಡೂರಪ್ಪನ ಒಂದು ಸಾಲಿನ ವಿವರದಿಂದ ಕೆಂಪಾಗಿರುವ ರಾಜ್ಯಪಾಲರು, ಸಂವಿಧಾನದ ಸುದ್ದಿ ತೆಗೆದು ಯಡ್ಡಿಯನ್ನು ಹೆದರಿಸಿದರಂತಲ್ಲಾ. ಈ ನಡುವೆ ಕೇಂದ್ರದ ದೊಣ್ಣೆನಾಯಕರು "ನಾವು ಈ ಹಾಳು ಕಾಂಗ್ಯೆಗಳ ಕಟಕಿ ಮಾತನ್ನು ಕೇಳಲಾಗುವುದಿಲ್ಲ. ನೀವೇ ಇಲ್ಲಿಗೆ ಬಂದು ಉತ್ತರ ಕೊಡಿ" ಎಂದು ಯಡ್ಡಿಗೆ ಮೆಸೇಜು ಬಿಟ್ಟರಂತರಲ್ಲಾ. ಕೂಡಲೇ ಪಂಚಾಯ್ತಿ ಚುನಾವಣೆಯ ಉತ್ಸಾಹ ಕಳೆದುಕೊಂಡ ಯಡ್ಡಿ "ನಾನು ಕೇಂದ್ರಕ್ಕೆ ಹೋಗುತ್ತೇನೆ" ಎಂದು ಎದುರಿದ್ದ ಜನಗಳನ್ನ ನೋಡಿದಾಗ ಬಿಜೆಪಿ ಪಾರ್ಟಿಯವರ ಮುಖದಲ್ಲೇ ಮಂದಹಾಸ ಮಿನುಗಿತಂತಲ್ಲಾ, ಥೂತ್ತೇರಿ!!

****

"ನಾನು ಕೇಂದ್ರಕ್ಕೆ ಹೋಗುತ್ತೇನೆ" ಎಂದು ಯಡ್ಡಿ ಹೇಳಿದ ಕೂಡಲೇ ನಿಷ್ಠಾವಂತ ನಿಷ್ಠರು ಯಡ್ಡಿಗೆ ಅಡ್ಡಮಲಗಿ ಪ್ರತಿಭಟಿಸಬೇಕಿತ್ತು, ಯಡ್ಡಿ ಜೇಬಲ್ಲಿರುವ ಬಾಚಣಿಗೆ ಕಿತ್ತುಕೊಂಡು ಇದರಲ್ಲೇ ಇರಿದುಕೊಂಡು ಸಾಯುತ್ತೇವೆ ಎನ್ನಬೇಕಿತ್ತು, "ಬರುವ ಸರ್ಕಾರ ನಮ್ಮ ಕಂಟ್ರಾಕ್ಟಿನ ಬಿಲ್ ಮಾಡದಿದ್ದರೆ ಗತಿಯೇನು. ನೀವು ಹೋಗಕೂಡದು. ಇಲ್ಲೇ ಇರಬೇಕು" ಎನ್ನಬೇಕಿತ್ತು, ಆದರೆ ಅದ್ಯಾವುದೂ ಸಂಭವಿಸದೆ ಯಡ್ಡಿಯನ್ನಾಗಲೇ ಅರ್ಧ ಬೀಳ್ಕೊಟ್ಟಿದ್ದಾರಂತಲ್ಲಾ.

ಇತ್ತ ಪಂಚಾಯ್ತಿ ತೀರ್ಮಾನವೂ ಯಡ್ಡಿಗೆ ವಿರುದ್ಧವಾಗಲಿದೆಯಂತಲ್ಲಾ, ಈ ನಡುವೆ ತಲೆಯಲ್ಲಿ ಮೆದುಳಿನ ಕೊರತೆ ಅನುಭವಿಸುತ್ತಿರುವ ಈಶ್ವರಪ್ಪ ಯಡ್ಡಿ ನಿರ್ಗಮನದ ಸುದ್ದಿಯಿಂದ ಆಗಿರುವ ಸಂತೋಷವನ್ನು ತೋರಗೊಡದೆ ಶನಿಪೂಜೆಗೆ ತೊಡಗಿದ್ದಾನಂತಲ್ಲಾ, ಆದರೂ ಯಡ್ಡಿ ನಂತರ ಈಶ್ವರಿ ಎಂಬ ಸೊಲ್ಲು ಎಲ್ಲೂ ಇಲ್ಲದ್ದನ್ನು ನೋಡಿ ಅಂತ ಸೊಲ್ಲು ಹುಟ್ಟಿಸಲು ಏನು ಮಾಡಬೇಕು ಎಂದು ನಾಲಿಗೆಯಲ್ಲಿ ತುಟಿ ಸವರುತ್ತಾ ಕುಳಿತಿದ್ದಾನಂತಲ್ಲಾ, ಥೂತ್ತೇರಿ!! ●



ನ್ಯಾಯಾಧೀಶರಿಗಾಗಿ ಲ್ಯಾಂಡ್ ರಾಬರಿ

ಪಶುವೈದ್ಯಕೀಯ ಕಾಲೇಜಿಗೇ ಕನ್ನ

ಸರ್ಕಾರಿ ಭೂಮಿಯನ್ನೆಲ್ಲ ಡೀನೋಟಿಫೈ ಮಾಡಿ ನುಂಗಿ ಹಾಕಿದ ಯಡ್ಡಿ ಸರ್ಕಾರದ ದುಷ್ಟತನ ಈಗ ಹೆಬ್ಬಾಳದ ಪಶುವೈದ್ಯಕೀಯ ಕಾಲೇಜನ್ನು ಆಕ್ರಮಿಸುತ್ತಿದೆ. ಈ ಬಾರಿ ಪಶು ವೈದ್ಯಕೀಯ ಕಾಲೇಜಿನ ಭೂಮಿಯನ್ನು ಸರ್ಕಾರ ಡೀನೋಟಿಫೈ ಮಾಡಹೊರಟಿರುವುದು ನ್ಯಾಯಾಧೀಶರಿಗಾಗಿ. ಕನಿಷ್ಠ ನ್ಯಾಯಾಧೀಶರಿಗಾದರೂ ವಿವೇಕ ಬೇಡವೆ? ನಾಡಿನ ಪಶುಪಕ್ಷಿ ಜೀವಸಂಕುಲದ ಶ್ರೇಯಸ್ಸಿಗಾಗಿ ಮೀಸಲಿದ್ದ ಸಂಸ್ಥೆಯೊಂದನ್ನು ಮುಳುಗಿಸಿ ಅಲ್ಲಿ ತಮ್ಮ ಮನೆ ಕಟ್ಟಿಸುವುದು ಯಾವ ನ್ಯಾಯ? ಮೂಕ ಪ್ರಾಣಿಗಳ ಪ್ರಾಣ ರಕ್ಷಿಸಬೇಕಾದ ಜೀವ ದೇಗುಲವನ್ನೇ ಹಾಳುಗೆಡವಿ ಅಲ್ಲಿ ಮನೆ ಕಟ್ಟಿಸಿಕೊಂಡರೆ ನೆಮ್ಮದಿ ನೆಲೆಸುತ್ತಾ?

• ರಾ. ಸೋಮನಾಥ್

ಪಾರ್ಕಿನ ಭೂಮಿ ದೋಚಿದ್ದಾಯ್ತು, ಮೈದಾನ, ಅರ್ಕಾವತಿ ಲೇಔಟ್ ಜಮೀನು, ಕೆಐಎಡಿಬಿ ಲ್ಯಾಂಡು; ಹೀಗೆ ಸಿಕ್ಕಸಿಕ್ಕ ಸರ್ಕಾರಿ ಭೂಮಿಯನ್ನೆಲ್ಲ ಡೀನೋಟಿಫೈ ಮಾಡಿ ನುಂಗಿ ಹಾಕಿದ ಯಡ್ಡಿ ಸರ್ಕಾರದ ದುಷ್ಟತನ ಈಗ ಹೆಬ್ಬಾಳದ ಪಶುವೈದ್ಯಕೀಯ ಕಾಲೇಜನ್ನು ಆಕ್ರಮಿಸುತ್ತಿದೆ.



ಮೊನ್ನೆ ನಡೆದ ಯಡ್ಡಿ ಸಂಪುಟದ ನಿರ್ಣಯವೇನಾದರೂ ಕಾರ್ಯಗತವಾಗಿದ್ದೇ ಆದರೆ ದೇಶದ ಪ್ರತಿಷ್ಠಿತ ಪ್ರಾಣಿಶಾಸ್ತ್ರ ಸಂಶೋಧನಾ ಕೇಂದ್ರವಾದ ಹೆಬ್ಬಾಳದ ಪಶುವೈದ್ಯಕೀಯ ಕಾಲೇಜನ್ನು ಮುಚ್ಚಲೇಬೇಕು!

ಈ ಬಾರಿ ಪಶು ವೈದ್ಯಕೀಯ ಕಾಲೇಜಿನ ಭೂಮಿಯನ್ನು ಸರ್ಕಾರ ಡೀನೋಟಿಫೈ ಮಾಡಹೊರಟಿರುವುದು ನ್ಯಾಯಾಧೀಶರಿಗಾಗಿ. ರಾಜ್ಯ ಹೈಕೋರ್ಟಿನ ಮೂವತ್ತಕ್ಕೂ ಹೆಚ್ಚು ನ್ಯಾಯಾಧೀಶರನ್ನು ಓಲೈಸಲು ಯಡ್ಡಿ ಸರ್ಕಾರ ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜಿಗೇ ಕನ್ನವಿಕ್ಕಿದೆ. ಪಶುಗಳ ಮೇವು, ವಿವಿಧ ತಳಿಗಳ ಸಸ್ಯರಾಶಿ ಮತ್ತು ಕೋಳಿ, ಕುರಿ, ಜಾನುವಾರುಗಳ ಸಂಶೋಧನೆಗೆಂದೇ ಮೀಸಲಿಟ್ಟಿದ್ದ 25 ಎಕರೆಯಷ್ಟು ಕಾಲೇಜಿನ ಭೂಮಿಯನ್ನು ಕಿತ್ತುಕೊಂಡು ಅಲ್ಲಿ ನ್ಯಾಯಾಧೀಶರಿಗಾಗಿ ಐಷಾರಾಮಿ ಬಂಗಲೆಗಳನ್ನು ಕಟ್ಟಿಸಹೊರಟ ಬಿಜೆಪಿ ಸರ್ಕಾರದ ದುರ್ಬುದ್ಧಿಗೆ ಕನ್ನಡ ತಾಯಿ ಕಣ್ಣೀರಿಡುವುದೊಂದೇ ಬಾಕಿ.

ಹೆಬ್ಬಾಳದ ಪಶುವೈದ್ಯಕೀಯ ಕಾಲೇಜೆಂದರೆ ಅದು ಇಡೀ ದೇಶಕ್ಕೆ ಪ್ರಾಣಿಶಾಸ್ತ್ರ ತಜ್ಞರನ್ನು ಸೃಷ್ಟಿಸುವ ವಿದ್ಯಾದೇಗುಲ. ಅಂತರರಾಷ್ಟ್ರೀಯ ಮಟ್ಟದ ಪಶುವೈದ್ಯರು, ವಿಜ್ಞಾನಿಗಳು, ಸಂಶೋಧಕರೆಲ್ಲ ಇಲ್ಲಿಂದಲೇ ರೂಪುಗೊಂಡಿದ್ದಾರೆ. ಬರಗಾಲದಲ್ಲೂ ಹೇಗೆ ಮೇವಿನ ಸಂರಕ್ಷಣೆ ಮಾಡಬೇಕು, ಯಾವ ರೀತಿಯಲ್ಲಿ ಮೇವಿನ ಪೌಷ್ಠಿಕತೆ ಕಾಯ್ದುಕೊಳ್ಳಬೇಕು, ಯಾವ ತಳಿಯ ರಾಸುಗಳಿಂದ ಹೇಗೆ ಶ್ರೇಷ್ಠ ಮಟ್ಟದ ಹಾಲು ಉತ್ಪಾದಿಸಬೇಕು, ಕುರಿಗಳಿಂದ ಅಧಿಕ ಇಳುವರಿ ಪಡೆಯಲು ಯಾವ ತಂತ್ರ ಬಳಸಬೇಕು, ಎಂಥಾ ಲಸಿಕೆ ಸೃಷ್ಟಿಸಿ ಯಾವ್ಯಾವ ಪಶುರೋಗಗಳನ್ನು ನಿರ್ಬಂಧಿಸಬೇಕು; ಇತ್ಯಾದಿ ತರಹೇವಾರಿ ಸಂಶೋಧನೆಗಳಿಗೆ ತಾಯಿಯಂತಿರುವುದು ಇದೇ ಹೆಬ್ಬಾಳದ ಪಶುವೈದ್ಯಕೀಯ ಕಾಲೇಜು.




ಈ ಹಿಂದೆ ಕೃಷಿ ವಿಶ್ವವಿದ್ಯಾಲಯದ ಅಧೀನ ಸಂಸ್ಥೆಯಾಗಿದ್ದ ಈ ಕಾಲೇಜು 2005 ರಲ್ಲಿ ಪ್ರತ್ಯೇಕ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯ ರಚನೆಯಾದ ನಂತರ ಅದರ ವ್ಯಾಪ್ತಿಗೊಳಪಟ್ಟಿತು. ಸದ್ಯ ನೂರಿಪ್ಪತ್ತು ಎಕರೆ ವಿಸ್ತೀರ್ಣದಲ್ಲಿ ಇದಿದೆಯಾದರೂ ಅದು ಕೇವಲ ಲೆಕ್ಕಕ್ಕಷ್ಟೆ. ಪಕ್ಕದ ಕೃಷಿ ವಿವಿಯ ಅನೇಕ ಸಂಸ್ಥೆ ಕಟ್ಟಡಗಳೆಲ್ಲ ಈ ಕಾಲೇಜಿನ ಆವರಣವನ್ನೇ ಆಕ್ರಮಿಸಿಕೊಂಡಿವೆಯಾದ್ದರಿಂದ ಭಾರತೀಯ ಪಶು ವೈದ್ಯಕೀಯ ಪರಿಷತ್ತಿನ ನಿಬಂಧನೆಗಳ ಪ್ರಕಾರವೇ ಈ ಸಂಸ್ಥೆಗೇ ಇನ್ನು ಭೂಮಿ ಬೇಕು.

▶▶ 12

ಮೊದಲು ಕಣ್ಣು ಹಾಕಿದ್ದೇ ಕಟ್ಟಾ ನಾಯ್ಡು

ಕೃಷಿ ವಿವಿಯ ಎಸ್ಟೇಟ್ ಆಫೀಸರ್ ದೇವರಾಜ್ ಏಕಾಏಕಿ ಪಶು ವೈದ್ಯಕೀಯ ಕಾಲೇಜಿನ ಆಸ್ತಿಗೆ ಕಣ್ಣು ಹಾಕುವುದಕ್ಕೂ ಕಾರಣವಿದೆ. ಅದು ಹೆಬ್ಬಾಳದ ಹಾಲಿ ಶಾಸಕ ಮತ್ತು ಮಾಜಿ ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು!



ಇಲ್ಲಿಗೆ ವರ್ಷದ ಹಿಂದೆ ಪಶು ವೈದ್ಯಕೀಯ ಕಾಲೇಜಿನ ಸಮಾರಂಭಕ್ಕೊಂದು ಮಂತ್ರಿ ಕಟ್ಟಾ ನಾಯ್ಡುವನ್ನು ಆಹ್ವಾನಿಸಲಾಗಿತ್ತು, ಸ್ಥಳೀಯ ಶಾಸಕರೆಂಬ ಕಾರಣ ಕೂಡ ಅದಕ್ಕಿತ್ತು, ಆವತ್ತು ಭಾಷಣ ಮುಗಿಸಿದ್ದೇ ಕಾಲೇಜು ಕ್ಯಾಂಪಸ್ಸಿಗೊಂದು ಸುತ್ತು ಹಾಕಿ ಬಂದ ಕಟ್ಟಾ ಕಣ್ಣಿಗೆ ಪೈರು ಬೆಳೆದುನಿಂತಿದ್ದ ಹೊಲಗಳು ಬಿದ್ದಿವೆ. ಅಲ್ರೀ ಇಷ್ಟೆಲ್ಲಾ ಜಮೀನು ಖಾಲಿ ಬಿಟ್ಕೊಂಡಿದ್ದೀರಲ್ರೀ....! ಎಂದು ಕಟ್ಟಾ ಮುಖ ಕಿವುಚಿದ್ದಾನೆ. ಅಲ್ಲಾ ಸಾರ್, ಅದು ಮೇವು ಸಂಶೋಧನೆಗೆಂದು ಬೆಳೆಸಿದ ಪೈರು, ವಿನಾಕಾರಣ ಪಾಳು ಬಿದ್ದ ಖಾಲಿ ಭೂಮಿ ಅಲ್ಲ ಎಂದು ಅಲ್ಲಿದ್ದ ಅಧ್ಯಾಪಕ ವೃಂದ ಬೇಡಿಕೊಂಡಿದೆ. ಇಲ್ಯಾಕ್ರೀ ಬೆಳೀತೀರಿ? ಇಲ್ಲಿ ಅಪಾರ್ಟ್‌ಮೆಂಟ್ ಕಟ್ಟಿಸಿದರೆ ಕಾಲೇಜಿಗೇ ಲಾಭ ಬರುತ್ತೆ ನಾನೇ ಬೇಕಾದ್ರೆ ಮುಖ್ಯಮಂತ್ರಿಗಳಿಗೆ ಹೇಳಿ ಡೀನೋಟಿಫೈ ಮಾಡಿಸ್ತೀನಿ. ಬೇಕಾದ್ರೆ ಜಾಯಿಂಟ್ ವೆಂಚರ್‌ನಲ್ಲೇ ಡೆವಲಪ್ ಮಾಡಬಹುದು. ನೋಡೀ ನೀವೇ ಯೋಚನೆ ಮಾಡಿ ಎಂದು ಕಟ್ಟಾ ಪೀಡಿಸಿದ್ದ. ಮುಂದೆ ಇದೇ ಕಟ್ಟಾ ಗ್ಯಾಂಗ್ ಈ ಭೂಮಿ ದೋಚಲು ನಾನಾ ಸರ್ಕಸ್ ಮಾಡಿದೆ. ಆವತ್ತು ಇದೇ ಆಫೀಸರ್ ದೇವರಾಜ್ ಮೂಲಕ ಆಸ್ತಿ ದೋಚಲು ಕಟ್ಟಾ ತಂತ್ರ ರೂಪಿಸಿದ್ದ. ಅದೇನು ಶಾಪವೋ ಮೂಕಪ್ರಾಣಿಗಳ ಮೇಲೆ ದೇವರ ಕರುಣೆಯೋ ಗೊತ್ತಿಲ್ಲ, ಪಶು ವೈದ್ಯಕೀಯ ಕಾಲೇಜಿನ ಆಸ್ತಿಗೆ ಕಣ್ಣು ಹಾಕಿದ್ದ ಕಟ್ಟಾನ ಮಂತ್ರಿಗಿರಿಯೇ ಹೋಯ್ತು, ಮಗ ಜೈಲುಪಾಲಾದ.



ಈಗ ಮುಖ್ಯಮಂತ್ರಿ ಯಡ್ಡಿ ಸರದಿ. ಐಎಎಸ್ ಮುನಿಯಪ್ಪನಿಗೇ ಗತಿ ಕಾದಿದೆಯೋ ಅಥವಾ ಮುಖ್ಯಮಂತ್ರಿ ಯಡ್ಡಿಯ ಪಾಪದ ಕೊಡ ತುಂಬಿದೆಯೋ ಯಾರಿಗೆ ಗೊತ್ತು?

ಕೃಷಿ ವಿವಿಯನ್ನೇ ಬಿಡದವರು ಪಶು ವಿವಿಯನ್ನು ಬಿಡುವುದುಂಟಾ?

ಬಿಜೆಪಿ ಸರ್ಕಾರದ ವಿದ್ಯಾಕ್ಷಾತುಕ ಪ್ರವೃತ್ತಿಗೆ ಕೇವಲ ಪಶು ವೈದ್ಯಕೀಯ ಕಾಲೇಜಷ್ಟೇ ಅಲ್ಲ; ಇದಕ್ಕಿಂತಲೂ ದೊಡ್ಡ ಅನಾಹುತ ಕಂಡಿದ್ದು ಇದೇ ಹೆಬ್ಬಾಳದ ಗಾಂಧಿ ಕೃಷಿ ವಿಶ್ವವಿದ್ಯಾಲಯ. ಈ ಹಿಂದೆ ಪಾಲಿಕೆಗೆ ಆಯುಕ್ತನಾಗಿದ್ದ ಪಕ್ಕಾ ಖದೀಮ ಐಎಎಸ್ ಸುಬ್ರಹ್ಮಣ್ಯನ ಕೇಡಿ ಬುದ್ಧಿಯಿಂದಾಗಿ ಇಡೀ ಕೃಷಿ ವಿವಿಯೇ ಹೈರಾಣಾಗಿ ಹೋಯಿತು.



ಯಶವಂತಪುರದಿಂದ ಯಲಹಂಕಕ್ಕೆ ಅದೆಂಥದೋ ಸಂಪರ್ಕ ರಸ್ತೆ ನಿರ್ಮಿಸುತ್ತೇನೆಂದು ಕೃಷಿ ವಿವಿಯ 24 ಎಕರೆಗೆ ನಾಲಿಗೆ ಚಾಚಿದ್ದ ಪಾಲಿಕೆ ಆಯುಕ್ತ ಸುಬ್ರಹ್ಮಣ್ಯನ ಲೆಕ್ಕಾಚಾರವೇ ಬೇರೆಯಿತ್ತು. ಅಗತ್ಯವೇ ಇಲ್ಲದ, ಯಾರೂ ಕೇಳದ, ಕನಿಷ್ಠ ಸರ್ವೆಯನ್ನೂ ಮಾಡದ ಅವೈಜ್ಞಾನಿಕ ಮತ್ತು ನಿಷ್ಪ್ರಯೋಜಕ ರಸ್ತೆಯ ಹೆಸರಲ್ಲಿ 31 ಕೋಟಿ ರೂಪಾಯಿಗಳಷ್ಟು ಪಾಲಿಕೆ ದುಡ್ಡು ದೋಚುವುದು ಐಎಎಸ್ ಸುಬ್ರಹ್ಮಣ್ಯನ ಉದ್ದೇಶವಾಗಿತ್ತು, ಅದೇನು ವ್ಯವಹಾರವಿತ್ತೋ ಅಥವಾ ಮೊದಲೇ ಡೀಲು ಕುದುರಿತ್ತೋ ಮುಖ್ಯಮಂತ್ರಿ ಯಡ್ಡಿ ರಾತ್ರೋರಾತ್ರಿ ಕೃಷಿ ಭೂಮಿಯ ಭೂಮಿ ಕಿತ್ತು ಕೊಡುವ ಆದೇಶಕ್ಕೆ ತಮ್ಮ ಸಮ್ಮತಿ ಸೂಚಿಸಿಬಿಟ್ಟರು.

ದಿನ ಬೆಳಗಾಗುವುದರೊಳಗಾಗಿ ಕೃಷಿ ವೀವಿಯ 24 ಎಕರೆ ಪಾಲಿಕೆಯ ವಶವಾಗಿತ್ತು, ಆದೇಶ ಹೊರಬಿದ್ದ ಮರುದಿನಕ್ಕೆ ವಿವಿಯ ಪ್ರಶಾಂತ ಪರಿಸರದ 900 ಮರಗಳನ್ನು ಕಡಿಯಲಾಯ್ತು, ಎಲ್ಲೆಂದರಲ್ಲಿ ಬುಲ್ಡೋಜರ್‌ಗಳು ನುಗ್ಗಿ ಬೆಳೆದು ನಿಂತು ಕಾಡನ್ನೇ ಧ್ವಂಸವೆಬ್ಬಿಸಿದವು.

ಈಗ ನೋಡಿದರೆ ಯಶವಂತಪುರ-ಯಲಹಂಕ ಸಂಪರ್ಕ ರಸ್ತೆಯೇ ಅವೈಜ್ಞಾನಿಕ ಎಂದು ಸಾಬೀತಾಗಿದೆ. ಇಂಥ ರಸ್ತೆಯೇ ಬೇಕಿಲ್ಲ ಎಂದು ಜನ ಬೀದಿಗಿಳಿದಿದ್ದಾರೆ. ಸ್ವತಃ ಬಿಬಿಎಂಪಿಯೇ ಈ ರಸ್ತೆ ಬೇಕಿಲ್ಲ ಎಂದು ನಿರ್ಧರಿಸಿದೆ. ವಿನಾಕಾರಣ ಇದಕ್ಕೆಂದು 21 ಕೋಟಿ ರೂಪಾಯಿಗಳಷ್ಟನ್ನು ಪೋಲು ಮಾಡಿದ ಐಎಎಸ್ ಸುಬ್ರಹ್ಮಣ್ಯನ ವಿರುದ್ಧವೇ ಕ್ರಮ ಜರುಗಿಸುವಂತೆ ಬಿಬಿಎಂಪಿ ನಿರ್ಣಯ ಕೈಗೊಂಡಿದೆ.


ಆದರೆ ಆದ ಅನಾಹುತಕ್ಕೆ ಯಾರು ಹೊಣೆ? 21 ಕೋಟಿಯಷ್ಟು ಪಾಲಿಕೆ ದುಡ್ಡನ್ನು ಹುಡಿಹಾರಿಸಿ, ಕೃಷಿ ಭೂಮಿಯ 24 ಎಕರೆ ಭೂಮಿಯನ್ನೇ ಲಪಟಾಯಿಸಿ, ಅಲ್ಲಿದ್ದ ನೂರಾರು ಮರಗಳನ್ನು ನೆಲಸಮ ಮಾಡಿ ಕೊನೆಗೆ ರಸ್ತೆಯೇ ರದ್ದಾದ ಮೇಲೂ ಅನಾಹುತಕ್ಕೆ ಕಾರಣನಾದ ಐಎಎಸ್ ಸುಬ್ರಹ್ಮಣ್ಯನನ್ನು ಶಿಕ್ಷಿಸದೇ ರಕ್ಷಿಸಿದ್ದು ಮುಖ್ಯಮಂತ್ರಿ ಯಡ್ಡಿ.

ಇದರರ್ಥ ಮಾಜಿ ಪಾಲಿಕೆ ಆಯುಕ್ತ ಸುಬ್ರಹ್ಮಣ್ಯನ ಡಕಾಯಿತಿಯಲ್ಲಿ ಮುಖ್ಯಮಂತ್ರಿಯೇ ಪಾಲುದಾರರೆ? ಪಾಲಿಕೆಯ ದುಡ್ಡು ಹೊಡೆಯಲು ಹೋಗಿ ಅನ್ಯಾಯವಾಗಿ ಕೃಷಿ ವಿವಿಗೆ ಕೊಳ್ಳಿ ಇಟ್ಟರಲ್ಲ; ಆದ ಅನಾಹುತಕ್ಕೆ ಏನು ಪರಿಹಾರ? ಕೃಷಿ ವಿವಿಯ ಅಸ್ತಿತ್ವಕ್ಕೇ ಕನ್ನ ಹಾಕಲು ಬಿಟ್ಟ ಮುಖ್ಯಮಂತ್ರಿಗೆ ನಾಡಿನ ಶಿಕ್ಷಣದ ಮೇಲೆ ಇನ್ನೆಂಥ ಕಳಕಳಿಯಿರಲು ಸಾಧ್ಯ? ಕೃಷಿ ವಿವಿಗೇ ಕೊಳ್ಳಿಯಿಟ್ಟ ಸರ್ಕಾರ ಪಶು ವೈದ್ಯಕೀಯ ಕಾಲೇಜನ್ನು ಉಳಿಸುತ್ತಾ? ಇಷ್ಟಾದ ಮೇಲೂ ನಾಡಿನ ವಿದ್ಯಾರ್ಥಿ ಸಮೂಹ ತೆಪ್ಪಗಿದೆಯಲ್ಲಾ ಅದಕ್ಕೇನಾದರೂ ಅರ್ಥವುಂಟಾ?

ಪೇಜಾವರರು ಈ ಕೃಷ್ಣ ದೇವಸ್ಥಾನ ನಿರ್ಮಾಣಕ್ಕೆ ಕಳ್ಳ ನೀರಾಳಿಂದ ಎಷ್ಟು ಮೊತ್ತದ ಹಣ ಪಡೆದಿದ್ದಾರೆ. ಅಷ್ಟು ಹಣ ನೀರಾಳಿಗೆ ಎಲ್ಲಿಂದ ಬಂತು ಎಂದು ಹುಡುಕಿದರೆ ಅದು 2ಜಿ ಸ್ಪೆಕ್ಟ್ರಂ ಹಗರಣವನ್ನೋ, ಖಾಸಗಿ ವಿಮಾನ ಕಂಪೆನಿಗಳ ...ನ ಅಕ್ರಮ ಹಣವನ್ನೋ ತಗಿರಲು ಸಾಧ್ಯ.

ಕೋಟ್ಯಂತರ ₹ ಕೈಬದಲು

ನೀರಾ ರಾಡಿಯಲ್ಲಿ ಪೇಜಾವರ



...ಗಾದರೆ "ಕೃಷ್ಣ-ಕೃಷ್ಣ" ಎಂದು ಮಂತ್ರ ಪಠಿಸುವ ಬ್ರಾಹ್ಮಣ ಒಂದು ಕಡೆ!

...ಲವೇ ದಿನಗಳಲ್ಲಿ ಕೃಷ್ಣ ಜನ್ಮಸ್ಥಾನ ಸೇರಲಿರುವ ಕಾರ್ಪೊರೇಟ್ ...ದೆಡೆ!!

...ವರ ಸ್ವಾಮಿ ಹಾಗೂ ನೀರಾ ರಾಡಿಯಾಗೆ ಸಂಬಂಧಿಸಿದ ವಿಚಾರ ...ಟ್ಯಂತರ ರೂಪಾಯಿ ಕಳ್ಳಹಣ ತಣ್ಣಗೆ ಕೈ ಬದಲಾಗಿರುವ ...ು. ದೈತ್ಯ ಸುಂದರಿ ಕಾರ್ಪೊರೇಟ್ ದಲ್ಲಾಳಿ ನೀರಾ ರಾಡಿಯಾಳ ...ಮಾಡಿದ ತಪ್ಪಿಗೆ ಅನೇಕರು ತಲೆದಂಡ ತೆರುತ್ತಿದ್ದಾರೆ.

ಮಂತ್ರಿ ಎ.ರಾಜಾ ರಾಜೀನಾಮೆ ನೀಡಿ ಮನೆಗೆ ಹೋದ. ...ಹಿಂದೆಯೇ ತನಿಖಾ ತಂಡಗಳು ರಾಜಾ ಮನೆಗೆ ನುಗ್ಗಿ ದಾಳಿ ...ಇದೇ ನೀರಾಳನ್ನಿಟ್ಟುಕೊಂಡು ಬ್ಯುಸಿನೆಸ್ ಡೀಲ್ ಕುದುರಿಸುತ್ತಿದ್ದ ...ಾನ ಮರ್ಯಾದೆಯೂ ಈಗ ಹರಾಜಾಗುತ್ತಿದೆ. ಸ್ವತಃ ದೇಶದ ...ಸಂಸತ್‌ನ ಲೆಕ್ಕಪತ್ರ ಸಮಿತಿಯೆದುರು ವಿಚಾರಣೆಗಾಗಿ ಬಂದು ...ಬಂದಿದೆ.

ಅತಿರಥ ಮಹಾರಥರ ಹಗರಣ- ವಂಚನೆಗಳ ಗದ್ದಲದಲ್ಲಿ ...ವರ ಸ್ವಾಮಿಯ ಹೆಸರನ್ನು ಕಾಣಿಸಬೇಕಿದೆ.

...ಸಂಭೂತ, ಅಪ್ಪಟ ಪ್ರಾಮಾಣಿಕ, ಧರ್ಮಗುರು ...ೇಳಿಕೊಳ್ಳುವ ಪೇಜಾವರ ಸ್ವಾಮಿಯು ಈ ಕಾರ್ಪೊರೇಟ್ ...ರಾಡಿಯಾ ಜೊತೆ ಲಿಂಕ್ ಇರಿಸಿಕೊಂಡಿದ್ದಾರೆ. ಇವರಿಬ್ಬರ ...ಟ್ಯಂತರ ರೂಪಾಯಿಗಳು ಕೈಬದಲಾಗಿವೆ.

...ಉದ್ಯಮಗಳು, ಟ್ರಸ್ಟ್‌ಗಳೂ ಅಸ್ತಿತ್ವಕ್ಕೆ ...ಂಡುಕುತ್ತಾ ಹೋದರೆ ದೆಹಲಿಯಿಂದ ... ಶಿವಮೊಗ್ಗ -ಸಿದ್ದಾಪುರದವರೆಗೂ ...ಜಾವರರ ವ್ಯವಹಾರಗಳು ಕಾಣಿಸುತ್ತಿವೆ. ...ಆಶ್ಚರ್ಯವಾಗಿದೆ. ಎಲ್ಲಿಯ ನೀರಾ ...ಎಲ್ಲಿಯ ಪೇಜಾವರರು...!?

... ದೈತ್ಯರನ್ನೇ ಟಿಶ್ಯೂ ಪೇಪರ್‌ನಂತೆ ...ತಿರುವ ನೀರಾ ಪೇಜಾವರರನ್ನು ಬೆನ್ನ ...ಸಿಕೊಂಡು ಕೂಸುಮರಿ ಮಾಡುವಂತೆ ...ೂಯ್ದಳು? ಆಸಲಿಗೆ ಇವರಿಬ್ಬರ ಮಧ್ಯೆ ...ಹಾರ, ಭಕ್ತಿ ಇತ್ಯಾದಿಗಳ ಗೀವ್ ಅಂಡ್ ...ಾಗಿನಿಂದ ಶುರುವಾಯಿತೆಂಬುದನ್ನೂ ...ಕಾಗಿ ಬಂದಿದೆ.

...ರಾಮ ವಿಠಲ ಟ್ರಸ್ಟ್ ...ಸುದೇಶ್ ಟ್ರಸ್ಟ್

...ಗೆ ಕಾಣಿಸುವುದನ್ನೆಲ್ಲ ಆಪೋಷನ ...ವವಳಂತೆ ಕಾಣುವ ಸುಂದರಿ ನೀರಾ ...ಲಾಕಿ ಹೆಂಗಸು. ಅವಳ ಸೈಜಿನ ...ಮಾನ್ಯವಾಗಿ ಇಂಡಿಯಾ ದೇಶದಲ್ಲಿ ...ಲ್ಲ. ಈ ಮಹತ್ವಾಕಾಂಕ್ಷಿ ಹೆಣ್ಣು ...ವರ್ಷಗಳ ಹಿಂದೆ ಒಬ್ಬ ಮಾಮೂಲಿ ...ಜೆಂಟ್ ಜಣಕ ರಾಡಿಯಾ ಎಂಬುವನ ...ದ್ದಳು. ಆದರಿವತ್ತು ಅದೇ ನೀರಾ ...ಗೆ ತೂಗುತ್ತಿದ್ದಾಳೆ. ಇವಳ ಬ್ಯುಸಿನೆಸ್ ...ದ ಸಂಪರ್ಕಗಳ ಬಗ್ಗೆ, ದೊಡ್ಡ ದೊಡ್ಡ ... ಖಾಸಗಿ ಸಂಬಂಧಗಳ ಬಗ್ಗೆ ...ಹಿತಿಗಳು ಹೊರಬೀಳುತ್ತಿವೆ.

... ರಾಶಿಯಲ್ಲೇ ಪೇಜಾವರರ ...ಣಿಸುತ್ತಿದೆ.

...ಡಿಯಾ ಎಂಬ ಮೆಗಾ ಸೀರಿಯಲ್ಲಿನ ...ೋಡು ಇದು.

...ರ್ಪೊರೇಟ್ ಖದೀಮರೂ ...ೀರಾ ಕೂಡಾ ಸಮಾಜ ಸೇವೆ ... 2001ರಲ್ಲಿ ಸುನಾಮಿ ದುರಂತ ...ೀರಾ ತನ್ನ ದಿವಂಗತ ತಾಯಿಯ ... ಹೆಸರನ್ನು ಹೊಂದಿರುವ ಸುದೇಶ್ ...ಸ್ಥಾಪಿಸಿದಳು. ಬಡವರಿಗೆ ಅಕ್ಕಿ, ಬಟ್ಟೆ, ... ಫೋಟೋ ತೆಗೆಸಿಕೊಂಡು ಸಾಕಷ್ಟು ...ಪಡೆದಳು. ಮುಗ್ಧ ಜನ ಈ ತರದ ...ಸಾಧುಜನರು ತಮ್ಮ ಸ್ವಂತದ ಹಣ ...ಸುತ್ತಾರೆಂದು ನಂಬಿರುತ್ತಾರೆ. ಆದರೆ

ವಾಸ್ತವ ಬೇರೆಯೇ ಇರುತ್ತದೆ. ಖಾಸಗಿ ಉದ್ಯಮಿಗಳ ವಾರ್ಷಿಕ ವಹಿವಾಟಿನ ಆಧಾರದ ಮೇಲೆ ಅವರು ಪ್ರತಿವರ್ಷ ಇಂತಿಷ್ಟೆಂದು ಆದಾಯ ತೆರಿಗೆ ಕೊಡಬೇಕಿರುತ್ತದೆ. ಬೇಕಿದ್ದರೆ ಅಂತಹ ತೆರಿಗೆಯ ಒಂದಂಶವನ್ನು ಸಮಾಜ ಸೇವೆಗೋ ಶಿಕ್ಷಣದ ಹೆಸರಿನ ಟ್ರಸ್ಟ್‌ಗಳಿಗೋ ದಾನ ಎಂದು ನೀಡಿದರೆ ಒಂದಷ್ಟು ತೆರಿಗೆ ವಿನಾಯತಿ ಸಿಗುವಂತಿರುತ್ತದೆ. ನೀರಾ ತರದ ಕಾರ್ಪೊರೇಟ್ ದಲ್ಲಾಳಿಗಳಿಗೆ ದೊಡ್ಡ ದೊಡ್ಡ ಕಂಪೆನಿಗಳಿಂದ ಹಲವು ಕೋಟಿ ರೂ. ದೇಣಿಗೆ ಪಡೆಯುವುದು ಕಷ್ಟವೇನಲ್ಲ. ಜೊತೆಗೆ ಅವಳದ್ದೇ ಸ್ವಂತದ ಕಂಪೆನಿಗಳಿಗೆ ನೂರಾರು ಕೋಟಿ ರೂಪಾಯಿಗಳ ಅಕ್ರಮ ಹಣ ಹರಿದುಬರುತ್ತಿತ್ತು.

ನೀರಾಳ ಸುದೇಶ್ ಟ್ರಸ್ಟ್ ಇದೇ ಕೆಲಸ ಮಾಡುತ್ತಿದೆ. ಈ ಟ್ರಸ್ಟಿನಲ್ಲಿ ನೀರಾ, ಅವಳ ಸೋದರಿ ಕರುಣಾ, ರಾಹುಲ್ ಸಿಂಗ್ ಹಾಗೂ ರಾಜೀವ ಮೋಹನ್ ಎಂಬುವರು ಟ್ರಸ್ಟಿಗಳಾಗಿದ್ದಾರೆ.




ಸುದೇಶ್ ಕಾರ್ಯಕ್ರಮದಲ್ಲಿ ಪೇಜಾವರರು...





ಸುನಾಮಿ ನಿರಾಶ್ರಿತರಿಗೆ ನೀರಾ ನೆರವು....



ದೆಹಲಿಯಲ್ಲಿರುವ ನೀರಾಳ ಬಂಗಲೆ.

ಪೇಜಾವರ ಸ್ವಾಮಿ ಇದರ ಗೌರವ ಪೋಷಕ!

ಇದು ಪೇಜಾವರರ-ನೀರಾಳ ಲಿಂಕ್‌ನ ಒಂದು ಮುಖ.

ಮತ್ತೊಂದೆಡೆ ಪೇಜಾವರ ಸ್ವಾಮಿ ಶ್ರೀರಾಮ ವಿಠಲ ಟ್ರಸ್ಟ್ ಎಂಬ ಹೆಸರಿನ ಟ್ರಸ್ಟ್ ಒಂದನ್ನು ಮಾಡಿಕೊಂಡಿದ್ದಾರೆ.

"ಈ ನೀರಾ ರಾಡಿಯಾಳನ್ನು ನನ್ನ ಭಕ್ತರೊಬ್ಬರು ನನಗೇ ಪರಿಚಯಿಸಿದರು. ಆದರೆ ನಾನು ಆಕೆಯನ್ನು ಅನಂತ್‌ಕುಮಾರ್ ಎಂಬುವವರಿಗೆ ಪರಿಚಯಿಸಲಿಲ್ಲ" ಎಂದು ಪೇಜಾವರರು ಈಗ ಹೇಳುತ್ತಿದ್ದಾರೆ.

ದೆಹಲಿಯ ವಸಂತ್ ಕುಂಜ್ ಪ್ರದೇಶದಲ್ಲಿರುವ ಭೂಮಿಯು ರಾಮವಿಠಲ ಶಿಕ್ಷಣ ಸೇವಾ ಸಮಿತಿಗೆ ಸೇರಿದ್ದೆಂದು, ಈ ಸಮಿತಿಯ ಅಧ್ಯಕ್ಷ ತಾನೆಂದು, ಇದಕ್ಕೆ ಭೂಮಿಯನ್ನು ಮಾಜಿ ಪ್ರಧಾನಿಗಳಾದ ಪಿ.ವಿ. ನರಸಿಂಹರಾವ್ ಮತ್ತು ದೇವೇಗೌಡ ನೀಡಿದ್ದಾರೆಂದು, ಈ ಸಮಿತಿಗೂ ನೀರಾಗೂ ಯಾವುದೇ ಸಂಬಂಧವಿಲ್ಲ ಎಂದು ಪೇಜಾವರರು ಸ್ಪಷ್ಟೀಕರಣ ನೀಡಿದ್ದಾರೆ.

ಇದು ನಿಜವೇ ಇರಬಹುದು. ಆದರೆ ನೀರಾ ಸ್ಥಾಪಿಸಿರುವ ಸುದೇಶ್ ಟ್ರಸ್ಟ್‌ನೊಂದಿಗೆ ಪೇಜಾವರರು ಕಳ್ಳುಬಳ್ಳಿ ಸಂಬಂಧ ಹೊಂದಿರುವುದು ನಿಜವಲ್ಲವೇ?

ಕೃಷ್ಣ ಮಂದಿರ ಕಟ್ಟಲು ಕಳ್ಳಿಯ ದುಡ್ಡು

ದೆಹಲಿಯಲ್ಲಿ ಪೇಜಾವರರು ಇತ್ತೀಚೆಗೆ ಒಂದು ಕೃಷ್ಣ ಮಂದಿರ ಕಟ್ಟಿಸಿದ್ದಾರೆ. ವಾಜಪೇಯಿ ಪ್ರಧಾನ ಮಂತ್ರಿಯಾಗಿದ್ದಾಗ ಈ ಜಾಗವನ್ನು ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಯಿಂದ ಪೇಜಾವರರು ಮಂಜೂರು ಮಾಡಿಸಿಕೊಂಡಿದ್ದರು. ಈ ಜಾಗದಲ್ಲಿ ಈ ಪೇಜಾವರ ಬೃಹತ್ತಾದ

▶▶ 13

ಪೇಜಾವರ-ನೀರಾ ನಂಟು ಬೆಳೆದದ್ದು

ನೀರಾ ಕೀನ್ಯಾ ದೇಶದ ನೈರೋಬಿಯಲ್ಲಿ ಹುಟ್ಟಿದವಳು. ತಾಯಿ ಸುದೇಶ್ ತಂದೆ ಇಕ್ಬಾಲ್ ನಾರಾಯಣ ಮೆನನ್. ಇವರದ್ದು ಪಕ್ಕಾ ಪಂಜಾಬಿ ಫ್ಯಾಮಿಲಿ. ಅಪ್ಪನ ಹೆಸರಿನಲ್ಲಿರುವ ಇಕ್ಬಾಲ್ ಹಾಗೂ ಮೆನನ್ ಎಂಬುದೆಲ್ಲಾ ಕುಟುಂಬದ ಆಪ್ತರ ನೆನಪಿಗೆ ಜೋಡಿಸಿಕೊಂಡ ಪದಗಳಾಗಿವೆ. 1981ರಲ್ಲಿ ಇಂಗ್ಲೆಂಡ್‌ನಲ್ಲಿ ಗುಜರಾತ್ ಮೂಲದ ಜಣಕ ರಾಡಿಯಾ ಎಂಬುವವನನ್ನು ನೀರಾ ಮದುವೆಯಾಗುತ್ತಾಳೆ. ಲಂಡನ್ ಹೊರವಲಯದ ಪಂಜಾಬಿಗಳ ಏರಿಯಾದಲ್ಲಿ ಇವರು ಟ್ರಾವೆಲ್ ಏಜೆನ್ಸಿಯೊಂದನ್ನು ಶುರು ಮಾಡುತ್ತಾರೆ. 1988ರ ಜುಲೈನಿಂದ 1989 ಜುಲೈನೊಳಗೆ ಈ ದಂಪತಿ ಟ್ರಾವೆಲ್ ನೆಟ್‌ವರ್ಕ್ ಲಿ. ಪಲ್ಲವಿಯಾನ್ ಟೂರ್ಸ್ ಲಿ, ಹಾಲಿಡೇಸ್ ಟು ಟ್ರಜರ್ ಲಿ, ಕ್ರೌನ್‌ಮಾರ್ಟ್ ಲಿ.. ಇತ್ಯಾದಿ ಎಂಟು ಟ್ರಾವೆಲ್ ಕಂಪೆನಿಗಳನ್ನು ಒಂದರಹಿಂದೆ ಒಂದರಂತೆ ಶುರುಮಾಡಿ ಅಷ್ಟೇ ತರಾತುರಿಯಿಂದ ಒಂದೊಂದನ್ನೇ ಮುಚ್ಚಿ ಬಿಡುತ್ತಾರೆ.

ನಂತರ ತನ್ನ ಗಂಡನಿಗೆ ವಿಚ್ಛೇದನ ನೀಡಿ ತನ್ನ ಮೂವರು ಪುತ್ರರೊಂದಿಗೆ 1994ರಲ್ಲಿ ನೀರಾ ಇಂಡಿಯಾಗೆ ಬರುತ್ತಾಳೆ. ಟ್ರಾವೆಲ್ ಏಜೆಂಟ್ ಆಗಿದ್ದ ಅವಳಿಗೆ ವಿಮಾನಯಾನ ಉದ್ಯಮದ ಬಗ್ಗೆ ಚೂರು ತಿಳಿವಳಿಕೆ ಇರುತ್ತದೆ. ಸಹರಾ ಏರ್‌ಲೈನ್ಸ್ ಕಂಪೆನಿಗೆ ಸರ್ಕಾರದಿಂದ ಕೆಲವು ಸವಲತ್ತು ಕೊಡಿಸುವ ಕೆಲಸ ಆರಂಭಿಸುವ ನೀರಾ ಬಲು ಬೇಗ ದೊಡ್ಡ ಕಾರ್ಪೊರೇಟ್ ಕಂಪೆನಿಗಳ ಬಾಸ್‌ಗಳ ಕಣ್ಣಿಗೆ ಬೀಳುತ್ತಾಳೆ. ದೆಹಲಿಯ ವಸಂತ ಕುಂಜ್ ಏರಿಯಾದ ಬಾಡಿಗೆ ಆಫೀಸ್‌ನಲ್ಲಿ ಅವಳು ಕೂರುತ್ತಾಳೆ.

ಬಿಜೆಪಿ ಸರ್ಕಾರದ ಒಬ್ಬ ಸಚಿವನೊಂದಿಗೆ ಸಂಪರ್ಕ ಬೆಳೆಸಿಕೊಂಡ ನೀರಾ ಅದೇ ಸ್ಥಾನಮಾನ ಬಳಸಿಕೊಂಡು ರತನ್ ಟಾಟಾ, ಮುಖೇಶ್ ಅಂಬಾನಿಗೇ ಸ್ನೇಹ ಗಳಿಸುತ್ತಾಳೆ. ಉದ್ಯಮಪತಿಗಳು ಹಾಗೂ ಸರ್ಕಾರದೊಂದಿಗೆ ಕೊಂಡಿಯಂತೆ ವರ್ತಿಸುತ್ತಾ ಇಂಡಿಯಾದಲ್ಲೂ ಅನೇಕ ಕಂಪೆನಿಗಳನ್ನು ಸ್ಥಾಪಿಸಿದ್ದಾಳೆ. ನೀರಾಗೆ ತನ್ನದೇ ಒಂದು ಕ್ರೌನ್ ಏರ್ ಮತ್ತು ಮ್ಯಾಜಿಕ್ ಏರ್ ಎನ್ನುವ ಖಾಸಗಿ ವಿಮಾನಯಾನ ಕಂಪೆನಿ ಸ್ಥಾಪಿಸುವ ಆಸೆಯಿತ್ತು.

ಆದರೆ ಶರದ್ ಯಾದವ್ ಮತ್ತು ಆ ನಂತರ ಪ್ರಫುಲ್ ಪಟೇಲ್ ಸಚಿವರಾದಾಗ ನೀರಾಳನ್ನು ತಮ್ಮ ಕಚೇರಿಯ ಒಳಕ್ಕೂ ಬಿಟ್ಟುಕೊಳ್ಳಲಿಲ್ಲ.

ಈ ನಡುವೆ ಧೀರಜ್ ಸಿಂಗ್‌ನನ್ನು ನೀರಾ ಮದುವೆಯಾದಳಾದರೂ ಅವಳ ಸ್ಪೀಡಿಗೆ, ಲೆವೆಲ್‌ಗೆ ಅವನು ಸಾಲದೆಂದು ಹೊರಗಟ್ಟಿದಳು.

ನೀರಾಗೆ ಈಗ Vaishnavi Corporate Communications Neucom Consulting, Noesis Strategic Consulting Services, Vitcom Consulting ಎಂಬಿತ್ಯಾದಿ ಕಂಪೆನಿಗಳಿವೆ. ನೂರಾರು ಖಾಸಗಿ ಕಂಪೆನಿಗಳೂ ಇವಳ ಸೇವೆ ಪಡೆಯುತ್ತವೆ. ದೇಶದ 13 ಮಹಾನಗರಗಳಲ್ಲಿ ಅವಳ ಕಚೇರಿಗಳಿವೆ. 300 ಸಿಬ್ಬಂದಿ ಇದ್ದಾರೆ. ಕಾನೂನಿನ ಲೆಕ್ಕಕ್ಕೆ ಸಿಗುವಂತೆ 57 ಕೋಟಿ ರೂ. ವಾರ್ಷಿಕ ವಹಿವಾಟಿದೆ. 2ಜಿ ಸ್ಪೆಕ್ಟ್ರಮ್‌ನಂತಹ ಡೀಲ್‌ನಲ್ಲಿ ಕದ್ದ ನೂರಾರು ಕೋಟಿ ರೂಪಾಯಿ ಹಣವನ್ನು ಸುದೇಶ್ ಟ್ರಸ್ಟ್, ರಾಮವಿಠಲ ಟ್ರಸ್ಟ್‌ಗಳಿಗೆ ಮೆಲ್ಲಗೆ ದಾಟಿಸಿದ್ದಾಳೆ.

ನೀರಾಗೆ ಬಿಜೆಪಿ ನಾಯಕರ ಮೂಲಕ ಪೇಜಾವರರ ಪರಿಚಯವಾಗಿದೆ. ಒಂದೇ ಸಾರಿ ಅನೇಕರನ್ನು ನುಂಗಿದಂತೆ ಕಾಣುವ ದೈತ್ಯ ಹೆಂಗಸು ನೀರಾಗೆ ಪೇಜಾವರರು ಯಾವ ಲೆಕ್ಕ. ಅವರನ್ನು ಜೊತೆಗೆ ಸೇರಿಸಿಕೊಂಡು ಟ್ರಸ್ಟ್, ಕಾಲೇಜು, ದಾನ-ಧರ್ಮದ ಕೆಲಸ ಶುರುಮಾಡಿಕೊಂಡಳು. ನೀರಾಳ ಹಿನ್ನೆಲೆ, ವ್ಯವಹಾರಗಳ ಬಗ್ಗೆ ಆಗ ಪೇಜಾವರಿಗೆ ಅದಿನ್ನೆಷ್ಟು ಗೊತ್ತಿತ್ತೊ, ಅವಳು ಕರೆದಲ್ಲಿಗೆ ಹೋಗಿ ಕೊಟ್ಟಷ್ಟು ತೆಗೆದುಕೊಂಡು ಜಂಟಿ ಬ್ಯುಸಿನೆಸ್ ಪ್ರಾರಂಭಿಸಿಯೇ ಬಿಟ್ಟರು.

ಆಶ್ಚರ್ಯ ಏನೆಂದರೆ ನೀರಾ ಮಹಾನ್ ಕಳ್ಳಿ ಎಂದು ಗೊತ್ತಾದ ಮೇಲೂ ನವೆಂಬರ್ 19ರ ನೀರಾ ಬರ್ತ್‌ಡೇ ದಿನವೇ ಪೇಜಾವರರು ದೆಹಲಿಯ ಕೃಷ್ಣಮಂದಿರ ಉದ್ಘಾಟಿಸಿದ್ದು!

ಈಗ ಇನ್ನೂ ಒಂದು ಹೆಜ್ಜೆ ಮುಂದೆ ಬಂದಿರುವ ಪೇಜಾವರರು ನೀರಾಳನ್ನು ಟೀಕಿಸುತ್ತಿರುವವರಿಗೆಲ್ಲಾ ಫೋನ್ ಮಾಡಿ, 'ಆಕೆಯನ್ನು ದೂಷಿಸಬೇಡಿ' ಎಂದು ಬೇಡಿಕೊಳ್ಳುತ್ತಿದ್ದಾರೆ!

ಯಾಕೆಂದು ನಾವು ಕೇಳಬಹುದಾ?

▶▶ 10

ಬಹುಶಃ ಪಕ್ಕದ ಕೃಷಿ ವಿವಿ ಆಕ್ರಮಿಸಿಕೊಂಡಿರುವ ಭೂಮಿಯನ್ನೇನಾದರೂ ಸರ್ಕಾರ ಬಿಡಿಸಿಕೊಟ್ಟು ಮತ್ತಷ್ಟು ಸೌಲಭ್ಯ ಕಲ್ಪಿಸಿಕೊಟ್ಟಿದ್ದರೆ ಈ ಹೊತ್ತಿಗಾಗಲೇ ಇದು ದೇಶದ ನಂಬರ್ ಒನ್ ಪಶು ವೈದ್ಯಕೀಯ ಕಾಲೇಜಾಗುತ್ತಿತ್ತು. ದುರಂತವೆಂದರೆ ಬಂದ ಯಾವ ಸರ್ಕಾರಗಳೂ ಇಂಥದೊಂದು ಸಂಸ್ಥೆಯ ಶ್ರೇಯಸ್ಸಿಗೆ ಶ್ರಮಿಸಲಿಲ್ಲ. ಪಶು ವೈದ್ಯಕೀಯವೆಂಬುದು ನಾಡಿನ ಮೂಕಜೀವಿಗಳ ಮೂಕವೇದನೆಯನ್ನು ತಣಿಸುವ ದೇವಕಾರ್ಯವೆಂದಾಗಲಿ, ಗುಡಿಯೊಳಗೆ ಕಲ್ಲಾಗಿ ಕೂತ ದೇವರು ಮೂಕಪ್ರಾಣಿಗಳ ಆರ್ತನಾದದಲ್ಲಿ ಜೀವ ತಳೆಯುತ್ತಾನೆಂಬ ಧರ್ಮಸಾರವಾಗಲಿ; ಯಾವ ಸರ್ಕಾರದ ಯಾವ ಮಂತ್ರಿ, ಅಧಿಕಾರಿಗೆ ಅರ್ಥವಾಗಬೇಕು?

ಆದರೆ ಈ ಎಲ್ಲಾ ಅಸಡ್ಡೆ ಅನ್ಯಾಯದ ನಡುವೆಯೂ ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜಿಗೆ ಅದರದ್ದೇ ಆದ ಹೆಗ್ಗಳಿಕೆಯಿದೆ. ಅದು ಇಲ್ಲಿನ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳ ಪರಿಶ್ರಮದ ಫಲ. ಬರಗಾಲದಲ್ಲಿ ಮೇವಿನ ದಾರಿದ್ರ್ಯ ನಿವಾರಿಸಲೆಂದೇ ಇಲ್ಲಿ ರಸಮೇವು (silage) ಸಂರಕ್ಷಣೆ ಮತ್ತು ಸಂಶೋಧನಾ ಕಾರ್ಯ ಚಾಲ್ತಿಯಲ್ಲಿದೆ. ಇದಕ್ಕೆಂದೇ ಕಾಲೇಜಿನ ನಲವತ್ತು ಎಕರೆಗಳಷ್ಟು ಕೃಷಿ ಭೂಮಿಯಲ್ಲಿ ವಿವಿಧ ತಳಿಯ ಧಾನ್ಯಗಳನ್ನು ಬೆಳೆಯಲಾಗಿದೆ.

ಇದಲ್ಲದೇ ಇಡೀ ದೇಶಕ್ಕೆ ಗಿರಿರಾಜ ಕೋಳಿಗಳ ಮೂಲ ತಳಿಯನ್ನು ಇದೇ ಕಾಲೇಜು ಉತ್ಪಾದಿಸಿಕೊಡುತ್ತದೆ. ಸ್ವರ್ಣಧಾರ ಎಂಬ ಮತ್ತೊಂದು ಲಾಭಕರ ತಳಿಯ ಕೋಳಿಯನ್ನೂ ಇಲ್ಲಿನ ವಿಜ್ಞಾನಿಗಳು ಸೃಷ್ಟಿಸಿದ್ದಾರೆ. ಹೈನು ಸಂಶೋಧನೆಗೆ ಸಂಬಂಧಪಟ್ಟಂತೆ ಇಲ್ಲಿ ಪ್ರತ್ಯೇಕ ಸಂಸ್ಥೆಯಿದೆ. ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಎಂಬ ಇನ್ನೊಂದು ಪ್ರತಿಷ್ಠಿತ ಸಂಶೋಧನಾ ಕೇಂದ್ರವಿದೆ. ಪ್ರಾಣಿ ರೋಗಗಳ ವಿರುದ್ಧ ಲಸಿಕೆ ಸೃಷ್ಟಿಸಲೆಂದೇ ಪ್ರತ್ಯೇಕ ಘಟಕವಿದೆ. ಕಾಲೇಜಿನದ್ದೇ ಆದ ವಿಶಿಷ್ಟ ದನದ ಕೊಟ್ಟಿಗೆ, ವಿವಿಧ ತಳಿಗಳ ಕುಕ್ಕುಟ ಫಾರ್ಮುಗಳು, ಕುರಿ ಸಾಗಾಣಿಕೆಯ ತರಹೇವಾರಿ ಸಂಶೋಧನೆಗಳು, ಹೀಗೆ ಅಸಂಖ್ಯಾತ ಜೈವಿಕ ಸಂಶೋಧನಾ ಕಾರ್ಯಾಚರಣೆಗಳ ಒಟ್ಟು ಮೊತ್ತದಂತಿರುವ ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜಿಗೆ ಅದರದೇ ಆದ ತಾಪತ್ರಯಗಳಿವೆ.


Veternary Council Of India ಅಂದರೆ ಭಾರತೀಯ ಪಶು ವೈದ್ಯಕೀಯ ಪರಿಷತ್ತಿನ ನಿಬಂಧನೆಗಳ ಪ್ರಕಾರ ಯಾವುದೇ ಪಶು ವೈದ್ಯಕೀಯ ಕಾಲೋಜೊಂದಕ್ಕೆ ಕನಿಷ್ಠ 150 ಎಕರೆ ಭೂಮಿಯಾದರೂ ಇರಲೇಬೇಕು. **Minimum Standards Of Verternary Education Act 1984** ರ ಪ್ರಕಾರ ಇದು ಕಾನೂನುಬದ್ಧ ಆದರೆ ಹೆಬ್ಬಾಳದ ಕಾಲೇಜಿಗಿರುವುದು ಕೇವಲ 55 ಎಕರೆ ಮಾತ್ರ. ಈಗಿರುವ ಸುಸಜ್ಜಿತ ಪಶು ಆಸ್ಪತ್ರೆ, 15ಕ್ಕೂ ಅಧಿಕ ವಿಭಾಗಗಳು ಮತ್ತು **instructional live stock farm complex** ಅಂದರೆ ಕಾಲೇಜಿನದ್ದೇ ಆದ ಮೇವು ಬೇಸಾಯ ಸಂಕೀರ್ಣಕ್ಕೆ ಈಗಿರುವ ಭೂಮಿ ಏನೇನಕ್ಕೂ ಸಾಲದು.

ಇಂಥದ್ದರಲ್ಲಿ ಇರುವ ಚೂರುಪಾರು ಭೂಮಿಯನ್ನೇ ಕಿತ್ತು ಅದನ್ನು ನ್ಯಾಯಾಧೀಶರ ಬಂಗಲೆಗಳ ನಿರ್ಮಾಣಕ್ಕೆಂದು ಸರ್ಕಾರ ಆಕ್ರಮಿಸಿಕೊಂಡರೆ, ಸಹಜವಾಗೇ ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜು ತನ್ನ ಮಾನ್ಯತೆಯನ್ನು ಕಳೆದುಕೊಳ್ಳುತ್ತದೆ. ಮೇವು ಬೆಳೆ ಮತ್ತು ಸಂಶೋಧನೆಗೆಂದು ನೂರು ಎಕರೆಗೂ ಅಧಿಕ ಭೂಮಿ ಇರಬೇಕಾದ ಪರಿಸ್ಥಿತಿಯಲ್ಲಿ ಈಗಿರುವುದು ಕೇವಲ 45 ಎಕರೆ ಮಾತ್ರ. ಈ ಭೂಮಿಯಲ್ಲೇ ರೈತರ ತರಬೇತಿ ಕೇಂದ್ರ ನಿರ್ಮಿಸಲು ಕಾಲೇಜು ಆಡಳಿತ ಮಂಡಳಿ ನಿರ್ಧರಿಸಿದೆ. ಜೊತೆಗೆ ಬಾತುಕೋಳಿ, ಟರ್ಕಿ ಕೋಳಿ ಮತ್ತು ದೈತ್ಯ ಎಮು ಹಕ್ಕಿಗಳ ಕುರಿತು ಸಂಶೋಧನೆಗೂ ಇಲ್ಲಿನ ವಿದ್ಯಾರ್ಥಿಗಳು ಮತ್ತು ವಿಜ್ಞಾನಿಗಳು ಕೈಹಾಕಿದ್ದಾಗಿದೆ.

ಇದೇ ಕ್ಯಾಂಪಸ್ಸಿನಲ್ಲಿ ಇಡೀ ದಕ್ಷಿಣ ಏಷ್ಯಾದಲ್ಲೇ ವಿನೂತನವಾದ ಸೂಪರ್ ಸ್ಪೆಷಾಲಿಟಿ ಪಶು ಆಸ್ಪತ್ರೆಯನ್ನು ಸ್ಥಾಪಿಸಲು ಅಮೆರಿಕದ ಮಿನೇಸ್ಸೊಟ್ಟಾ ವಿಶ್ವವಿದ್ಯಾಲಯ ವಿಶಿಷ್ಟ ಯೋಜನೆಯೊಂದನ್ನು ರೂಪಿಸಿದೆ. ಇದಕ್ಕೆಂದು ಖ್ಯಾತ ಉದ್ಯಮಿ ರತನ್ ಟಾಟಾ 200 ಕೋಟಿ ರೂಪಾಯಿಗಳನ್ನು ದಾನವಾಗಿ ಕೊಡುತ್ತಿದ್ದಾರೆ. ದೇಶದಲ್ಲೆಲ್ಲೂ ಇಲ್ಲದ ಇಡೀ ದಕ್ಷಿಣ ಏಷ್ಯಾಕ್ಕೇ ವಿನೂತನವಾದ ಪಶು ವೈದ್ಯಕೀಯ ಮತ್ತು ಸಂಶೋಧನೆಗೆಂದೇ ಮೀಸಲಾದ ಇಂಥದೊಂದು ಸೂಪರ್ ಸ್ಪೆಷಾಲಿಟಿ ಪಶು ಆಸ್ಪತ್ರೆ ಕರ್ನಾಟಕಕ್ಕೆ ಬರುತ್ತಿರುವುದೇ ಮಹಾನ್ ವರದಾನದಂತಿದೆ.



ಈಗ ಅಳಿದುಳಿದ ಕಾಲೇಜಿನ ಭೂಮಿಯನ್ನೂ ನ್ಯಾಯಾಧೀಶರ ವಸತಿಗೆಂದು ಸರ್ಕಾರ ಕಿತ್ತುಕೊಂಡಿತೆಂದರೆ ಬರಬೇಕಿದ್ದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯೇ ರದ್ದಾಗುತ್ತದೆ. ಇನ್ನೂರು ಕೋಟಿ ವೆಚ್ಚದ ಇಂಥದೊಂದು ಆಸ್ಪತ್ರೆಯನ್ನು ಸರ್ಕಾರ ಯಾವ ಕಾಲಕ್ಕೂ ಮಾಡಲು ಸಾಧ್ಯವಿಲ್ಲ. ಆಸ್ಪತ್ರೆ ರದ್ದಾಗುವುದು ಒತ್ತಟ್ಟಿಗಿರಲಿ, ಭೂಮಿಯೇ ಇಲ್ಲವೆಂದ ಮೇಲೆ






ಕಾಲೇಜಿನ ಮಾನ್ಯತೆಯೇ ರದ್ದಾಗುತ್ತದೆಯಲ್ಲ; 52 ವರ್ಷಗಳ ಇತಿಹಾಸವುಳ್ಳ, ದೇಶಕ್ಕೇ ಹೆಮ್ಮೆಯಂತಿರುವ ಮತ್ತೊಂದು ಪಶುವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ತಾಕತ್ತು ಸರ್ಕಾರಕ್ಕಿದೆಯೇ?

ಇದ್ದ ಕಾಲೇಜನ್ನೇ, ಅದರ ಆಸ್ತಿಪಾಸ್ತಿಯನ್ನೇ ಕಾಪಾಡಲಾಗದ ಲಜ್ಜೆಗೆಟ್ಟ ಸರ್ಕಾರವೊಂದು ಹೊಸ ಕಾಲೇಜನ್ನು ಸ್ಥಾಪಿಸುವುದುಂಟೆ. ಸಹಸ್ರಾರು ಪಶುಪಕ್ಷಿಗಳ ಜೀವ ಕಾಪಾಡಬಲ್ಲ ಒಂದು ಸಂಸ್ಥೆಯನ್ನು ನಾಶ ಮಾಡಿ ಅದರ ಸಮಾಧಿಯ ಮೇಲೆ ನ್ಯಾಯಾಧೀಶರ ಬಂಗಲೆ ಕಟ್ಟಿಸುವ ಸರ್ಕಾರದ ದುರುಳತನಕ್ಕೆ ಏನೆನ್ನಬೇಕು?

ಅಷ್ಟಕ್ಕೂ ಪಶು ವೈದ್ಯಕೀಯ ಕಾಲೇಜಿನ ಭೂಮಿಯನ್ನೇ ನ್ಯಾಯಾಧೀಶರು ಕೇಳುತ್ತಿರುವುದಾದರೂ ಏಕೆ?

ಪಕ್ಕದಲ್ಲೇ ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ವಿಶಾಲ ಆವರಣ ಖಾಲಿ ಬಿದ್ದಿದೆ. ಬೇಕಿದ್ದರೆ ಜಡ್ಜುಗಳಿಗೆಂದೇ ಬಿಡಿಎ ಮೂಲಕ ಹೊಸ ಬಡಾವಣೆ ನಿರ್ಮಿಸಬಹುದಿತ್ತು. ಈಗಾಗಲೇ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಇದಕ್ಕೆಂದೇ 30 ಎಕರೆ ಕಾದಿರಿಸಲಾಗಿತ್ತು. ಅದು ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟದ್ದೆಂದು ನಾಗರಿಕರು ಕೋರ್ಟ್ ಮೆಟ್ಟಲು ಹತ್ತಿದರೂ ಸರ್ಕಾರ ಬೇರೆ ವ್ಯವಸ್ಥೆ ಮಾಡಬಹುದಿತ್ತು. ಇದೆಲ್ಲವನ್ನೂ ಬಿಟ್ಟು ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಜಮೀನಿಗೇ ಸರ್ಕಾರ ಕೈಹಾಕಲು ಕಾರಣನಾದವನು ಸದ್ಯ ಕೃಷಿ ಇಲಾಖೆಗೆ ಪ್ರಧಾನ ಕಾರ್ಯದರ್ಶಿಯಾಗಿರುವ ಎನ್.ಸಿ. ಮುನಿಯಪ್ಪ!



ಈ ಹಿಂದೆ ಸಮಾಜ ಕಲ್ಯಾಣ ಇಲಾಖೆಯನ್ನೇ ಮುಂಡಾಮೋಚಿ, ಇಡೀ ಜಲಮಂಡಳಿಯನ್ನೇ ಗುಡಿಸಿ ಗುಂಡಾಂತರ ಮಾಡಿದವನು ಎನ್.ಸಿ. ಮುನಿಯಪ್ಪ. ಇಂಥವನಿಗೆ ಪಶು ವೈದ್ಯಕೀಯದ ಮಹತ್ವವಾಗಲಿ, ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯೊಂದರ ಹೆಗ್ಗಳಿಕೆಯಾಗಲಿ ಹೇಗೆ ತಾನೇ ಅರ್ಥವಾಗಬೇಕು. ಸರ್ಕಾರವೇ ನೆಲಹಿಡುಕ ಕೈಗೊಂಬೆಯಾದ ಮೇಲೆ ಇಂಥ ಖದೀಮ ಐಎಎಸ್‌ಗಳು ಪ್ರತಿಯೊಂದನ್ನೂ ರಿಯಲ್ ಎಸ್ಟೇಟ್ ಲೆಕ್ಕಾಚಾರದಲ್ಲೇ ನೋಡುತ್ತಾರೆ.

ಎಚ್‌ಎಸ್‌ಆರ್ ಲೇಔಟಿನಲ್ಲಿ ಜಡ್ಜುಗಳಿಗೆಂದು ಮೀಸಲಿಟ್ಟ ಜಾಗದ ಬಗ್ಗೆ ವಿವಾದವಿತ್ತಾದ್ದರಿಂದ ಪರ್ಯಾಯ ಜಮೀನಿಗಾಗಿ ಸರ್ಕಾರ ತಲೆ ಕೆಡಿಸಿಕೊಂಡಿರುವಾಗಲೇ ಪಶುವೈದ್ಯಕೀಯ ಕಾಲೇಜಿನ ಮೇಲೆ ಐಎಎಸ್ ಮುನಿಯಪ್ಪನ ಕಣ್ಣುಬಿದ್ದಿದೆ. ಮುಖ್ಯ ಕಾರ್ಯದರ್ಶಿ ರಂಗನಾಥ್ ತಲೆ ಕೆಡಿಸಿದ್ದೇ ಈತ. ಪಶು ಪೌಷ್ಟಿಕತೆ ಮತ್ತು ಮೇವು ಸಂಶೋಧನೆ ಬಗ್ಗೆ ಯಾವುದೇ ಪರಿಜ್ಞಾನವಿಲ್ಲದೆ ಬೆಳೆದ ಬೆಳೆಯನ್ನು ವ್ಯರ್ಥ ಬೇಸಾಯ ಎಂದೇ ಲೆಕ್ಕ ಹಾಕಿ 'ಖಾಲಿ ಜಮೀನೇ ಸೂಕ್ತ....' ಎಂದು ಫಿಟ್ಟಿಂಗ್ ಇಟ್ಟಿದ್ದಾ

ಐಎಎಸ್ ಮುನಿಯಪ್ಪನಿಗಿಂತಲೂ ಪಶು ವೈದ್ಯಕೀಯ ಕಾಲೇಜಿಗೆ ಕಂಟಕನಾದವನು ಪಕ್ಕದ ಕೃಷಿ ವಿವಿಯ ಎಸ್ಟೇಟ್ ಆಫೀಸರ್ ದೇವರಾಜ್. ಈತ ಹುಟ್ಟಾ ಭ ಮತ್ತು ಪಾರ್ಟ್‌ಟೈಮ್ ಲ್ಯಾಂಡ್ ಗ್ರಾಬರ್ ಕೂ ಗಾಂಧಿ ಕೃಷಿ ವಿವಿಯಲ್ಲಿದ್ದೇ ಅದರ ಆಸ್ತಿಯನ ನೆಲಗಳ್ಳರಿಗೆ ದೋಚಲು ನೆರವಾದ ಆರೋಪ ಈತ ಮೇಲಿದೆ. ಯಾವತ್ತು ಮುಖ್ಯ ಕಾರ್ಯದರ್ಶಿಯ ನ್ಯಾಯಾಧೀಶರ ಲೇಔಟಿಗೆ ಭೂಮಿ ನೋಡಿ ಎಂದ ಮುನಿಯಪ್ಪನಿಗೆ ದುಂಬಾಲು ಬಿದ್ದರೋ, ಈ ದೇವರಾ ತನಗೆ ಸಂಬಂಧವೇ ಇಲ್ಲದ ಪಕ್ಕದ ಪಶು ವೈದ್ಯಕೀಯ ಕಾಲೇಜಿನ ಬೆಳೆದ ಹೊಲಗಳನ್ನು ತೋರಿಸಿಬಿಟ್ಟ.


ಐಎಎಸ್ ಮುನಿಯಪ್ಪನಿಗೆ ಇಷ್ಟೇ ಸಾಕಿತ್ತು. ಹೇಗ ಭೂಮಿ ಖಾಲಿಯಿದೆ: ವ್ಯರ್ಥ ಏನೇನೋ ಬೆಳೆ ಪ್ರಯೋಜನವಿಲ್ಲ ಎಂದು ಲೆಕ್ಕ ಹಾಕಿ ಶಿಫಾರಸ್ಸು ಮಾಡೇಬಿ ಇದನ್ನೇ ನಂಬಿದ ನ್ಯಾಯಾಧೀಶರ ನಿಯೋಗ ಸ್ಥಳಕ್ಕೆ ಬಂ ನೋಡಿದ್ದೇ ತಡ 'ಇಷ್ಟೇ ಸಾಕು, ಇದಕ್ಕಿಂತ ಪ್ರಶಸ್ತವಾ ಜಮೀನೇ ಇಲ್ಲ' ಎಂದುಬಿಟ್ಟಿದೆ. ಪಾಪ ನ್ಯಾಯಾಧೀ ಗಾದರೂ ಬೆಳೆದ ಬೆಳೆ ವಿನಾಕಾರಣ ಬೆಳೆಸಿದ್ದಲ್ಲ ಎಂ ಹೇಗೆ ಗೊತ್ತಾಗಬೇಕು?

ಸದ್ಯ ಪಶು ವೈದ್ಯಕೀಯ ಕಾಲೇಜಿನ ಇಡೀ ವಿದ್ಯಾ ವೃಂದವೇ ಯಡ್ಡಿ ಸರ್ಕಾರದ ವಿರುದ್ಧ ಬೀದಿಗಿಳಿದಿ ವಿದ್ಯಾರ್ಥಿ ಸಂಘಟನೆಗಳಾದ ಎಸ್‌ಎಫ್‌ಐ ಮ ಎನ್‌ಎಸ್‌ಯುಐಗಳು ಈಗಾಗಲೇ ಪ್ರತಿಭಟನೆಗಿಳಿದ ವಿಜ್ಞಾನಿಗಳೂ, ಶಿಕ್ಷಣ ಕ್ಷೇತ್ರದ ಹಿರಿಯರೆಲ್ಲ ಸರ್ಕಾ ದಿವಾಳಿಕೋರತನದ ವಿರುದ್ಧ ಕಿಡಿಕಾರಿದ್ದಾರೆ. ಇಷ್ಟಾದ ಯಡ್ಡಿ ಸರ್ಕಾರಕ್ಕೆ ತನ್ನ ತಪ್ಪಿನ ಅರಿವಾಗು ಎಷ್ಟೆಂದರೂ ಅದು ದೀನೋಟಿಫಿಕೇಶ ಸರ್ಕಾರವಲ್ಲವೇ? ಈಗ ಪ್ರತಿ ಕಾಲೇಜನ್ನೇ ಡೀನೋಟಿ ಮಾಡಿ ಮುಗಿಸಿ ಹೊ ರುವ ಪಶು ಸಂಗೋಪ ಮಂತ್ರಿ ರೇವೂ ನಾಯ ಬೆಳಮಗಿಗೆ ಅದೇನು ರೋ ಬಡಿದಿ ದೆಯೋ?

ಕನಿಷ್ಠ ನ್ಯಾಯಾಧೀಶ ದರೂ ವಿವೇಕ ಬೇಡ ನಾಡಿನ ಪಶುಪಕ್ಷಿ ಜೀವಸ ಲದ ಶ್ರೇಯಸ್ಸಿಗಾಗಿ ಮೀಸ ಸಂಸ್ಥೆಯೊಂದನ್ನು ಮುಳುಗಿಸಿ ತಮ್ಮ ಮನೆ ಕಟ್ಟಿಸುವುದು ಯಾವ ನ್ಯಾ ಮೂಕ ಪ್ರಾಣಿಗಳ ಪ್ರಾಣ ರಕ್ಷಿಸಬೇಕಾದ ಜೀವ ದೇಗುಲ ಹಾಳುಗೆಡವಿ ಅಲ್ಲಿ ಮನೆ ಕಟ್ಟಿಸಿಕೊಂಡರೆ ನೆಮ್ಮದಿ ನೆಲೆಸು

ನ್ಯಾಯಧಾತರೇ ನಿರ್ಧರಿಸಲಿ. ಕಟುಕ ಸರ್ಕಾರದ ಹಿಂದಿ ಬುದ್ಧಿ ಹೇಳಲಿ.

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಕ್ಷೆ ಬದಲಾವಣಾ ಚತುರರು



ರಾಜ್ಯ ಬಿಜೆಪಿ ಸರ್ಕಾರದ ಡಿನೋಟಿಫೈ ಹಗರಣಗಳಿಗೆ ...ಕ ಬ್ರೇಕ್ ಬಿದ್ದಂತಾಗಿದೆ. ಸರ್ಕಾರದ ಈ ಘನಕಾರ್ಯಕ್ಕೆ ... ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಕಂದಾಯ ...ಿಗಳು ನಿಷ್ಠೆಯಿಂದ ಸಹಕರಿಸಿದ್ದು ಬಹಿರಂಗ ಸತ್ಯ. ...ಹುಬ್ಬಳ್ಳಿ-ಧಾರವಾಡದ ನಗರಾಭಿವೃದ್ಧಿ ಪ್ರಾಧಿಕಾರವೂ ...ಗರಣವೊಂದಕ್ಕೆ ಸಹಕರಿಸಿ ಸುದ್ದಿಯಲ್ಲಿದೆ. ಆದರಿದು ...ಯೂರಪ್ಪ ನಡೆಸಿದ ಹಗರಣವಲ್ಲ, ಬದಲಾಗಿ ಮಾಜಿ ...ತ ರಾಮಕೃಷ್ಣ ಹೆಗಡೆ ತನ್ನ ಸಂಬಂಧಿಕರಿಗೆ ಕೊಟ್ಟಿದ್ದ ...ನು ಹಗರಣವೊಂದರ ಕೇಂದ್ರಬಿಂದುವಾಗಿದೆ.

ರಾಮಕೃಷ್ಣ ಹೆಗಡೆ ಬಲು ನಾಜೂಕುತನದಿಂದ ತಮ್ಮ ...ಧಿಕರಿಗೆ ಎಂಟು ಎಕರೆಯಷ್ಟು ಭೂಮಿಯನ್ನು ...ಟಿಫೈ ಮಾಡಿದ್ದರು. ಹೆಗಡೆಯ ಶಿರಸಿ ಮೂಲದ ...ಧಿಕರಾದ ಪೈಗಣಕರ ಕುಟುಂಬಕ್ಕೆ ಹುಬ್ಬಳ್ಳಿ ಸಮೀಪದ ...ೇವರ ಕೊಪ್ಪದಲ್ಲಿ 8 ಎಕರೆ 20 ಗುಂಟೆ ಸರ್ಕಾರಿ ...ನು ನೀಡಿದ್ದರು. ಇದನ್ನು ವಿವಾದರಹಿತವಾಗಿ ...ಕೊಳ್ಳಲು ಪೈಗಣಕರ ಕುಟುಂಬ ತಂತ್ರಗಾರಿಕೆ ...ವನ್ನು ಹೆಣೆದಿತ್ತು, ಆದರನ್ವಯ ಅಕ್ಮೆ ಹೋಮ್ಸ್ ಪ್ರೈ ...ಡ್ ಅಂತೊಂದು ಸಂಸ್ಥೆಯನ್ನು ಹುಟ್ಟು ಹಾಕಿದರು. ...ದಕ್ಕೆ ಘನಶ್ಯಾಮ ಅಂಕೋಲೇಕರನೆಂಬಾತನನ್ನು ...ೇಜಿಂಗ್ ಡೈರೆಕ್ಟರ್ ಅಂತ ಕೂರಿಸಲಾಯ್ತು. ...ದಂತೆ ಪೈಗಣಕರ ಕುಟುಂಬದ ಮೋಹನದಾಸ ...ಕರ, ಸುಮಾ ಅಂಕೋಲೇಕರ, ಸದಾನಂದ, ಮಧುಮತಿ ...ಾದವರು ಸದಸ್ಯರಾದರು. ನಂತರ ಈ ಸಂಸ್ಥೆಗೆ 8 ... ಸರ್ಕಾರಿ ಭೂಮಿ ಕೊಡಲಾಯಿತು. ಆ ಭೂಮಿಯೀಗ ಕೋಟ್ಯಂತರ ರೂಪಾಯಿ ಬೆಲೆ ಬಾಳುತ್ತದೆ. ನಂತರ ಈ ಭೂಮಿಯನ್ನು ಅಭಿವೃದ್ಧಿಪಡಿಸಲು ಹಾಗೂ ಕೃಷಿಯೇತರ ಬಳಕೆಗಾಗಿ ಮಾರ್ಪಡಿಸಲು ಮತ್ತು ನಿವೇಶನ ನಿರ್ಮಿಸಲು ಸಂಸ್ಥೆಯ ಸದಸ್ಯರು ತೀರ್ಮಾನಿಸಿದರು. ಇದನ್ನೇ ಉಪಯೋಗಿಸಿಕೊಂಡ ಘನಶ್ಯಾಮ ಆ ಅಧಿಕಾರ ಪತ್ರವನ್ನು ತನ್ನ ಮಗ ಪಾಂಡುರಂಗ ಅಂಕೋಲೇಕರನ ಸುಪರ್ದಿಗೊಪ್ಪಿಸಿದ.

ಪಕ್ಕಾ ವಂಚಕ ಸ್ವಭಾವದ ಪಾಂಡುರಂಗ ಘಟಿಂಗ ಕೆಲಸಕ್ಕೆ ಅದಾಗಲೇ ಚಾಲನೆ ನೀಡಿದ್ದ. 2004 ರಲ್ಲಿ ಹುಬ್ಬಳ್ಳಿಯ ಗಜಾನನ ಪಟ್ಟಣದಲ್ಲಿ ಸಹಕಾರಿ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಈ ಭೂಮಿ ಅಡವಿಟ್ಟು ಪ್ರೈ ಲಿಮಿಟೆಡ್ ಹೆಸರಲ್ಲಿ 15 ಲಕ್ಷ ಸಾಲ ಎತ್ತಿದ. ಆ ಬ್ಯಾಂಕನಲ್ಲಿ ಚೇರ್‌ಮನ್ ಆಗಿದ್ದ ಕೃಷ್ಣಕಾಂತ ಇದಕ್ಕೆ ಸಾಥ್ ನೀಡಿದ. ಈತ ಪಾಂಡುರಂಗನ ಸಹೋದರ!

ಪಾಂಡುರಂಗನ ಅಸಲೀ ಬುದ್ಧಿ ಜಾಹೀರಾಗಿದ್ದು ಆಗಿನಿಂದಲೇ. ಆತ ಸಾಲ ಮರುಪಾವತಿಸದೆ ಸತಾಯಿಸಲು ಶುರುವಿಟ್ಟ. ನೋಟಿಸ್ ನೀಡಿದರೂ ಕೇರ್ ಮಾಡಲಿಲ್ಲ. ಕೇಸೂ ದಾಖಲಾಯಿತು. ಪಾಂಡುರಂಗ ಯಾವುದಕ್ಕೂ ಜಗ್ಗದಿದ್ದಾಗ ಆಕ್ಮೆ ಸಂಸ್ಥೆಯ ಪ್ಲಾಟ್‌ಗಳನ್ನು ಬಹಿರಂಗ ಹರಾಜಿಗಿಡಲು ಬ್ಯಾಂಕ್ ನಿರ್ಧರಿಸಿತು. ಪಾಂಡುವಿಗೂ ಅದೇ ಬೇಕಾಗಿತ್ತು. ಇದೆಲ್ಲದರಿಂದಾಗಿ 40,01,000 ಲಕ್ಷ ಮೌಲ್ಯದ ಜಮೀನು ಅಕ್ಮೆ ಸಂಸ್ಥೆಯ ಕೈ ತಪ್ಪಿತು. ಇಷ್ಟಕ್ಕೇ ಸುಮ್ಮನಾಗದ ಪಾಂಡುರಂಗ ಸಾಲದ ಬಾಬತ್ತು ಬಿಟ್ಟು ಉಳಿಕೆ ಹಣ ನೀಡುವಂತೆ ಅರ್ಜಿ ಗುಜರಾಯಿಸಿ ಇಕ್ಕಿಸಿಕೊಂಡ. 15 ಲಕ್ಷ ಸಾಲದ ಮೊತ್ತದ ಜೊತೆಗೆ ಭೂಮಿಯನ್ನು ಉಳಿಸಿಕೊಳ್ಳಬೇಕೆಂಬ ದುಷ್ಟ ಆಸೆಗೆ ಬಿದ್ದ ಆತ ಹಿಡಿದದ್ದು ಪಕ್ಕಾ ಅಕ್ರಮದ ಹಾದಿಯನ್ನು!

ಹಾಗೂ ನೋಡಹೋದರೆ ಪಾಂಡುರಂಗ ಬ್ಯಾಂಕ್‌ಗೆ ವಂಚಿಸಿದ್ದ. ನಗರಾಭಿವೃದ್ಧಿ ಪ್ರಾಧಿಕಾರ ತಯಾರಿಸಿದ್ದ ಪ್ಲಾನ್ ಪ್ರಕಾರದಲ್ಲಿ ಕೆಲ ಪ್ಲಾಟ್‌ಗಳನ್ನು ಜಾಮೀನು ಅಂತ ನೀಡಿದ್ದ. ಆದರೆ ಅದು ಕಂದಾಯ ಇಲಾಖೆಯ ಕಣ್ತಪ್ಪುವಂತೆ ನೋಡಿಕೊಂಡಿದ್ದ. ಮತ್ತೊಂದೆಡೆಯಿಂದ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿದ್ದ ನಕ್ಷೆ ಬದಲಾವಣಾ ಪಂಡಿತರನ್ನು ಬಳಸಿಕೊಂಡು ಮೊದಲ ಪ್ಲಾನ್ ಅನ್ನು ಸಂಪೂರ್ಣವಾಗಿ ಬದಲಾಯಿಸಿದ. ಈ ಹೊಸ ನಕ್ಷೆ 18.3.2010 ರಂದು ಸಂಪೂರ್ಣವಾಗಿ ತಯಾರಾಯಿತು. ಇದರಿಂದ ಹರಾಜಿನಲ್ಲಿ ಭೂಮಿ ಖರೀದಿಸಿದ್ದವರು ತಲ್ಲಣಿಸುವಂತಾಯ್ತು.

ಹಾಗೆ ಹರಾಜಿನಲ್ಲಿ ಭೂಮಿ ಕೊಂಡು ವಂಚನೆಗೊಳಗಾದ ಮಂದಿ ಹಾಗೂ ಬ್ಯಾಂಕ್‌ನವರು ಕರ್ನಾಟಕ ಅಪೆಲೆಂಟ್ ಟ್ರಿಬ್ಯೂನಲ್ ಕೋರ್ಟ್ ಮೆಟ್ಟಿಲೇರಿದರು. ಹರಾಜು ಪ್ರಕ್ರಿಯೆಯ ಲೋಪದಿಂದಾಗಿ ಅದು ವಿಫಲವಾಯಿತಾದರೂ ನಂತರದ ತೀರ್ಪು ಬ್ಯಾಂಕ್ ಹಾಗೂ ಖರೀದಿದಾರರ ಪರವಾಗೇ ಬಂತು. ನಂತರ ಅರ್ಜಿದಾರರು ಹೊಸ ಪ್ಲಾನ್ ರದ್ದುಗೊಳಿಸುವಂತೆ ಕೋರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮೊರೆಹೋದರು. ಆದರೆ ನಕ್ಷೆ ಬದಲಾವಣಾ ಪಂಡಿತರು ಲಾಬಿ ನಡೆಸಿ ಇದನ್ನು ಕಡೆಗಣಿಸಿದರು. ಇದರಿಂದಾಗಿ ಬ್ಯಾಂಕಿಂದ ಬಹಿರಂಗ ಹರಾಜಿನಲ್ಲಿ ಖರೀದಿಸಿದ ಪ್ಲಾಟ್‌ಗಳು ಬದಲಾವಣೆಗೊಂಡವು ಅವು ಪಾರ್ಕ್‌ಗಳಾಗಿ ರೂಪಾಂತರಗೊಂಡವು.

ಒಂದೇ ಏಟಿಗೆ ಕಣ್ಣಿಗೆ ರಾಚುವಂತಹ ಈ ವಂಚನೆ ಸಾಧ್ಯವಾದದ್ದು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿರುವ ಅಡ್ನಾಡಿ ಸಹೋದರರಿಬ್ಬರ ಕರಾಮತ್ತಿನಿಂದ. ಕಳೆದ ಇಪ್ಪತ್ತು ವರ್ಷಗಳಿಂದ ಇಲ್ಲೇ ಕುಕ್ಕರಿಸಿರುವ ಈ ಜೋಶಿ ಸಹೋದರರು ಕರಿ ಜೋಶಿ, ಕೆಂಪು ಜೋಶಿ ಅಂತಲೇ ಪ್ರಖ್ಯಾತರು. ಪ್ರತೀ ಸಭೆಯ ಸಂದರ್ಭದಲ್ಲೇ ಕೋಟಿ ಕೋಟಿ ಕಮಾಯಿಸುವ ಕಲಾಕಾರ ಜೋಡಿಯಿದು. ನಕ್ಷೆ ಬದಲಾವಣೆ, ಅಕ್ರಮ ಅನುಮೋದನೆ ಮೊದಲಾದವುಗಳು ಇವರ ದಂಧೆ. ಸದ್ಯ ಪಾಂಡುರಂಗನ ಘಟಿಂಗತನವೂ ಇದರ ನೆರಳಲ್ಲೇ ವಿಜೃಂಭಿಸಿರುವುದು ಸತ್ಯ.

ನಗರಾಭಿವೃದ್ಧಿ ಪ್ರಾಧಿಕಾರದೊಳಗಿರುವ ಇಂಥ ನುಂಗುಬಾಕರಿಂದ ಹಲವಾರು ಭೂಹಗರಣಗಳು ನಡೆಯುತ್ತಿವೆ. ಅಮಾಯಕರಿಗೆ ವಂಚನೆಯೂ ಆಗುತ್ತಿದೆ. ಇವರನ್ನು ಹೊರಗಟ್ಟದ ಹೊರತು ಪಾಂಡುರಂಗನಂಥವರಿಗೆ ಬುದ್ಧಿ ಕಲಿಸಲು ಸಾಧ್ಯವಿಲ್ಲ.

-ಹುಬ್ಬಳ್ಳಿಯಾಂವ

ಸುದೇಶ್ ಟ್ರಸ್ಟ್‌ನ ಗೌರವ ಪೋಷಕ ಪೇಜಾವರ ಸ್ವಾಮಿ...

AB..T US


...Foundation combined with the Sri Rama Vitthala Trust to start an Ayurvedic College at Siddapur located ...imoga District of Karnataka. It has run and continues to run several free food distribution /feeding camps ...for orphanages, leprosy sanatoriums and poor school children.

...RUSTEES

...ons :
...tha Theertha Swamiji, Sudha Vidwan,
...ontiff of Sri Pejawar Mutt Udupi, Karnataka

...aruna Menon, President
...ahul Singh, Treasury,BA, LLB
...iira Radia, Trustee
...ajiv Mohan, Trustee

ಸ್ವಾಮೀಜಿ ಮತ್ತು ವಾಜಪೇಯಿ ಜೊತೆ ನೀರಾ....



... ನೀರಾ ರಾಡಿಯಲ್ಲಿ.....

...ದೇವಸ್ಥಾನವನ್ನು ಕಟ್ಟಿಸಿದ್ದಾರೆ. ಪೇಜಾವರರು ದೇವಸ್ಥಾನ ನಿರ್ಮಾಣಕ್ಕೆ ಕಳ್ಳಿ ನೀರಾಳಿಂದ ...ೊತ್ತದ ಹಣ ಪಡೆದಿದ್ದಾರೆ. ಅಷ್ಟು ಹಣ ಎಲ್ಲಿಂದ ಬಂತು ಎಂದು ಹುಡುಕಿದರೆ ...ಜಿ ಸ್ಪೆಕ್ಟ್ರಂ ಹಗರಣವೋ, ಖಾಸಗಿ ವಿಮಾನ ...ಳ ಡೀಲಿನ ಅಕ್ರಮ ಹಣವೋ ಆಗಿರಲು

...ನೀರಾ ಎಂತಹ ಖತರ್‌ನಾಕ್ ವಂಚಕಿ ಎಂದು ...ರಡು-ಮೂರು ತಿಂಗಳುಗಳಿಂದ ...ಾಗಳು ವರದಿ ಮಾಡುತ್ತಿವೆ. ನೀರಾ ಒಬ್ಬ ...ಭಯೋತ್ಪಾದಕಿ' ಎಂತಲೂ ಕೆಲವರು ... ಬಣ್ಣಿಸುತ್ತಿದ್ದಾರೆ.

...ರಾ ರಾಡಿಯಾಗಿ ಗದ್ದಲವಾದಾಗಲೂ ...ರಿಗೆ ಮಾತ್ರ ನೀರಾ ಬಗ್ಗೆ ಇದ್ದ ವಿಶೇಷ ...ಮೆಯಾಗಲಿಲ್ಲ. ಹಾಗಾಗಿ ಕಳೆದ ನವೆಂಬರ್ 19ರಂದು ಕೃಷ್ಣ ದೇವಸ್ಥಾನದ ಉದ್ಘಾಟನೆಯನ್ನು ಪೇಜಾವರರು ನೆರವೇರಿಸಿದ್ದಾರೆ. ವಿಶೇಷ ಏನೆಂದರೆ ನವೆಂಬರ್ 19 ನೀರಾಳ ಬರ್ತ್‌ಡೇ ಆಗಿದೆ.

ವೇದಿಕ್ ಕಾಲೇಜ್ ಜಂಟಿ ದಂಧೆ

ಈ ನೀರಾ ಹಾಗೂ ಪೇಜಾವರರು ಸೇರಿಕೊಂಡು ಸುದೇಶ್ ಹಾಗೂ ರಾಮ ವಿಠಲ ಟ್ರಸ್ಟ್ ಹೆಸರಲ್ಲೇ ದೆಹಲಿಯಲ್ಲಿ ವೇದಿಕ್ ಸ್ಟಡೀಸ್ ಟ್ರಸ್ಟ್ ಎನ್ನುವ ಹೊಸ ಅಂಗಡಿ ತೆರೆದಿದ್ದಾರೆ. **VISVESA (Virtual University for Vedic Studies and Research)** ಎಂಬ ಹೆಸರಿನ ಇದು ಒಂದು ವೇದಾಧ್ಯಯನದ ಕಾಲೇಜು. ಈ ಕಾಲೇಜಿನ ಹೆಸರಲ್ಲೇ 'ವಿಶ್ವೇಷ' ಇದೆ. ಬೆನ್ನ ಹಿಂದೆ ನೀರಾ ಎಂಬ ರಾಡಿಯೂ ಇದೆ.

ಕರ್ನಾಟಕದಲ್ಲೂ ಜಂಟಿ ಬ್ಯುಸಿನೆಸ್

ನೀರಾಳ ಸುದೇಶ್ ಫೌಂಡೇಷನ್‌ನ ಶಾಖಾ ಕಚೇರಿಗಳು ದೆಹಲಿ, ಕೊಲ್ಕತ್ತಾ, ನೊಯ್ಡಾ, ಮುಂಬೈ, ಚೆನ್ನೈ, ಹೈದರಾಬಾದ್, ಬೆಂಗಳೂರು (ನಂ. 508, ಪ್ರೆಸ್ಟೀಜ್ ಸೆಂಟರ್ ಪಾಯಿಂಟ್ ಕನ್ನಿಂಗ್‌ಹ್ಯಾಂ ರಸ್ತೆ), ಅಹ್ಮದಾಬಾದ್, ರಾಂಚಿ, ಲಕ್ನೋ ಮತ್ತು ಭುವನೇಶ್ವರಗಳಲ್ಲಿವೆ.

ಪೇಜಾವರರು ಮತ್ತು ನೀರಾ ಸೇರಿ ದುಡ್ಡು ಮಾಡಲು ಕೆಲವು ಹೊಸ ದಾರಿಗಳನ್ನು ಹುಡುಕಿಕೊಂಡರು. ವೇದ, ಸಂಸ್ಕೃತ, ಆಯುರ್ವೇದ ಇತ್ಯಾದಿಗಳಿಗೂ ಸಾಕಷ್ಟು ಡಿಮ್ಯಾಂಡ್ ಇದೆಯಾದ್ದರಿಂದ ಧರ್ಮಕಾರ್ಯ ಮಾಡಿದ ಪುಣ್ಯವೂ ಬಂತು: ತಿಜೋರಿಯೂ ತುಂಬಿತು ಎಂದುಕೊಂಡು ಇದೇ ವಿಚಾರದ ಹೊಸ ಶಿಕ್ಷಣ ಸಂಸ್ಥೆಗಳನ್ನು ತೆಗೆಯಲು ಹೊರಟರು.

ಅದರಂತೆ ದೇಶದ್ರೋಹಿ ನೀರಾಳ ಜೊತೆ ಪೇಜಾವರರು ಶಿವಮೊಗ್ಗದಲ್ಲೊಂದು ಆಸ್ಪತ್ರೆ ಕಟ್ಟಲು ಹೊರಟಿದ್ದಾರೆ. ಶಿವಮೊಗ್ಗ ಸಾಗರ ರಸ್ತೆಯಲ್ಲಿ ತಲೆ ಎತ್ತಲಿರುವ ಆಸ್ಪತ್ರೆಗೆ ನೀರಾ ಭಾರಿ ಬಂಡವಾಳ ಹಾಕುತ್ತಿದ್ದಾಳೆ.

ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ (SUDA) ಮೂಲಕ ಸಾಗರ ರಸ್ತೆಯಲ್ಲಿ ಒಂದೆರಡು ಎಕರೆ ಜಮೀನಿನ ಮಂಜೂರಾತಿಗೂ ಈಗಾಗಲೇ ಪೇಜಾವರರು ಅರ್ಜಿ ಹಾಕಿದ್ದಾರೆ.

ಇದಿಷ್ಟೆ ಅಲ್ಲದೆ ಉತ್ತರ ಕನ್ನಡದ ಸಿದ್ದಾಪುರ ಬಳಿ ಇನ್ನೊಂದು ಆಯುರ್ವೇದಿಕ್ ಕಾಲೇಜು ಹಾಗೂ ಆಸ್ಪತ್ರೆ ಅಂಗಡಿ ತೆರೆಯಲು ಪೇಜಾವರ-ನೀರಾ ಹೊರಟಿದ್ದಾರೆ. ಇವೆಲ್ಲ ಸುದೇಶ ಟ್ರಸ್ಟ್, ಶ್ರೀರಾಮ ವಿಠಲ ಟ್ರಸ್ಟ್ ಎಂಬಿತ್ಯಾದಿ ಹೆಸರುಗಳಲ್ಲಿ ತಲೆ ಎತ್ತಿದರೂ ಇದೆಲ್ಲವೂ ನೀರಾ ಬೇರೆ ಬೇರೆ ಡೀಲುಗಳಲ್ಲಿ ಕದ್ದ ಹಣವೇ ಆಗಿದೆ.

ಅಡ್ವಾಣಿ-ವಾಜಪೇಯಿ ಸಾಟಾ ಅಲ್ಲ.

ಇಂಡಿಯಾ ದೇಶದ ಅತ್ಯಂತ ದೊಡ್ಡ ವಂಚನೆಯ ಹಗರಣದಲ್ಲಿ ಸಿಕ್ಕಿ



ಬಿದ್ದಿರುವ ನೀರಾ ರಾಡಿಯಾಗೆ ಮಹಾನ್ ದೇಶಭಕ್ತರಂತೆ ನಟಿಸುವ ಅಡ್ವಾಣಿ, ವಾಜಪೇಯಿಗಳೆಲ್ಲಾ ಗೊತ್ತು, ಮಹಾನ್ ರಾಷ್ಟ್ರ ನಿರ್ಮಾಣಕ್ಕೆ ಟೊಂಕಕಟ್ಟಿ ನಿಂತಂತೆ ಪೋಜು ಕೊಡುವ ಟಾಟಾ, ಅಂಬಾನಿಗಳೂ ಗೊತ್ತು.

ಅದಿಷ್ಟೆ ಅಲ್ಲ

ಮಹಾನ್ ದೈವಭಕ್ತರೂ, ಹಿಂದೂ ಧರ್ಮದ ರಕ್ಷಕರಂತೆ ಓಡಾಡುತ್ತಿರುವ ಪೇಜಾವರರೂ ಗೊತ್ತು.


ಇದು ಬರೀ ಗೊತ್ತಿರುವ ಸಂಗತಿಯಾಗಿದಿದ್ದರೆ, ಅಕಸ್ಮಾತ್ ಸಭೆ ಸಮಾರಂಭದಲ್ಲಿ ಸಿಕ್ಕು ಒಂದು ಫೋಟೋ ತೆಗೆಸಿಕೊಂಡ ಸನ್ನಿವೇಶವಾಗಿದ್ದರೆ ನಿರ್ಲಕ್ಷಿಸಬಹುದಾಗಿತ್ತು.

ಆದರೆ

ಪೇಜಾವರ ಸ್ವಾಮಿ ಈ ಕಳ್ಳಿಯ ಜೊತೆ ಹಣಕಾಸಿನ ವ್ಯವಹಾರ ಇಟ್ಟುಕೊಂಡಿದ್ದಾರೆ. ಅವರ ಸುದೇಶ್ ಟ್ರಸ್ಟಿನ ಗೌರವ ಪೋಷಕರಾಗಿದ್ದಾರೆ.

ನೀರಾಳಿಂದ ತಮ್ಮ ಕೃಷ್ಣ ದೇವಸ್ಥಾನದ ನಿರ್ಮಾಣಕ್ಕೆ ಹಣ ತೆಗೆದುಕೊಂಡಿದ್ದಾರೆ. ಜಂಟಿ ಬ್ಯುಸಿನೆಸ್‌ಗೆ ಕೈಹಾಕಿದ್ದಾರೆ.

ನೀರಾ ಅಪರಾಧಿಯಾದಾಗ ಪೇಜಾವರ...





ನೀರಾಳ ಆರ್ಥಿಕ ನೆರವಿನೊಂದಿಗೆ ಪೇಜಾವರರು ನಿರ್ಮಿಸಿರುವ ಕೃಷ್ಣ ದೇಗುಲ

ಬುದ್ಧಮಾರ್ಗದ ಎರಡು ಮಹಾಕಾವ್ಯಗಳು


ಪುಸ್ತಕ ವಿಮರ್ಶೆ

● ಜೆ.ಪಿ.ಬಸವರಾಜು

ಬುದ್ಧನ ಮಾರ್ಗದ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಮಧ್ಯಮ ಮಾರ್ಗವನ್ನು ಬುದ್ಧ ಅನುಸರಿಸಿದ ಎಂದು ಹೇಳಲಾಗಿದೆ. ಈ ಮಧ್ಯಮ ಮಾರ್ಗ ಎನ್ನುವುದು ಭೋಗ ಮತ್ತು ವೈರಾಗ್ಯಗಳ ನಡುವಿನ ಹಾದಿ. ಅತ್ತ ಭೋಗದ ಅತ್ಯಂತಿಕ ಸ್ಥಿತಿಯನ್ನು ಮುಟ್ಟದೆ, ಇತ್ತ ವೈರಾಗ್ಯದ ಕಠಿಣತಮ ಸ್ಥಿತಿಯನ್ನೂ ತಲುಪದೆ ಎರಡರ ನಡುವೆ ಸಮತೋಲನವನ್ನು ಕಂಡುಕೊಳ್ಳುವ ಮಾರ್ಗವೇ ಮಧ್ಯಮ ಮಾರ್ಗ.

3

ಬುದ್ಧಚರಿತೆಯಲ್ಲಿ ಬುದ್ಧನ ಬದುಕಿನ ಕಾವ್ಯಾತ್ಮಕ ವಿವರಗಳಿವೆ. ಬುದ್ಧನ ಹುಟ್ಟು, ಅವನ ಆಸಕ್ತಿಗಳು, ಬದುಕಿನ ಮುಖ್ಯ ಸಮಸ್ಯೆಗಳು ಅವನನ್ನು ಕಾಡಿದ ಪರಿ, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಅವನು ನಡೆಸಿದ ಪ್ರಯತ್ನ, ಅದರ ಫಲವಾದ 'ಜ್ಞಾನೋದಯ' ಇವೆಲ್ಲ ಈ ಕೃತಿಯಲ್ಲಿ ಮೈಪಡೆದಿವೆ. ಈಗಾಗಲೇ ಎಲ್ಲರಿಗೂ ತಿಳಿದ ಕಥಾ ವಿವರಗಳೇ ಇಲ್ಲಿವೆ. ಅಶ್ವಘೋಷನ ಈ ಕೃತಿಯ ಅರ್ಧಭಾಗ ಈ ಗೊತ್ತಿರುವ ಕತೆಗೇ ಮೀಸಲು. ಉಳಿದರ್ಧ ಭಾಗ ಅವನ ಧರ್ಮಸಾರವನ್ನು, ಸೂಕ್ಷ್ಮವನ್ನು ಹಿಡಿಯಲು, ಧರ್ಮಪ್ರಚಾರದ ವಿವರಗಳನ್ನು ವಿವರಿಸಲು ನೋಡುತ್ತದೆ. ಧರ್ಮಸೂತ್ರಗಳು ಯಾವಾಗಲೂ ಸಾಮಾನ್ಯರಿಗೆ ನಿಲುಕುವುದಿಲ್ಲ. ಅವನ್ನು ಸರಳವಾಗಿ ಮತ್ತು ಅರ್ಥಗರ್ಭಿತವಾಗಿ ಹೇಳುವುದು ಸುಲಭವಲ್ಲ. ಜೊತೆಗೆ ಬುದ್ಧ ತನ್ನ ಕಾಲದಲ್ಲಿದ್ದ ಅನೇಕ ಮಾರ್ಗಗಳನ್ನು ಅಭ್ಯಸಿಸಿದವನು; ಅನೇಕ ಸಂಪ್ರದಾಯಗಳನ್ನು ತಿಳಿದವನು. ತನ್ನ ಸಾಧನೆಯ ಆರಂಭದ ದಿನಗಳಲ್ಲಿ ಸಾಂಪ್ರದಾಯಿಕ ಆಶ್ರಮಗಳಿಗೆ ನಡೆದು ಅಲ್ಲಿನ ಮುನಿಗಳು ಅನುಸರಿಸುತ್ತಿದ್ದ ದೇಹದಂಡನೆಯ ಅನೇಕ ಯೋಗಮಾರ್ಗಗಳನ್ನು ಅನುಸರಿಸಿದವನು. ಅವುಗಳ ಅಂತಃಸತ್ವವನ್ನು ಪರೀಕ್ಷಿಸಿದವನು. ದೇಹ ಮತ್ತು ಮನಸ್ಸುಗಳು ಬೇರೆ ಬೇರೆ ಎಂದು ಭಾವಿಸಿದ್ದ ಅವರ ವಾದವನ್ನು ಟೀಕಿಸಿದವನು. ದೇಹ ನಾಶವಾಗುವಂಥದ್ದು ಎಂಬುದನ್ನು ಒಪ್ಪಿಕೊಂಡು, ಆತ್ಮ ಅವಿನಾಶಿಯಾದದ್ದು ಎಂಬುದನ್ನು ಪ್ರಶ್ನಿಸಿದವನು. ಚಿತ್ತಸ್ವಾಸ್ಥ್ಯವನ್ನು ಕಾಯ್ದುಕೊಳ್ಳಬೇಕಾದರೆ ದೇಹಸ್ವಾಸ್ಥ್ಯವನ್ನು ಎಚ್ಚರದಿಂದ ರಕ್ಷಿಸಬೇಕಾದ ಅಗತ್ಯವಿದೆ ಎಂಬುದನ್ನು ಕಂಡುಕೊಂಡವನು. ಹೀಗಾಗಿ ಅವನು ಕಂಡುಕೊಂಡ ಹೊಸ ಮಾರ್ಗ ಮತ್ತು ಅವನ ಧರ್ಮದ ಸಾರ ತುಂಬ ಸಂಕೀರ್ಣವಾದದ್ದು. ಹೀಗಾಗಿ ಅಶ್ವಘೋಷನ ಕಾವ್ಯ ಅನೇಕ ಸವಾಲುಗಳನ್ನು ಎದುರಿಸಿದೆ. ಸ್ವತಃ ಧರ್ಮ ಪ್ರಚಾರಕನಾಗಿದ್ದ ಅಶ್ವಘೋಷ ಇದನ್ನೆಲ್ಲ ಸೂಕ್ತ ರೀತಿಯಲ್ಲಿ ಸಂಯೋಜಿಸಿಕೊಂಡು ಮುನ್ನಡೆಯುವುದು ಅನಿವಾರ್ಯವಾಗಿತ್ತು. ಅದನ್ನಾತ ಬಹಳ ಸಮರ್ಥವಾಗಿಯೇ ಮಾಡಿರುವುದನ್ನು ಈ ಎರಡು ಕೃತಿಗಳು ಸಾಬೀತುಪಡಿಸುತ್ತವೆ.



ಬುದ್ಧಚರಿತೆಯ ಪೂರ್ವಾರ್ಧದಲ್ಲಿ ಬುದ್ಧನ ಹುಟ್ಟು, ಬಾಲ್ಯ, ಯೌವನಗಳ ಚಿತ್ರಣವಿದ್ದರೂ, ಇಲ್ಲಿ ಸೂಕ್ಷ್ಮವಾಗಿ ಕಾಣುವುದು ಬುದ್ಧನಲ್ಲಿದ್ದ ಕರುಣೆ ಮತ್ತು ಅವನ ವೈಚಾರಿಕ ಚಿಂತನೆಯ ಹೊಳಹುಗಳು. ಅವನು ರೋಗಿಯನ್ನು, ವೃದ್ಧನನ್ನು ಮತ್ತು ಸತ್ತವನನ್ನು ಕಂಡಾಗ ಸ್ಪಂದಿಸುವುದು ಈ ಕರುಣೆಯ ಕಾರಣದಿಂದಲೇ. ಇನ್ನೊಮ್ಮೆ ಸಿದ್ಧಾರ್ಥ ವನ ಸಂಚಾರಕ್ಕೆಂದು ಹೊರಟ ಸಂದರ್ಭವನ್ನು ಬಳಸಿಕೊಂಡು ಅಶ್ವಘೋಷ ಈ ಕರುಣೆಯ ಇನ್ನೊಂದು ಮುಖವನ್ನು ತುಂಬ ಸೂಕ್ಷ್ಮವಾಗಿ ಚಿತ್ರಿಸಿರುವುದನ್ನು ಗಮನಿಸಬಹುದು:

"ಸುತ್ತಣ
ವನದ ಮೇಲಣ ಒಲುಮೆಯಿಂದ
ಆ ನೆಲದ ಆಕರ್ಷಕ ಗುಣದಿಂದ
ಸೆಳೆಯಲ್ಪಟ್ಟು
ಆ ಉದ್ಯಾನದ
ಆ ಕೊನೆಯಂಚಿನವರೆಗೆ ತಲುಪಿದ
ಅಲ್ಲಿ ನೇಗಿಲ ಗೆರೆಯಿಂದ
ಸಿರಿಸಿರಿಯಾಗಿ ನೀರು
ಅಲೆಯಾಡಿದಂತಿರುವ
ಉತ್ತ ಭೂಮಿಯನ್ನು ಕಂಡ.

ನೇಗಿಲಿಗೆ ಸಿಕ್ಕಿ ಬುಡಮೇಲಾಗಿ
ಬಿದ್ದಿದ್ದ ಹುಲ್ಲುತೆಂಡೆಯಿದ್ದ
ಮತ್ತು
ಗುಳದ ಏಟು ತಗುಲಿ, ಸತ್ತು
ಅಂಗಾತ ಬಿದ್ದಿದ್ದ ಕ್ರಿಮಿ-ಕೀಟವಿದ್ದ-
ಆ ಉತ್ತ ಭೂಮಿಯನ್ನು ಕಂಡು,
ಸ್ವಜನರೇ ಕೊಲೆಯಾಗಿ ಬಿದ್ದಿದ್ದಂತೆ
ಬಹುವಾಗಿ ದುಃಖಿಸಿದ.


(ಅಭಿನಿಷ್ಕ್ರಮಣ ಸರ್ಗ)


ಬುದ್ಧನ ಕರುಣೆ ಎನ್ನುವುದು ಕೇವಲ ಮನುಷ್ಯರಿಗೆ ಮಾತ್ರ ಸೀಮಿತವಾದುದಲ್ಲ, ಅದು ಎಲ್ಲ ಜೀವಿಗಳಿಗೂ ವಿಸ್ತರಿಸಿಕೊಂಡದ್ದು. ಹೀಗಾಗಿಯೇ ಈ ಕರುಣೆಗೆ ಆಳವೂ ಹೆಚ್ಚು; ವಿಸ್ತಾರವೂ ಹೆಚ್ಚು. ಈ ಕರುಣೆಯೇ ಕಾರಣವಾಗಿ ಬುದ್ಧ ತನ್ನ ಜ್ಞಾನಮಾರ್ಗದ ಕಡೆಗೆ ನಡೆಯುತ್ತಾನೆ. ದುಃಖಮಯವಾದ ಈ ಬದುಕಿನಲ್ಲಿ ನೆಮ್ಮದಿ ಪಡೆಯುವುದು ಹೇಗೆ? ಹುಟ್ಟುಸಾವುಗಳಿಂದ ಮುಪ್ಪು ರೋಗಗಳಿಂದ ಜೀವಿಗಳನ್ನು ಬಿಡುಗಡೆಗೊಳಿಸುವುದು ಹೇಗೆ? ಎನ್ನುವ ಮುಖ್ಯ ಪ್ರಶ್ನೆಗಳೇ ಬುದ್ಧನ ಆಧ್ಯಾತ್ಮಿಕ ಹುಡುಕಾಟಕ್ಕೆ ಪ್ರೇರಣೆ ಒದಗಿಸುತ್ತವೆ.

ಜ್ಞಾನೋದಯವೆನ್ನುವುದು ಏಕಾಏಕಿ ಬುದ್ಧನ ಮೇಲೆರಗಿದ ಮಿಂಚಲ್ಲ, ಅವನ ನಿರಂತರ ಹುಡುಕಾಟದಲ್ಲಿ ಕಾಣಿಸಿದ ಬೆಳಕಿನ ದಾರಿ. ಅವನ ತಪಸ್ಸೆನ್ನುವುದು ಕೂಡಾ ಒಂದು ನಿರಂತರ ಧ್ಯಾನ; ಶೋಧ; ಹುಡುಕಾಟ. ಈ ಹುಡುಕಾಟದಲ್ಲಿ ತರ್ಕ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಸರಿ ತಪ್ಪುಗಳ ವಿವೇಚನೆ, ತರ್ಕದ ಮೂಲಕ ಅವನು ಕಂಡುಕೊಂಡ ಸತ್ಯವೇ ಅವನು ಕಂಡುಕೊಂಡ ಬೆಳಕು; ಅದೇ ಜ್ಞಾನೋದಯ. ತನ್ನ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಾ ಮನೆ, ಸಂಸಾರ, ರಾಜ್ಯ-ಎಲ್ಲವನ್ನೂ ತೊರೆದು ನಡೆದ ಸಿದ್ಧಾರ್ಥ ಮೊದಲು ಆಶ್ರಮಗಳಿಗೆ ಹೋಗುತ್ತಾನೆ. ತನ್ನಂತೆಯೇ ಇಂಥ ಹುಡುಕಾಟದಲ್ಲಿ ಈ ಆಶ್ರಮವಾಸಿಗಳು ಭಾಗಿಯಾಗಿರಬಹುದೆಂಬ ನಂಬಿಕೆಯಲ್ಲಿ ಆಶ್ರಮಗಳಿಗೆ ಹೋಗುವ ಬುದ್ಧ ಅವರ 'ತಪಸ್ಸನ್ನು' ವಿಶ್ಲೇಷಿಸುವುದು, ತನ್ನ ತರ್ಕದ, ವೈಚಾರಿಕ ನಿಲುವಿನ ಬೆಳಕಲ್ಲಿ ಆ 'ತಪಸ್ಸನ್ನು' ದಿಟ್ಟವಾಗಿ ಒರೆಗೆ ಹಚ್ಚುವುದು ಕಾರಣವಾಗಿ ಆ ಮುನಿಗಳ ತಪಸ್ಸೆನ್ನುವುದು ತೋರುಗಾಣಿಕೆಯದು; ಅರ್ಥವಿಲ್ಲದ್ದು ಎಂಬುದನ್ನು ಕಂಡುಕೊಳ್ಳುತ್ತಾನೆ. ಅವನ ತರ್ಕಶಕ್ತಿ ಸರಿತಪ್ಪುಗಳನ್ನು ನಿರ್ಣಯಿಸುವ ವಿವೇಚನಾ ಸಾಮರ್ಥ್ಯ ಮತ್ತು ದಿಟ್ಟವಾದ ವೈಚಾರಿಕ ನಿಲುವು ಬುದ್ಧನನ್ನು ಹೊಸದೊಂದು ಮಾರ್ಗದಲ್ಲಿ ಮುನ್ನಡೆಸಿತೆಂಬುದು ನಿಜ.

ಬೋಧಿವೃಕ್ಷದ ಅಡಿಯಲ್ಲಿ ಪರ್ಯಂಕಾಸನ ಹಾಕಿ ಕುಳಿತು ತಾನು ಹುಡುಕುತ್ತಿರುವುದು ಸಿಕ್ಕುವವರೆಗೂ ಮೇಲೇಳುವುದಿಲ್ಲ ಎನ್ನುವ ಹಟದಲ್ಲಿದ್ದಾಗ ಬುದ್ಧನಿಗೆ ತಾನು ಅರಸಿದ್ದು ಸಿಕ್ಕುತ್ತದೆ. ಇದನ್ನೇ ಜ್ಞಾನೋದಯವೆಂದು ಹೇಳಲಾಗಿದೆ. ಈ ಹುಡುಕಾಟವಾದರೂ ಎಂಥದ್ದು? ಒಂದು ರಾತ್ರಿಯ ವಿವಿಧ ಜಾವಗಳಲ್ಲಿ ಅವನು ಕಂಡುಕೊಂಡ, ಅರಿತುಕೊಂಡ ಸಂಗತಿಗಳು. ಮನುಷ್ಯನ ದುಃಖದ ಮೂಲ, ಯಾತನೆಯ ಮೂಲ, ಅವನ ಹುಟ್ಟು, ಸಾವು, ಮುಪ್ಪು, ರೋಗದ ಮೂಲ. ಇದೆಲ್ಲದರ ಹುಡುಕಾಟ ಎಂದರೆ ಅದು ಕಾರಣ ಪರಂಪರೆಯ ಅವಲೋಕನ; ಕಾರ್ಯ-ಕಾರಣ ಸಂಬಂಧಗಳ ಪರಿಶೀಲನೆ. ತರ್ಕ, ವಿವೇಚನೆ, ಪರಿಶೀಲನೆಗಳ ವೈಚಾರಿಕ ಮಾರ್ಗವೇ ಬುದ್ಧನ ಮಾರ್ಗ; ಈ ವೈಚಾರಿಕ ಬೆಳಕೇ ಜ್ಞಾನೋದಯ.

ಇದನ್ನು ಕಂಡುಕೊಂಡ ಕೂಡಲೇ ಬುದ್ಧ ಲೋಕಕ್ಕೆ, ಸಮಾಜಕ್ಕೆ, ಜನರಿಗೆ ಈ ಮಾರ್ಗದ ಬಗ್ಗೆ ತಿಳಿಯಹೇಳಲು ಯಾತ್ರೆ ಹೊರಡುತ್ತಾನೆ. ಇದೊಂದು ಮಹಾಯಾತ್ರೆ. ತನ್ನ ಕೊನೆಯ ಉಸಿರಿನವರೆಗೂ ಬುದ್ಧ ಈ ಯಾತ್ರೆಯನ್ನು ನಿಲ್ಲಿಸುವುದಿಲ್ಲ. **ತನ್ನ 29ನೇ ವರ್ಷದಲ್ಲಿ ಅರಮನೆಯನ್ನು ತೊರೆಯುವ ಸಿದ್ಧಾರ್ಥ 35ನೇ ವಯಸ್ಸಿನಲ್ಲಿ ಜ್ಞಾನೋದಯವಾಗಿ ಬುದ್ಧನಾಗುತ್ತಾನೆ. 80ನೇ** ವರ್ಷದಲ್ಲಿ ಮಹಾಪರಿನಿರ್ವಾಣ ಹೊಂದುತ್ತಾನೆ. ಸುಮಾರು 45 ವರ್ಷಗಳ ಕಾಲ ಈತ ಭಿಕ್ಷುವಾಗಿ ಲೋಕ ಸಂಚರಿಸುತ್ತಾನೆ. ತನ್ನ ತಂದೆ, ಮಗ, ತಮ್ಮಂದಿರು, ಬಂಧುಗಳು, ಹತ್ತಿರದವರು, ದೂರದವರು, ರಾಜರು, ಶ್ರೀಮಂತರು, ಸಾಮಾನ್ಯರು- ಹೀಗೆ ಎಲ್ಲರನ್ನೂ ತನ್ನೆಡೆಗೆ ಸೆಳೆಯುತ್ತ ತನ್ನ ಹೊಸ ಮಾರ್ಗದಲ್ಲಿ ನಡೆಯಲು ಪ್ರೇರೇಪಿಸುತ್ತಾನೆ.





ಇದೊಂದು ಅದ್ಭುತ, ಅಪೂರ್ವ ಘಟನೆಯಾಗಿ ಚರಿತ್ರೆಯಲ್ಲಿ ಉಳಿಯುತ್ತದೆ. ಧರ್ಮವಾಗಿ, ನೀತಿಯಾಗಿ, ಬದುಕಿನ ಸೂತ್ರವಾಗಿ ಜಗತ್ತಿನ ಅನೇಕ ರಾಷ್ಟ್ರಗಳಿಗೆ ವ್ಯಾಪಿಸುತ್ತದೆ.

ಬುದ್ಧಚರಿತೆಯ ಪೂರ್ವಾರ್ಧ ಕಥಾನಕ; ಉತ್ತರಾರ್ಧ ವೈಚಾರಿಕ. ಕಥೆಯ ಅಂಶವನ್ನು ಹೇಳುವಾಗ ಅಶ್ವಘೋಷ ಕವಿಯಂತೆ ವರ್ತಿಸುತ್ತಾನೆ. ಧರ್ಮದ ವಿಚಾರಗಳನ್ನು ಹೇಳುವಾಗ ಧರ್ಮ ಪ್ರಚಾರಕನ ಕಾರ್ಯವನ್ನು ಮಾಡುತ್ತಾನೆ. ಉತ್ತರಾರ್ಧ ಒಣ ವಿಚಾರಗಳಂತೆಯೂ ಕಾಣಿಸಬಹುದು. ಆದರೆ ಅವು ಅನುಪಯುಕ್ತ ವಿಚಾರಗಳಲ್ಲ, ಒಂದು ಮಹಾನ್ ಚೇತನದ ಚಿಂತನೆಯ ಸಾರ ಅಲ್ಲಿದೆ ಎಂಬುದನ್ನೂ ಮರೆಯುವಂತಿಲ್ಲ. ಕೇವಲ ಬೌದ್ಧ ಧರ್ಮೀಯರಿಗೆ ಮಾತ್ರ ಈ ವಿಚಾರಗಳನ್ನು ಬುದ್ಧ ಹೇಳಿಲ್ಲ, ಮನುಕುಲದ ಯಾತನೆಗೆ ಸಿಕ್ಕ ಎಲ್ಲರಿಗೂ ಅಲ್ಲಿ ಪರಿಹಾರದ ಮಾರ್ಗವಿದೆ; ಬಿಡುಗಡೆಯ ಸೂತ್ರವಿದೆ.

ಸಿದ್ಧಾರ್ಥ ಅರಮನೆಯನ್ನು ನಡುರಾತ್ರಿಯಲ್ಲಿ ಸದ್ದಾಗದಂತೆ ತೊರೆಯುವ ಸಂದರ್ಭ, ಕಾಡಿನಲ್ಲಿ ತನ್ನ ತಲೆಗೂದಲನ್ನು ಕತ್ತರಿಸಿ ಆಗಸಕ್ಕೆ ಎಸೆದು ಸನ್ಯಾಸದ ಬಟ್ಟೆಗಳನ್ನು ತೊಡುವ ಸನ್ನಿವೇಶ, ಬೋಧಿವೃಕ್ಷದ ಅಡಿಯಲ್ಲಿ ಧ್ಯಾನಕ್ಕೆ ಕುಳಿತಾಗ ಅವನ ಧ್ಯಾನವನ್ನು ಕೆಡಿಸಲು ಮುಂದಾಗುವ ಮಾರನ ಭೂತಗಣದ ವರ್ಣನೆ ಹೀಗೆ ಕೆಲವು ಸನ್ನಿವೇಶಗಳನ್ನು ಅಶ್ವಘೋಷ ಕಟ್ಟಿರುವ ರೀತಿ ಅದ್ಭುತವಾಗಿದೆ.

ಸೌಂದರನಂದ ಹೆಚ್ಚು ತೀವ್ರವಾದದ್ದು; ಉತ್ಕಟವಾದದ್ದು. ಕಾವ್ಯವಾಗಿಯೂ ಇದು ಬುದ್ಧಚರಿತೆಗಿಂತ ಹೆಚ್ಚು ಸೊಗಸು, ಚೆಲುವಿನಿಂದ ಕೂಡಿದ್ದು. ಬುದ್ಧಚರಿತೆಗಿಂತ ಸೌಂದರನಂದವನ್ನೇ ಹೆಚ್ಚು ಜನ ಕಾವ್ಯಪ್ರೇಮಿಗಳು ಇಷ್ಟಪಡುತ್ತಾರೆ. ಇದಕ್ಕೆ ಕಾರಣವೂ ಇದೆ. ಬುದ್ಧನ ಮಲತಮ್ಮನಾದ ನಂದ ಅತ್ಯಂತ ಸುಂದರ; ಅವನ ಹೆಂಡತಿ ಸುಂದರಿಯೂ ಅನುಪಮ ರೂಪವಂತೆ. ಇವರಿಬ್ಬರ ನಡುವಣ ಪ್ರೀತಿ ಅಪ್ರತಿಮವಾದದ್ದು. ಇವರಿಬ್ಬರ ನಡುವಿನ ಪ್ರೀತಿ, ಆಕರ್ಷಣೆಗಳು ಅತ್ಯಂತಿಕ ಸ್ಥಿತಿಯನ್ನು ಮುಟ್ಟಿದವು. ಇಂಥ ನಂದನಿಗೆ ಬುದ್ಧ ಸನ್ಯಾಸ ದೀಕ್ಷೆ ಕೊಡುವ, ಅವನನ್ನು ಬೌದ್ಧಭಿಕ್ಷುವಾಗಿ ಪರಿವರ್ತಿಸುವ ಕತೆಯೇ ಸೌಂದರನಂದ ಕಾವ್ಯ. ಇಲ್ಲಿ ಹೃದಯಸ್ಪರ್ಶಿಯಾದ, ಸೂಕ್ಷ್ಮವಾದ ಅನೇಕ ಸನ್ನಿವೇಶಗಳು ಬರುತ್ತವೆ. ಸುಂದರಿ-ನಂದರ ಸೌಂದರ್ಯದ ವರ್ಣನೆ, ಅವರ ನಡುವಣ ಪ್ರೀತಿಯ ಪ್ರಖರತೆಯನ್ನು, ಹಾಗೆಯೇ ವಿರಹದ ತೀವ್ರತೆಯನ್ನು ತೋರಿಸುವ ಸಂದರ್ಭಗಳು, ಬುದ್ಧ ತನ್ನ ಭಿಕ್ಷಾಪಾತ್ರೆಯನ್ನು ನಂದನ ಕೈಯಲ್ಲಿರಿಸುವ ಸನ್ನಿವೇಶ, ಸೌಂದರ್ಯದ ಕಲ್ಪನೆಯನ್ನು ಮತ್ತು ಮಿತಿಯನ್ನು ತೋರಿಸಿಕೊಡುವುದಕ್ಕಾಗಿ ಬುದ್ಧ ನಂದನನ್ನು ಕರೆದುಕೊಂಡು ಆಕಾಶಕ್ಕೆ ನೆಗೆದು ಅಲ್ಲಿ ನಂದನಿಗೆ ತೋರಿಸುವ ದೃಶ್ಯಗಳು-ಹೀಗೆ ಈ ಕಾವ್ಯದಲ್ಲಿ ಅತ್ಯಂತ ಸ್ವೋಪಜ್ಞವಾದ, ಚೆಲುವನ್ನು ತುಳುಕಿಸುವ, ಕಾಂತಿಯುಕ್ತ ಭಾಗಗಳು ಅನೇಕವಿವೆ.

ಸೌಂದರನಂದ ಗಾತ್ರದಲ್ಲಿ ದೊಡ್ಡದಲ್ಲ, ಹದಿನೆಂಟು ಸರ್ಗಗಳಿಗೆ ಮಾತ್ರ ಈ ಕೃತಿ ಚಾಚಿಕೊಂಡಿದೆ. ಆದರೆ ಇದರ ಹೊಳಪು, ಚೆಲುವು ಉದ್ದಕ್ಕೂ ಹಬ್ಬಿಕೊಂಡಿದೆ. ನಿದರ್ಶನಕ್ಕೆ ಒಂದು ಸಣ್ಣ ಪದ್ಯಭಾಗವನ್ನು ಕೊಡುವುದಾದರೆ: ಬುದ್ಧ-ನಂದರು ಆಕಾಶಕ್ಕೆ ಹಾರಿ ಬಂದಾಗ ಅವರಿಗೆ ಹಿಮಪರ್ವತದ ಸೊಗಸು ಹೀಗೆ ಕಾಣಿಸುತ್ತದೆ-

ದೇವದಾರು ವೃಕ್ಷಗಳು ಗಮ್ಮೆಂದು
ನಾರುತ್ತಿದ್ದವು,
ಮೆಲುದನಿ ಮಾಡಿ ನದಿಗಳು ಹರಿಯುತ್ತಿದ್ದವು,
ಸರೋವರಗಳು ನಿರಿನಿರಿ ಮಿಂಚುತ್ತಿದ್ದವು,
ಜಲಪಾತಗಳು ಧುಮುಧುಮು ಧುಮುಕುತ್ತಿದ್ದವು
ಮತ್ತು ಚಿನ್ನದ ಬಂಡೆಗಳು ಮಿರುಗುತ್ತಿದ್ದವು

ಸುರಿಯುತ್ತಿದ್ದ ಹವಿಸ್ಸಿನಿಂದ ಧೂಮವನ್ನೇ
ಉತ್ತರೀಯವಾಗಿ ಹೊದ್ದಂತಿದ್ದ
ಆ ಪರ್ವತದ ಮೇಲೆ
ಸಿದ್ಧರೂ ಚಾರಣರೂ ಸಂಚರಿಸುತ್ತಿದ್ದರೆ
ಆ ಬಳಿಯ-ಆ
ನಿರಾಧಾರ ಅಪಾರ ನೀಲಾಕಾಶದಲ್ಲಿ
ಎರಡು ಮಾನವ ದ್ವೀಪಗಳಂತೆ ಕಂಡರಾ
ಗೌತಮಬುದ್ಧ ಮತ್ತು ನಂದರಿಬ್ಬರು!

(ದಶಮ ಸರ್ಗ)

ಇಲ್ಲಿ ಮೋಕ್ಷ ವಿಚಾರಗಳು, ಧರ್ಮಜಿಜ್ಞಾಸೆ ಇಲ್ಲವೆಂದಲ್ಲ, ಆದರೆ ಬುದ್ಧಚರಿತೆಯಲ್ಲಿರುವಂತೆ ವ್ಯಾಪಕವಾಗಿ ಇಲ್ಲ. ನಂದನಿಗೆ ಬುದ್ಧಗುರು ಮಾಡುವ ಉಪದೇಶದಲ್ಲಿಯೇ ಈ ಎಲ್ಲ ವಿಚಾರಗಳೂ ಅಡಕಗೊಂಡಿವೆ. ಕಥೆಯ ಒಳಗೇ ಧರ್ಮ ವಿಚಾರಗಳು ಅಂತರ್ಗತವಾದಂತೆ ಇರುವುದರಿಂದ ಇದು ಎಲ್ಲಿಯೂ ಹೊರೆಯಾಗುವುದಿಲ್ಲ.

4

ಬುದ್ಧನ ಮಾರ್ಗದ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಮಧ್ಯಮ ಮಾರ್ಗವನ್ನು ಬುದ್ಧ ಅನುಸರಿಸಿದ ಎಂದು ಹೇಳಲಾಗಿದೆ. ಈ ಮಧ್ಯಮ ಮಾರ್ಗ ಎನ್ನುವುದು ಭೋಗ ಮತ್ತು ವೈರಾಗ್ಯಗಳ ನಡುವಿನ ಹಾದಿ. ಅತ್ತ ಭೋಗದ ಅತ್ಯಂತಿಕ ಸ್ಥಿತಿಯನ್ನು ಮುಟ್ಟದೆ, ಇತ್ತ ವೈರಾಗ್ಯದ ಕಠಿಣತಮ ಸ್ಥಿತಿಯನ್ನೂ ತಲುಪದೆ ಎರಡರ ನಡುವೆ ಸಮತೋಲನವನ್ನು ಕಂಡುಕೊಳ್ಳುವ ಮಾರ್ಗವೇ ಮಧ್ಯಮ ಮಾರ್ಗ. ದೇಹ ಮತ್ತು ಮನಸ್ಸುಗಳ ನಡುವೆ ಸಮತೋಲನವನ್ನು ಕಂಡುಕೊಂಡ, ಒಂದನ್ನು ಶಿಕ್ಷಿಸಿ ಇನ್ನೊಂದನ್ನು ಸಾಧನೆಗೆ ಒಡ್ಡುವುದು ಸರಿಯಲ್ಲ ಎಂದು

ಬುದ್ಧ ಬುದ್ಧ ಈ ಮಾರ್ಗವನ್ನು ಅನುಸರಿಸಿದುದರಲ್ಲಿ ಆಶ್ಚರ್ಯವೇನೂ ಾಣುವುದಿಲ್ಲ.

ಭಾರತೀಯ ಪರಂಪರಾಗತ ನಂಬಿಕೆಗೆ ಬುದ್ಧನ ವಿಚಾರಗಳು ಎಂಥ ...ಟ್ಟು ಕೊಟ್ಟವು ಎಂಬುದನ್ನು ಒಂದೇ ಒಂದು ನಿದರ್ಶನದ ಮೂಲಕ ...ಡಬಹುದು: ಆತ್ಮ ಅವಿನಾಶಿಯಾದದ್ದು ಎಂಬ ವಾದವನ್ನು ಮೊದಲ ...ಗೆ ಬುದ್ಧ ಪ್ರಶ್ನಿಸಿದ. ಆತ್ಮವಾದವನ್ನು ಮಿಥ್ಯವಾದ ಎಂದು ಕರೆದ. ಜಗತ್ತಿನಲ್ಲಿ ಎಲ್ಲವೂ ಪರಿವರ್ತನಶೀಲವಾದದ್ದು, ಬದಲಾಗದಂತೆ ...ವುದು ಯಾವುದೂ ಇಲ್ಲ, ಹೀಗಾಗಿ ಈ ಜಗತ್ತು ಅನಾತ್ಮವಾದದ್ದು' ...ಮ ಹೇಳಿದ.

ಅರ್ಥವಾಗದ ಪರಿಭಾಷೆಯನ್ನು ಗಮನಿಸಿದಾಗ ಬುದ್ಧನ ಉಪದೇಶ ...ವಾಗಿ ಕಾಣುತ್ತದೆ. ಆದರೆ ಅಂಥ ಧಾರ್ಮಿಕ ಪರಿಭಾಷೆಯ ...ಗೂ ಬುದ್ಧನ ವಿಚಾರಗಳನ್ನು ಸಾರ ರೂಪದಲ್ಲಿ, ಸರಳ ಗ್ರಹಿಕೆಯಲ್ಲಿ ...ಡುವುದು ಸಾಧ್ಯವಿದೆ. ಧರ್ಮ, ಅರ್ಥ, ಕಾಮಗಳ ಬಗ್ಗೆ, ಆಹಾರ ...ಗಳ ಬಗ್ಗೆ ಹುಟ್ಟು ಸಾವು ಮುಪ್ಪು ರೋಗಗಳ ಬಗ್ಗೆ ಅವನಾಡಿದ ...ತುಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಲಾರದು. 'ಶಾಸ್ತ್ರ ...ತಿಗಿಂತ ಅಧಿಕವಾಗಿ ಭೂಕಂದಾಯವನ್ನು ವಸೂಲಿ ಮಾಡಬೇಡ, ...ಗಳಿಗೆ ಎಂದೂ ತೊಂದರೆ ಕೊಡಬೇಡ, ಅಹಂಕಾರಿಯಾಗಿ ...ರ್ಮಾತ್ಮರಿಗೆ ತೊಂದರೆಕೊಡಬೇಡ' ಎಂಬ ಸರಳ ಬೋಧನೆಗಳನ್ನೂ ...ನು ರಾಜರಿಗೆ ಮಾಡಿದ್ದಾನೆ. ಇಂಥದೇ ಉಪದೇಶವನ್ನು ಅವನು ...ಮಂತರಿಗೆ ಮಾಡುತ್ತಾನೆ. ತನ್ನ ಶಿಷ್ಯರಿಗೆ ಅವನು ಹೇಳಿದ ...ತುಗಳಂತೂ ಸರ್ವಕಾಲಕ್ಕೂ ಅನ್ವಯವಾಗುವಂತೆ ಕಾಣುತ್ತಿವೆ: "ಭೂಮಿ-ಜೀವ-ಅನ್ನ ಮತ್ತು ಹಣ ಮುಂತಾದುವನ್ನು ಬೆಂಕಿಯಂತೆ ...ಸಿರಿ.' 'ಭೂಮಿಯ ಮೇಲೆ ಏನೆಲ್ಲ ಬೆಳೆಯುತ್ತದೆಯೋ ಅದೊಂದನ್ನೂ ...ಮರುಳಿಸಬೇಡಿ, ಭೂಮಿಯನ್ನು ಡೊಗರುಗೊಳಿಸದಿರಿ, ಸೀಳದಿರಿ, ... (ರಸವಿಕ್ರಯ) ಮತ್ತು ಜ್ಯೋತಿಷ್ಯ ವೃತ್ತಿಯಿಂದ ದೂರವಿರಿ - ... ಜೀವಿಕೆಯ ಉತ್ತಮ ವಿಧಾನ' -ಇಂಥ ಮಾತುಗಳು ಇವತ್ತಿನ ...ಾಜಕ್ಕೆ ಎಷ್ಟೊಂದು ಅಗತ್ಯವಾಗಿವೆಯಲ್ಲವೇ?

5

ಬುದ್ಧತ್ವ ಪ್ರಾಪ್ತಿಯ 14ನೇ ಸರ್ಗಕ್ಕೆ ಬುದ್ಧಚರಿತೆಯ ಸಂಸ್ಕೃತ ...ಲ ಕೊನೆಗೊಳ್ಳುತ್ತದೆ. ಅಲ್ಲಿಂದ ಮುಂದಿನ ಭಾಗದ ಅನುವಾದಕ್ಕೆ ...ಎಲ್.ಬಸವರಾಜು ಅವರು ಬಳಸಿರುವುದು ಇ.ಎಚ್.ಜಾನ್ಸ್‌ಸ್ಟನ್ ...ರ ಇಂಗ್ಲಿಷ್ ಅನುವಾದವನ್ನು ಮತ್ತು ಇತರ ಅನುವಾದಿತ ...ಲಗಳನ್ನು. ಈ ಕಾರಣದಿಂದಾಗಿಯೊ ಏನೋ ಬಸವರಾಜು ಅವರು ...ೇ ಸರ್ಗದಿಂದ ಮುಂದಿನ ಭಾಗವನ್ನು ಪದ್ಯದಲ್ಲಿ ಹೇಳದೆ ಗದ್ಯದಲ್ಲಿ ...ದ್ದಾರೆ. ಇದಕ್ಕೆ ಬುದ್ಧನ ಉಪದೇಶ, ವೈಚಾರಿಕ ಚಿಂತನೆ, ಧಾರ್ಮಿಕ, ...ಗಿಕ ಪರಿಭಾಷೆಗಳ ವಿವರಗಳು ಸಮೃದ್ಧವಾಗಿ ತುಂಬಿಕೊಂಡಿರುವುದೂ ...ಾವಿರಬಹುದು. ಈ ಭಾಗವನ್ನು ಗದ್ಯದಲ್ಲಿ ಓದುವುದೇ ಹೆಚ್ಚು ...ೋಜನಕಾರಿಯಂತೆಯೂ (ಓದುಗನ ದೃಷ್ಟಿಯಲ್ಲಿ) ಕಾಣುತ್ತದೆ. (...ಘೋಷನ ಕಾವ್ಯ ಈ ಭಾಗದಲ್ಲಿ ಹೇಗಿದ್ದಿರಬಹುದು ಎಂಬ ...ಾಹಲವಂತೂ ಕಾವ್ಯಪ್ರೇಮಿಗಳಲ್ಲಿ ಉಳಿದೇ ಉಳಿಯುತ್ತದೆ.)

ಡಾ.ಎಲ್.ಬಸವರಾಜು ಅವರು ಈ ಎರಡೂ ಕೃತಿಗಳ ಕಾಂತಿ ...ಗದಂತೆ, ವೈಚಾರಿಕ ಚಿಂತನೆಗೆ ಭಂಗ ಬಾರದಂತೆ, ಕಾವ್ಯಸೂಕ್ಷ್ಮಗಳು ...ಗದಂತೆ ಅನುವಾದ ಮಾಡಿದ್ದಾರೆ. ಅನುವಾದಕ್ಕೆ ಅವರು ಬಳಸಿರುವ ... ಸರಳ, ಸ್ಪಷ್ಟ, ನೇರ; ವಚನದ ಭಾಷೆಗೆ ಹತ್ತಿರ. ಭಾವಲಯ ...ತ್ತು ಅರ್ಥಲಯಗಳಿಗೆ ಅನುಗುಣವಾಗಿ ಇರುವಂತೆ ನೋಡಿಕೊಳ್ಳಲು ...ವರಾಜು ಅವರು ಶ್ರಮಿಸಿರುವುದು ಪ್ರಧಾನವಾಗಿ ಕಾಣಿಸುತ್ತದೆ. ...ಗನಿಗೆ ಎಲ್ಲಿಯೂ ಗೊಂದಲವಾಗಬಾರದೆಂಬ ಎಚ್ಚರ ಉದ್ದಕ್ಕೂ ...ಬರುತ್ತದೆ. ಈ ಎಚ್ಚರವೇ ಕಾರಣವಾಗಿ ಅವರು ಬುದ್ಧನ ವಿಚಾರಗಳಿಗೆ ...ಕವಾದ, ಸಮಾನಾಂತರವಾದ ವಚನಗಳನ್ನು ಅಡಿಟಿಪ್ಪಣಿಗಳಲ್ಲಿ ...ನ್ನು ಕೊಟ್ಟಿದ್ದಾರೆ. ಈ ವಚನಗಳು ಬುದ್ಧನ ಧರ್ಮಸೂತ್ರವನ್ನು ...ತ್ತು ಧರ್ಮಸೂಕ್ಷ್ಮವನ್ನು ಅರಿಯಲು ನೆರವು ನೀಡುತ್ತವೆ. ವಚನ ...ತ್ಯದಲ್ಲಿ ಬಸವರಾಜು ಅವರು ನಡೆಸಿದ ತಲಸ್ಪರ್ಶಿಯಾದ ಸಂಶೋಧನೆ ...ತ್ತು ಅಧ್ಯಯನ ಇಲ್ಲಿ ನೆರವಿಗೆ ಬಂದಿರುವುದು ವಿಶೇಷವಾಗಿ ...ರುತ್ತದೆ. ಬಂಧದ ದೃಷ್ಟಿಯಿಂದ ನೋಡಿದಾಗ ಪೂರ್ಣ ತೃಪ್ತಿಯನ್ನು ...ತಿಗಳ ಪದ್ಯಭಾಗಗಳು ಕೊಡದೇ ಹೋಗಬಹುದು. ಆದರೆ ಎಲ್ಲ ...ರು ಓದುಗರನ್ನೂ ಮುಟ್ಟುವಲ್ಲಿ ಈ ಸರಳ ರಚನೆಗಳು ಮಹತ್ವದ ...ವನ್ನು ವಹಿಸುತ್ತವೆ.


ಅಶ್ವಘೋಷನ ಈ ಧಾರ್ಮಿಕ ಕೃತಿಗಳನ್ನು ಅನುವಾದಿಸುವುದು ... ಕಷ್ಟದ ಕೆಲಸ. ಸಂಸ್ಕೃತ, ಪಾಳಿ, ಇಂಗ್ಲಿಷ್ ಹೀಗೆ ಅನ್ಯಭಾಷೆಗಳ ...ಾದ ಗ್ರಹಿಕೆ ಇರಬೇಕೆಂಬುದರ ಜೊತೆಗೆ ಹಿಂದೂ, ಬೌದ್ಧ ... ಬೌದ್ಧ ಧರ್ಮದ ವಿವಿಧ ಶಾಖೆಗಳ ಪರಿಚಯವೂ ...ೇಕಾಗುತ್ತದೆ. ಈ ಧರ್ಮಗಳ ಧಾರ್ಮಿಕ ಪರಿಭಾಷೆಗಳ ಜೊತೆಗೆ ...ಗ ಭಾಷೆಯ ಪರಿಭಾಷೆಯೂ ಅನುವಾದಕನಿಗೆ ಅಗತ್ಯವಾಗಿ ...ೇಕಾಗುತ್ತದೆ. ಈ ಎರಡೂ ಕೃತಿಗಳಲ್ಲಿ ಬಸವರಾಜು ಅವರು ...ರುವ ಪದಸೂಚಿಗಳು, ಪೂರಕ ಅನುಬಂಧಗಳು, ಅಡಿ ಟಿಪ್ಪಣಿಗಳು, ...ಗಳ ಬಳಕೆ ಇತ್ಯಾದಿ ಅಂಶಗಳನ್ನು ಗಮನಿಸಿದಾಗ ಈ ಕೃತಿಗಳ ...ವಾದದ ಹಿಂದೆ ಎಂಥ ಕಠಿಣ ಮತ್ತು ಪಾಂಡಿತ್ಯಪೂರ್ಣ ...ಮವಿದೆ, ಎಷ್ಟು ಅಗಾಧ ಅಧ್ಯಯನವಿದೆ, ಎಂಥ ಸೆಣಸಾಟವಿದೆ ...ದು ತಿಳಿಯುತ್ತದೆ. ಬಸವರಾಜು ಅವರು ತಮ್ಮ ಇಳಿವಯಸ್ಸಿನಲ್ಲಿ ... ಒಂದು ಮಹತ್ಕಾರ್ಯಕ್ಕೆ ಕೈಹಾಕಿ ಬಹುದೊಡ್ಡ ಯಶಸ್ಸನ್ನು ...ದ್ದು ಕನ್ನಡಿಗರಿಗೊಂದು ಬಹುದೊಡ್ಡ ನಿಧಿಯನ್ನು ದೊರಕಿಸಿದ ...ಾಗಿಯೇ ಕಾಣುತ್ತದೆ. ಅದಕ್ಕಾಗಿ ಅವರಿಗೆ ಕನ್ನಡಿಗರ ಕೃತಜ್ಞತೆಗಳು ...ೇಕು.

...ಬುದ್ಧನ ಬಗ್ಗೆ ಆಸಕ್ತಿ ತೋರುವ ಎಲ್ಲರೂ ಇಟ್ಟುಕೊಳ್ಳಬೇಕಾದ ... ಶ್ರದ್ಧೆಯಿಂದ ಓದಬೇಕಾದ ಕೃತಿಗಳು ಇವು, ಎಂಬುದರಲ್ಲಿ ...ಡೇ ಅನುಮಾನವಿಲ್ಲ. ●

ಉಪೇಂದ್ರನ ಸೂಪರ್ ವಿಕೃತಿ

ಉಪೇಂದ್ರ ನಿರ್ದೇಶನದ ಸಿನಿಮಾ 'ಸೂಪರ್' ಕರ್ನಾಟಕದ ಥಿಯೇಟರ್‌ಗಳಲ್ಲಿ 25 ದಿನಗಳನ್ನು ಪೂರೈಸಿದೆ. ಇದು ಉಪೇಂದ್ರ ಬ್ರಾಂಡ್‌ನ ಮತ್ತೊಂದು ಟಿಪಿಕಲ್ ಸಿನಿಮಾ. 'ಎ' ಸಿನಿಮಾದಿಂದ ಶುರುವಾದ ಈ ಬ್ರಾಂಡ್‌ನಲ್ಲಿ ಜನರಿಗೇನೋ ಸಂದೇಶವನ್ನು ನೀಡುತ್ತಿದ್ದಾರೆ ಎಂಬ ಭ್ರಮೆಯನ್ನು ಮೂಡಿಸಲಾಗುತ್ತದೆ. 'ಸೂಪರ್'ನಲ್ಲಂತೂ ಅದು ಧಾರಾಳವಾಗಿಯೇ ಇದೆ. ಇಂದು ನಡೆಯುತ್ತಿರುವ ಭ್ರಷ್ಟಾಚಾರವನ್ನು, ರಾಜಕಾರಣಿಗಳ ದುಷ್ಟ ಆಟಗಳನ್ನು ವ್ಯಂಗ್ಯ ಮಾಡುವ ಈ ಸಿನಿಮಾ ಪ್ರಧಾನವಾಗಿ ಟಾರ್ಗೆಟ್ ಮಾಡುವುದು ಸಾಮಾನ್ಯ ಜನರನ್ನು, ಮೇಲ್ನೋಟಕ್ಕೆ ಅದು ಜನಸಾಮಾನ್ಯರ ನಿಷ್ಕ್ರಿಯತೆಯನ್ನು ಲೇವಡಿ ಮಾಡಿ ಅವರನ್ನು ಅನ್ಯಾಯದ ವಿರುದ್ಧ ಹೋರಾಟ ಮಾಡುವಂತೆ ಪ್ರಚೋದಿಸುತ್ತದೆ ಎನ್ನಿಸುತ್ತದೆ. ಈತನದ್ದೇ ನಿರ್ದೇಶನದ 'ಆಪರೇಷನ್ ಅಂತ'ದಲ್ಲೂ ಇದರ ಸೂಚನೆಗಳಿವೆ.

ಆದರೆ ಈ ರೀತಿಯ ಸಿನಿಮಾಗಳಲ್ಲಿ ಒಂದು ಅಪಾಯವಿದೆ. ಏಕೆಂದರೆ ಇವು ವ್ಯವಸ್ಥೆಯ ಕೆಟ್ಟ ಅಂಶಗಳ ವಿರುದ್ಧ ಮಾತನಾಡುತ್ತಲೇ ಅದನ್ನು ಮತ್ತಷ್ಟು ಬಲಪಡಿಸುತ್ತವೆ. ಕೊಳೆತು ಹೋಗಿರುವ ವ್ಯವಸ್ಥೆ ಕುರಿತಂತೆ ಎರಡು ವಿಭಿನ್ನ ದೃಷ್ಟಿಕೋನದ ವಿಮರ್ಶೆಗಳಿರಲು ಸಾಧ್ಯ. ಒಂದು, ಜನರನ್ನು ಜಾಗೃತಿಗೊಳಿಸಿ ಸಾಮೂಹಿಕ ಕ್ರಿಯೆಗಳ ಮೂಲಕ ವ್ಯವಸ್ಥೆಯ ಬದಲಾವಣೆಗೆ ತೊಡಗುವಂತೆ ಮಾಡುವ ಉದ್ದೇಶದ್ದು. ಇನ್ನೊಂದು, ಸಮಾಜವನ್ನು ಬೆತ್ತಲುಗೊಳಿಸುವ ಹೆಸರಿನಲ್ಲಿ ಮತ್ತಷ್ಟು ಪ್ರತಿಗಾಮಿ ಪರ್ಯಾಯಗಳೆಡೆಗೆ ಕೊಂಡೊಯ್ಯುವುದು. ಇಲ್ಲಿ ಉಪೇಂದ್ರ ಮಾಡುತ್ತಿರುವುದು ಎರಡನೆಯದ್ದನ್ನು.



ವ್ಯವಸ್ಥೆ ಬದಲಾವಣೆಗೆ ಸಾಮೂಹಿಕ ಕಾರ್ಯಾಚರಣೆಗೆ ಇಳಿಯದ ಜನರು ಸಿನಿಕರಾಗಿ 'ಇಲ್ಲಿ ಕಮ್ಯುನಿಸಂ ಬರಬೇಕು, ಮಿಲಿಟರಿ ಆಡಳಿತ ಬರಬೇಕು, ಹಿಟ್ಲರ್ ಥರಾ ಆಡಳಿತ ನಡೆಸಬೇಕು' ಅಂತ ಹೇಳುತ್ತಿರುತ್ತಾರೆ. ಅಂಥವರಿಗೆ ಕಮ್ಯುನಿಸಮ್ಮೂ ಗೊತ್ತಿಲ್ಲ, ಹಿಟ್ಲರ್ ಕೂಡಾ ಗೊತ್ತಿಲ್ಲ. ಫ್ಯಾಸಿಸ್ಟ್ ಸರ್ವಾಧಿಕಾರವನ್ನೂ, ಜನಸಾಮಾನ್ಯರ ಬೃಹತ್ ಹೋರಾಟದಿಂದ ನಡೆಯುವ ಕಮ್ಯುನಿಸ್ಟ್ ಕ್ರಾಂತಿಗಳನ್ನೂ ಒಂದೇ ಎನ್ನುವ ರೀತಿಯಲ್ಲಿ ತಿಳಿಯುತ್ತಾರೆ. ಎರಡೂ ಸೈದ್ಧಾಂತಿಕವಾಗಿ, ಆಚರಣೆಯಲ್ಲಿ ಪರಸ್ಪರ ವಿರುದ್ಧದ ಧಾರೆಗಳು ಅಂತ ಅವರಿಗೆ ಗೊತ್ತಿರುವುದಿಲ್ಲ. ಇಂಥವರೇ ಗುಜರಾತ್‌ನಲ್ಲಿ ಮೋದಿ ಸಕತ್ ಆಗಿ ಆಡಳಿತ ನಡೆಸುತ್ತಿದ್ದಾನಂತೆ, ನಮ್ಮಲ್ಲಿಗೂ ಅಂಥವನೇ ಬೇಕು ಎಂದೂ ಹೇಳುತ್ತಾರೆ.

ಸಾವಿರಾರು ಮುಸ್ಲಿಮರ ನರಮೇಧ ನಡೆಸಿದ ಮೋದಿ ಅದು ಹೇಗೆ ಜನಪರ ಆಡಳಿತ ನೀಡಬಲ್ಲ ಎಂದು ಅವರು ಯೋಚಿಸುವ ಗೊಡವೆಗೇ ಹೋಗುವುದಿಲ್ಲ. ಹಿಟ್ಲರ್ ಎಂದರೆ ಬಲಪ್ರಯೋಗದಿಂದ ಶಿಸ್ತನ್ನು ತಂದ ಸರ್ವಾಧಿಕಾರಿ ಎಂಬ ತಿಳಿವಳಿಕೆಯ ಅವರುಗಳು, ಅವನು ಇತಿಹಾಸ ಕಂಡ ಅತ್ಯಂತ ದುಷ್ಟ ನರಹಂತಕ ಎನ್ನುವ ಮಾಹಿತಿಯನ್ನು ಗಮನಿಸುವುದಿಲ್ಲ; ಗಮನಿಸಿದರೂ ಅದು ಅವರಿಗೆ ಮುಖ್ಯವಾಗಿರುವುದಿಲ್ಲ. ಮೋದಿ, ಹಿಟ್ಲರ್ ಥರದವರು ಮೂಲಭೂತವಾಗಿ ಶೋಷಕರ, ಬಂಡವಾಳಶಾಹಿಗಳ ಪರವಾಗಿ ಆಡಳಿತ ನಡೆಸುವವರು ಎನ್ನುವ ವಾಸ್ತವವೂ ಬೇಕಾಗಿರುವುದಿಲ್ಲ.

ಏಕೆಂದರೆ ಎಲ್ಲಿಂದಲೋ ಅವತರಿಸುವ ಮಹಾಪುರುಷನೊಬ್ಬ ಬದಲಾವಣೆ ತರುವುದು ಅವರಿಗೆ ಬೇಕಾಗಿರುತ್ತದೆ. ಉಪೇಂದ್ರನ ಸಿನಿಮಾ ಜನರ ಈ ಧೋರಣೆಯನ್ನು ಲೇವಡಿ ಮಾಡುವ ರೀತಿ ಕಾಣುತ್ತದೆ. ಜನರು ಅನ್ಯಾಯದ ವಿರುದ್ಧ ರೊಚ್ಚಿಗೆದ್ದು ತಮ್ಮಂತೆ ತಾವೇ ಎಲ್ಲವನ್ನೂ ಬದಲಾಯಿಸಬೇಕು ಎಂಬಂತಹ ಕರೆಗಳನ್ನು ನೀಡಲಾಗುತ್ತದೆ. ಒಂದು ಹುಸಿ ಕ್ರಾಂತಿಕಾರಿ ಸೋಗು ಉಪೇಂದ್ರ ನಿರ್ದೇಶನದ ಇಂತಹ ಸಿನಿಮಾಗಳಲ್ಲಿ ಕಾಣುತ್ತದೆ. ಆದರೆ ಅದಕ್ಕಾಗಿ ವ್ಯವಸ್ಥೆಯ ಬಲಿಪಶುಗಳಾದ ಜನರನ್ನೇ ವಿಪರೀತ ಲೇವಡಿ ಮಾಡಿ ಬಯ್ಯಲಾಗುತ್ತದೆ. ಜೊತೆಗೆ ಬೀದಿಯಲ್ಲಿ ಕಸ ಚೆಲ್ಲುವ, ಗೋಡೆ ಬದಿಯಲ್ಲಿ ಉಚ್ಚೆ ಹೊಯ್ಯುವ ಜನರು ನೂರು ಎಕರೆ ಭೂಮಿ ಡೀನೋಟಿಫೈ ಮಾಡಿದ ಮುಖ್ಯಮಂತ್ರಿಯಷ್ಟೇ ಅಪರಾಧಿಗಳು ಎನ್ನುವ ರೀತಿಯಲ್ಲಿ ಚಿತ್ರಿಸಲಾಗುತ್ತದೆ. ಕೊನೆಗೂ ಜನರು ತಮ್ಮ ಸಾಮೂಹಿಕ ಜನಾಂದೋಲನದಿಂದ ಅಲ್ಲಿ ಬದಲಾವಣೆ ತರುವುದಿಲ್ಲ, ಬದಲಿಗೆ ಈ ಮಹಾಪುರುಷ (ಅದು ನಿರ್ದೇಶಕನ ರೂಪದಲ್ಲೋ, ನಾಯಕನ ರೂಪದಲ್ಲೋ ಇರುವ ಉಪೇಂದ್ರ ಎಂದು ಹೇಳಬೇಕಾಗಿಲ್ಲ) ಮಾಡುವ ಟ್ರಿಕ್‌ನಿಂದ ಬದಲಾವಣೆ ಬರುತ್ತದೆ. ಹೆಚ್ಚೆಂದರೆ ಇವನಿಂದ ಪ್ರಚೋದನೆಗೊಳಗಾದ ಉದ್ರಿಕ್ತ ಗುಂಪುಗಳು (ಮಾರ್ಚ್‌ಗಳು- ಭಜರಂಗದಳ, ಶಿವಸೇನೆ ಕಲ್ಪಿಸಿಕೊಳ್ಳಿ) ಬೀದಿಬೀದಿಯಲ್ಲಿ ಅವರಿವರಿಗೆ ಚಚ್ಚುತ್ತಾರೆ.

ಹುಸಿ ಹುಸಿ ಭಾಷಣಗಳಿಂದ, ಬೀದಿ ಬಡಿದಾಟಗಳಿಂದ, ದುಷ್ಟ ಮಾರ್ಗಗಳಿಂದ ಸಂಪಾದಿಸಿದ ಲಕ್ಷ ಕೋಟಿ ಹಣದಿಂದ ಮತ್ತು ಸೂಪರ್ ಟ್ರಿಕ್‌ಗಳಿಂದ ಉಪೇಂದ್ರನ ಸಿನಿಮಾದಲ್ಲಿ ಬದಲಾವಣೆ ಬರುತ್ತದೆ. 'ಸೂಪರ್' ಸಿನಿಮಾದಲ್ಲೂ ಅಂತಿಮವಾಗಿ ಬದಲಾವಣೆ ಬರುವುದು ಇಂತಹುದೇ ರೀತಿಯಲ್ಲಿ, ಕೊಳಕು ಮಾರ್ಗಗಳಿಂದ ಸುಭಾಷ್‌ಚಂದ್ರ ಗಾಂಧಿ (ಉಪೇಂದ್ರ) ಅಧಿಕಾರಕ್ಕೆ ಬಂದು ಇಡೀ ರಾಜ್ಯವನ್ನು ಹರಾಜು ಹಾಕುತ್ತಾನೆ. ಆಗ ಜನರಿಗೆ ಸಾರ್ವಜನಿಕ ಆಸ್ತಿಯ ಬೆಲೆ ಅರಿವಾಗುತ್ತದೆ. ಒಂದೊಂದು ಊರಿನ ಪಾರ್ಕು, ರಸ್ತೆ ಮೈದಾನಗಳನ್ನು ಜನರಿಗೆ ವಿಭಾಗ ಮಾಡಿ ಹಂಚಿಬಿಡಲಾಗುತ್ತದೆ. ಅಲ್ಲಿಂದ ಮುಂದೆ ಪ್ರತಿಯೊಬ್ಬರೂ ತಮ್ಮ ತಮ್ಮ ಖಾಸಗೀ ಆಸ್ತಿಯಾದ ತಮ್ಮ ಭಾಗದ ರಸ್ತೆ ಪಾರ್ಕುಗಳನ್ನು ಅಚ್ಚುಕಟ್ಟು ಮಾಡಿ ಕೊಂಡುಬಿಡುತ್ತಾರೆ. ಆದರೆ ಮುಖ್ಯಮಂತ್ರಿ ಉಪೇಂದ್ರ ಮಾತ್ರ ಹಳ್ಳಿಯಲ್ಲಿ ಬೇಸಾಯ ಮಾಡಿಕೊಂಡು ಇದ್ದುಬಿಡುತ್ತಾನೆ. 20 ವರ್ಷಗಳಲ್ಲಿ ಕರ್ನಾಟಕ ಸಂಪದ್ಭರಿತ ದೇಶವಾಗಿಬಿಡುತ್ತದೆ. ವಿದೇಶೀಯರು ಇಲ್ಲಿ ಬಂದು ಕೂಲಿ ಕೆಲಸ ಮಾಡಲು ಶುರು ಮಾಡುತ್ತಾರೆ, ಭಿಕ್ಷುಕರಾಗಿ ದೇವಸ್ಥಾನಗಳ ಮುಂದೆ, ಬಸ್‌ಸ್ಟಾಂಡ್‌ಗಳಲ್ಲಿ ಕಾಣಸಿಗುತ್ತಾರೆ. ಕರ್ನಾಟಕ ಸಂಪದ್ಭರಿತವಾಗುವುದೇನೋ ಸರಿ, ಆದರೆ ಇದ್ದಕ್ಕಿದ್ದಂತೆ ಪಾಶ್ಚಾತ್ಯರು ಇಲ್ಲಿ ಭಿಕ್ಷುಕರಾಗುವುದು ಏಕೋ, ನಿರ್ದೇಶಕನಿಗೇ ಗೊತ್ತು.

ಸಮಾಜದಲ್ಲಿ ಆಗುತ್ತಿರುವ ಶೋಷಣೆಯ ಮೂಲ ಏನು ಎಂಬುದರ ಕುರಿತು ಉಪೇಂದ್ರನಿಗೆ ಕನಿಷ್ಠ ಜ್ಞಾನವಿದ್ದಂತೆ ಸಿನಿಮಾದಲ್ಲಿ ಎಲ್ಲೂ ತೋರುವುದಿಲ್ಲ. ಮಹಿಳೆಯರ ಮೇಲೆ ನಡೆಯುತ್ತಿರುವ ತಾರತಮ್ಯ ಮತ್ತು ದಬ್ಬಾಳಿಕೆಯು ಈ ಸಮಾಜ ವ್ಯವಸ್ಥೆಯ ಅತ್ಯಂತ ಪ್ರಮುಖ ಶೋಷಣೆಗಳಲ್ಲೊಂದು ಎನ್ನುವುದನ್ನು ಆತ ಬಿಂಬಿಸುವುದು ಹೋಗಲಿ, ಆ ಶೋಷಣೆಗೆ ಮತ್ತಷ್ಟು ಮೊನಚನ್ನೂ, ಹೊಸ ಹೊಸ ಮಹಿಳಾ ವಿರೋಧಿ ವಾದಗಳನ್ನೂ ಇವನೇ ಹುಡುಕಿಕೊಡುತ್ತಾನೆ. ಯಾವ ಜನರು ಶೋಷಣೆಯ ಬಲಿಪಶುಗಳಾಗಿರುತ್ತಾರೋ, ಅವರು ಸುಮ್ಮನಿರುವುದೇ ಶೋಷಣೆಗೆ ಕಾರಣವೆಂದು ತೋರಿಸುವುದು 'ಸೂಪರ್' ಸಿನಿಮಾದ ಒಂದು ಪ್ರಧಾನ ಎಳೆ. ಜನಸಾಮಾನ್ಯರು ಮಾಡುವ ಸಣ್ಣ ಪುಟ್ಟ ತಪ್ಪುಗಳೂ, ಶೋಷಕ ವರ್ಗಗಳು ಮಾಡುವ ಅಗಾಧ ಲೂಟಿಯೂ ಒಂದೇ ಪ್ರಮಾಣದ ತಪ್ಪು ಎಂದು ಬಿಂಬಿಸುವುದು ಈತನ ಹಿಂದಿನ ಸಿನಿಮಾಗಳಲ್ಲೂ ಕಂಡಿದೆ.


ಉಪೇಂದ್ರನ ಹಲವು ಸಿನಿಮಾಗಳಲ್ಲಿ ಹಿಂದೂತ್ವದ ವಾಸನೆ ಹೊಡೆಯುತ್ತದೆ. 'ಸ್ವಸ್ತಿಕ್' ಸಿನಿಮಾದಲ್ಲಿ ಆತ ಸ್ಪಷ್ಟವಾಗಿ ಮುಸ್ಲಿಂ ವಿರೋಧಿಯಾಗಿ ಕಾಣಿಸಿಕೊಳ್ಳುತ್ತಾನೆ. ಮಹಿಳೆಯರ ಬಗೆಗಿನ ಅವನ ನಿಲುವುಗಳೂ ಇದೇ ನೆಲೆಯಿಂದಲೇ ಬರುತ್ತಿರುವುದು. ವಿಶೇಷವಾಗಿ ಮಾಡ್ ಡ್ರೆಸ್ ಮಾಡಿಕೊಳ್ಳುವ ಹೆಣ್ಣುಮಕ್ಕಳ ಬಗ್ಗೆ ಅವನ ಸಿನಿಮಾದಲ್ಲಿ ಕಾಣುವ ವರಾತಗಳು ಕುಪ್ರಸಿದ್ಧವಾಗಿವೆ. 'ನಿಮ್ಮನ್ನು ಯಾರಾದರೂ ರೇಪ್ ಮಾಡಿದರೆ ಅದಕ್ಕೆ ಕಾರಣ ನೀವು ತೊಡುವ ಬಟ್ಟೆ. ನೀವು ಹಾಗೆ ಮಾಡುವುದರಿಂದಲೇ ಪ್ರಚೋದನೆಗೊಂಡು ಅತ್ಯಾಚಾರ ಇತ್ಯಾದಿ ಲೈಂಗಿಕ ಕಿರುಕುಳಗಳು ಸಂಭವಿಸುತ್ತವೆ' ಎಂಬುದು ಆತನ ಥಿಯರಿ. ವಾಸ್ತವದಲ್ಲಿ ಅತ್ಯಂತ ಹೆಚ್ಚು ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಗಳು ಪರಿಚಿತರಿಂದ, ಹತ್ತಿರದ ಸಂಬಂಧಿಗಳಿಂದ ನಡೆಯುತ್ತದೆ ಎಂಬ ಅಂಕಿ-ಅಂಶ ಕಟ್ಟಿಕೊಂಡು ಆತನಿಗೆ ಆಗಬೇಕಾದ್ದೇನೂ ಇಲ್ಲ. ಉಪೇಂದ್ರ ತನ್ನ ಸಿನಿಮಾಗಳಲ್ಲಿ ಮಾಡುತ್ತಿರುವುದೇನು? ಹುಡುಗಿಯರನ್ನು ಅರೆನಗ್ನವಾಗಿ ಏಕೆ ತೋರಿಸುತ್ತಾನೆ? ಮಹಿಳೆಯರ ಮೇಲೆ ಮತ್ತಷ್ಟು ಅತ್ಯಾಚಾರಗಳು ನಡೆಯಲಿ ಎಂದೇ? ಅಲ್ಲ, ಸಿನಿಮಾ ಜಾಸ್ತಿ ಓಡಲಿ ಎಂದು.

ಅಸಲೀ ವಿಚಾರ ಇರುವುದೇ ಇಲ್ಲಿ. ಇಂತಹ ವಿಕೃತಿಗೊಂದು ಮಾರ್ಕೆಟ್ ಇದೆ. 'ಏನೇ ಆದರೂ ಈ ಸಮಾಜದಲ್ಲಿ ನಡೆಯುತ್ತಿರುವುದನ್ನೇ ತೋರಿಸುತ್ತಾನೆ', 'ಇಂಥದ್ದೂ ನಡೆಯುತ್ತಿದೆ ಅಲ್ಲವಾ? ಕೆಲವು ಹೆಣ್ಣುಮಕ್ಕಳು ಹೀಗೆಯೇ ಇದ್ದಾರಲ್ಲವಾ?' ಅಂತ ಹೇಳುವವರೂ ಇರುತ್ತಾರೆ. ವಿಕೃತಿಗೆ ಇರುವ ಮಾರ್ಕೆಟ್‌ಅನ್ನು ಬಳಸಿಕೊಳ್ಳುವುದು ಮತ್ತು ವಿಕೃತಿಗೆ ಹೊಸ ಮಾರ್ಕೆಟ್‌ಅನ್ನು ಸೃಷ್ಟಿಸುವುದು ಉಪೇಂದ್ರನ ಸಿನಿಮಾಗಳ ಫಲಿತಾಂಶವಾಗಿದೆ. ಇಂತಹುದೇ ಕೆಲಸವನ್ನು ಹಲವು ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳು ಮಾಡಿಕೊಂಡು ಬಂದಿವೆ. ಈ ರೀತಿಯದೊಂದು ಮಾರ್ಕೆಟ್‌ಅನ್ನು ಬೆಳೆಸುವುದು, ನಂತರ 'ಏನು ಮಾಡುವುದು, ಜನ ಇಂಥದ್ದನ್ನೇ ಬಯಸುತ್ತಾರೆ. ಅವರು ಕೇಳಿದ್ದನ್ನು ನಾವು ಕೊಡುತ್ತೇವೆ' ಎನ್ನುವುದು ಇಂಥವರ ಚಾಳಿ.

ಇದರರ್ಥ ಇಂಥದನ್ನು ನೋಡುವ, ಓದುವ ಎಲ್ಲರೂ ಪ್ರಾರಂಭದಿಂದಲೇ ವಿಕೃತಿಯ ಆರಾಧಕರಾಗಿರುತ್ತಾರೆ ಅಂತ ಅಲ್ಲ. ತೌಡು ಕುಟ್ಟುವ ಹಳಸಲು ಸಿನಿಮಾಗಳನ್ನು, ಪತ್ರಿಕೆಗಳನ್ನು ಎಲ್ಲರೂ ಮಾಡುವ ಸಮಯದಲ್ಲಿ ಇವರೇನೋ ವಿಶಿಷ್ಟವಾದದ್ದನ್ನು ಹೇಳುತ್ತಾರೆ ಎಂಬ ಭ್ರಮೆಯನ್ನು ಮೊದಲು ಮೂಡಿಸುತ್ತಾರೆ. ಕಥೆಯನ್ನು ಹೇಳುವ ರೀತಿ, ಭಾಷೆಯನ್ನು ಬಳಸುವ ರೀತಿಯಲ್ಲಿನ ವಿಶಿಷ್ಟತೆಗಾಗಿ ಅದರ ಬಗ್ಗೆ ಕುತೂಹಲ ಮತ್ತು ಮೆಚ್ಚುಗೆ ಮೂಡುತ್ತದೆ. ಆದರೆ ಒಳಹೂರಣ ಗಲೀಜಾದದ್ದು ಎನ್ನುವುದು ವಾಚಕ/ಪ್ರೇಕ್ಷಕ ಮಹಾಶಯರಿಗೆ ಸುಲಭವಾಗಿ ಗೊತ್ತಾಗುವುದಿಲ್ಲ. ಸಮಾಜ ಇದರಿಂದ ಮತ್ತಷ್ಟು ಗಲೀಜಾಗುತ್ತದೆಯೇ ಹೊರತು ಯಾವ ರೀತಿಯಿಂದಲೂ ಸುಧಾರಿಸುವುದಿಲ್ಲ ಎನ್ನುವ ಕಾರಣಕ್ಕೆ ನಾವು ತಲೆಕೆಡಿಸಿಕೊಳ್ಳಬೇಕಿದೆ.

● ಡಾ.ಎಚ್.ವಿ. ವಾಸು

ಮಾನವ ಹಕ್ಕು ಹೋರಾಟಗಾರ
ಬಿನಾಯಕ್ ಸೇನ್ ಅವರಿಗೆ
ನ್ಯಾಯಾಲಯ ಜೀವಾವಧಿ
ಶಿಕ್ಷೆಯನ್ನು ನೀಡಿರುವ
ಹಿನ್ನೆಲೆಯಲ್ಲಿ ಎರಡು
ಪದ್ಯಗಳ ಅನುವಾದವನ್ನು
ಇಲ್ಲಿ ಪ್ರಕಟಿಸುತ್ತಿದ್ದೇವೆ.



ಜೈ

ಬಿನಾಯಕ್ ಷೇನ್ ತೀರ್ಪಿಗೆ ಜೈ!
ನಮ್ಮ ದೇಶವನ್ನು ರಕ್ಷಿಸಲಾಗಿದೆ
ಆತನಿಗೆ ಜೀವಾವಧಿ ಶಿಕ್ಷೆಯನ್ನು ನೀಡುವ ಮೂಲಕ.

ವೀರಚರಿತ್ರೆಗಳ ಈ ಪುರಾತನ ಪುಣ್ಯ ಭೂಮಿಯಲ್ಲಿ
ಬದುಕಿದ್ದ ಆ ಪಾತಕಿಗೆ
ಮರಣದಂಡನೆಯನ್ನೇ ನೀಡಬೇಕಿತ್ತು

ಇದು
ಹರಿಶ್ಚಂದ್ರರ ತಾಯಿನಾಡು,
ಭ್ರಷ್ಟಾಚಾರರಹಿತ ಭೂಮಿ,
ಬಡತನವೆಂಬುದೇ ಇರದ ದೇಶ,
ಅಣ್ಣ-ಅಕ್ಕಂದಿರ ವಿಶಿಷ್ಟ ರಾಷ್ಟ್ರ,
ಅಪಾರ ಸ್ವಾತಂತ್ರ್ಯಗಳಿರುವ ದೇವಗಿರಿ,
ಜಾತಿ/ಧರ್ಮ ಎಂಬ ಭೇದಭಾವಗಳಿರದ ಪವಿತ್ರ ಭೂಮಿ....
ಇಂತಹ ದೇಶವನ್ನು ಛಿದ್ರಗೊಳಿಸಲು
ಆತ ಸಂಚು ಹೂಡಿದ್ದ....

ಅಂಥವನಿಗೆ ಜೀವಾವಧಿ ಶಿಕ್ಷೆ
ನೀಡಿರುವ ನಮ್ಮ
ಪ್ರಜಾಪ್ರಭುತ್ವ ಮತ್ತು ನ್ಯಾಯಾಲಯಕ್ಕೆ
ಜೈ!

ಇಂಗ್ಲಿಷ್ ಮೂಲ: ಸಾಬು ಶಣ್ಮುಗಂ
ಕನ್ನಡಕ್ಕೆ: ಸಾವಂತ್ರಿ

ಹೇಳು

ಹೇಳು ನನ್ನ ತುಟಿಗಳು ಇನ್ನೂ ಸ್ವತಂತ್ರವಾಗಿವೆ ಎಂದು
ಹೇಳು ನನ್ನ ಭಾಷೆಗಿನ್ನೂ ತಾಕತ್ತಿದೆ ಎಂದು
ಹೇಳು ಸತ್ಯವಿನ್ನೂ ಜೀವಂತವಾಗಿದೆ ಎಂದು
ಹೇಳು ಹೇಳಬೇಕಾಗಿರುವುದನ್ನು ಹೇಳಲೇಬೇಕಿದೆ ಎಂದು

ಉರ್ದು ಮೂಲ: ಫೈಜ್ ಅಹಮದ್ ಫೈಜ್
ಕನ್ನಡಕ್ಕೆ: ಹಸನ್ ನಯೀಂ ಸುರಕೋಡು

▸▸ 2 ಡಾ. ಬಿನಾಯಕ್ ಸೇನ್‌ಗೆ ಜೀವಾವಧಿ!

ಮೊದಲನೆಯದಾಗಿ ಡಾ.ಸೇನ್ ಮಾವೋವಾದಿ ನಾಯಕ ಸನ್ಯಾಲರನ್ನು 33 ಬಾರಿ ಭೇಟಿಯಾದ ಆರೋಪ.

ಡಾ. ಸೇನ್ ಅವರಿಗೆ ನಾರಾಯಣ್ ಸನ್ಯಾಲರ ಮನೆಯವರು ಜೈಲಿನಲ್ಲಿರುವ ತಮ್ಮ ಸಂಬಂಧಿಯ ಆರೋಗ್ಯವನ್ನು ಜೈಲಿನ ಅಧಿಕಾರಿಗಳು ಕಡೆಗಣಿಸುತ್ತಿರುವುದರಿಂದ ನಾಗರಿಕ ಹಕ್ಕು ಸಂಘಟನೆಯ ಕಾರ್ಯಕರ್ತರಾಗಿ ತಾವು ಮಧ್ಯಪ್ರವೇಶ ಮಾಡಬೇಕೆಂದು ಮನವಿ ಮಾಡಿರುವ ಪತ್ರವನ್ನು ಸೇನ್ ಅವರೇ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಪ್ರತಿಬಾರಿ ಯಾವುದೇ ಗುಟ್ಟು-ಗುಮಾನಿಗೆ ಅವಕಾಶ ಕೊಡದಂತೆ ಪಿಯುಸಿಲ್ ಲೆಟರ್ ಹೆಡ್ಡಿನಲ್ಲೇ ಭೇಟಿಗೆ ಅವಕಾಶ ಕೋರಿದ್ದಾರೆ ಮತ್ತು ಜೈಲು ಅಧಿಕಾರಿಗಳ ಸಮಕ್ಷಮದಲ್ಲಿಯೇ ಅವರಿಬ್ಬರ ಭೇಟಿ ನಡೆದಿದೆ. ಪಾಟಿ ಸವಾಲಿನಲ್ಲಿ ಜೈಲಿನ ಅಧಿಕಾರಿಗಳು ಇವೆಲ್ಲವನ್ನೂ ದೃಢೀಕರಿಸಿದ್ದು ಮಾತ್ರವಲ್ಲದೆ ತಮ್ಮ ಕಣ್ಣು ತಪ್ಪಿಸಿ ಸನ್ಯಾಲರು ಯಾವುದೇ ಪತ್ರವನ್ನು ಸೇನ್ ಅವರಿಗೆ ಕೊಟ್ಟಿರುವ ಸಾಧ್ಯತೆಯೆ ಇಲ್ಲವೆಂದು ದೃಢವಾಗಿ ಹೇಳಿದ್ದಾರೆ. ಅಲ್ಲದೆ ಅವರಿಬ್ಬರೂ ಆರೋಗ್ಯದ ವಿಷಯವನ್ನು ಹೊರತುಪಡಿಸಿ ಬೇರೆ ಯಾವುದೇ ಮಾತುಗಳನ್ನು ಆಡಿಲ್ಲವೆಂದೂ ಹೇಳಿಕೆ ನೀಡಿದ್ದಾರೆ. ಆದರೂ ನ್ಯಾಯಾಲಯ ಈ ಹೇಳಿಕೆಯನ್ನೇ ಗಮನಕ್ಕೆ ತೆಗೆದುಕೊಳ್ಳಲಿಲ್ಲವೇಕೆ?

ಎರಡನೆಯದಾಗಿ ಡಾ. ಸೇನ್ ದಂಪತಿಗಳು ಮಾವೋವಾದಿಗಳು ಎಂಬುದಕ್ಕೆ ಪೊಲೀಸರು ಮುಂದಿಟ್ಟಿರುವ ಸಾಕ್ಷ್ಯಗಳಾದರೂ ಏನು? ಅವರು ಶಂಕರ್ ಮತ್ತು ಅಮಿತ್ ಎಂಬ ಇಬ್ಬರು ಮಾವೋವಾದಿಗಳಿಗೆ ಕೆಲಸ ಕೊಟ್ಟಿದ್ದರು ಎಂಬುದು. ಅಮಿತ್ ಮತ್ತು ಶಂಕರ್ ಎಂಬ ಹೆಸರುಳ್ಳ ಇಬ್ಬರು ಮಾವೋವಾದಿಗಳು ಇರುವುದು ನಿಜ. ಆದರೆ ಆ ಇಬ್ಬರು ಸೇನ್ ದಂಪತಿಗಳು ಕೆಲಸ ಕೊಟ್ಟಿದ್ದ ವ್ಯಕ್ತಿಗಳಲ್ಲ ಎಂಬುದನ್ನು ಪೊಲೀಸರೇ ಪಾಟಿ ಸವಾಲಿನ ಸಂದರ್ಭದಲ್ಲಿ ಒಪ್ಪಿಕೊಂಡಿದ್ದಾರೆ. ಸೇನ್ ದಂಪತಿಗಳು ಕಾಡಿನಲ್ಲಿ ಮಾವೋವಾದಿಗಳ ಸಭೆಯಲ್ಲಿ ಭಾಗವಹಿಸಿದ್ದರು ಎಂಬುದಕ್ಕೆ ಪೊಲೀಸರು ತೋರಿದ ಒಂದು ಡಾಕ್ಯುಮೆಂಟರಿ ಚಿತ್ರ ವಾಸ್ತವವಾಗಿ ಆದಿವಾಸಿಗಳ ಜೊತೆ ಅವರ ಆರೋಗ್ಯದ ಬಗ್ಗೆ ನಡೆಸುತ್ತಿದ್ದ ಸಂಭಾಷಣೆಯ ತುಣುಕೆಂದು ಆ ಸಾಕ್ಷ್ಯ ಚಿತ್ರ ತೆಗೆದವರೇ ಕೋರ್ಟಿನಲ್ಲಿ ಸಾಕ್ಷ್ಯ ಹೇಳಿದ್ದಾರೆ.

ಇಳಿನಾ ಸೇನ್ ಅವರು ಐಎಸ್ಐ ಎಂಬ ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆಯೊಡನೆ ಸಂಪರ್ಕ ಹೊಂದಿದ್ದಾರೆ ಎಂದೂ ಪೊಲೀಸರು ಆಪಾದನೆ ಮಾಡಿದ್ದರು. ಅದಕ್ಕೆ ಅವರು ತೋರಿದ ಪುರಾವೆ ದೆಹಲಿ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾಗಿರುವ ಇಂಡಿಯನ್ ಸೋಷಿಯಲ್ ಇನ್‌ಸ್ಟಿಟ್ಯೂಟ್ (ಐಎಸ್ಐ!)ಗೆ ಬರೆದ ಪತ್ರ. ಅದಲ್ಲದೆ 'ಕಾಮ್ರೇಡ್' ಎಂದು ಅದರ ಅಧ್ಯಕ್ಷರನ್ನು ಸಂಬೋಧಿಸಿದ್ದನ್ನು ಸಹ ಪೊಲೀಸರು ಸೇನ್ ದಂಪತಿಗಳು ಮಾವೋವಾದಿಗಳು ಎಂದು ಸಾಬೀತುಮಾಡಲು ಸಾಕ್ಷ್ಯವನ್ನಾಗಿ ಮುಂದಿಟ್ಟಿದ್ದರು. ಮೇಲ್ನೋಟಕ್ಕೆ ಹಾಸ್ಯಾಸ್ಪದವಾಗಿರುವ ಪೊಲೀಸರ ಈ ಪ್ರಯತ್ನಗಳನ್ನು ಮಾತ್ರ ನ್ಯಾಯಾಲಯ ಕಿಂಚಿತ್ತೂ ಶಂಕಿಸಿಲ್ಲ.



ಇದಲ್ಲದೆ ಸನ್ಯಾಲ್ ಎಂಬ ಮಾವೋವಾದಿ ನಾಯಕರನ್ನು ರಾಯಪುರದ ಬಾಡಿಗೆ ಮನೆಯೊಂದರಿಂದ ಬಂಧಿಸಲಾಗಿದೆಯೆಂದೂ, ಆ ಮನೆಯನ್ನು ಅವರಿಗೆ ಬಾಡಿಗೆ ಕೊಡಿಸಿದ್ದು ಸೇನ್ ಎಂಬುದು ಪೊಲೀಸರ ವಾದ. ಆದರೆ ಕೋರ್ಟಿಗೆ ಪೊಲೀಸರೇ ನೀಡಿರುವ ಮತ್ತೊಂದು ದಾಖಲೆಯಲ್ಲಿ ಸನ್ಯಾಲರನ್ನು ಆಂಧ್ರದ ಭದ್ರಾಚಲಂನಲ್ಲಿ ಬಂಧಿಸಲಾಗಿದೆಯೆಂದು ಹೇಳಿದ್ದಾರೆ. ಆ ಬಾಡಿಗೆ ಮನೆಯ ಮಾಲೀಕರ ಪ್ರಾಥಮಿಕ ಹೇಳಿಕೆಯಲ್ಲಿಯೂ ಸೇನ್‌ರ ಪ್ರಸ್ತಾಪ ಇಲ್ಲ, ಅದನ್ನು ನಂತರದಲ್ಲಿ ಸೇರಿಸಲಾಗಿದೆ. ಹಾಗೆಯೇ ಮಾವೋವಾದಿ ಕೇಂದ್ರ ಸಮಿತಿಯ ಪ್ರಶಂಸಾ ಪತ್ರಕ್ಕೆ ಯಾರದ್ದೂ ಸಹಿಯೇ ಇಲ್ಲ, ಅದು ಯಾರು ಬೇಕಾದರೂ ಯಾವುದೇ ಕಂಪ್ಯೂಟರ್‌ನಿಂದ ತೆಗೆಯಬಹುದಾದ ಪ್ರಿಂಟ್‌ಔಟ್. ಯಾವುದಾದರೂ ದಾಖಲೆಯನ್ನು ಪೊಲೀಸರು ವಶಪಡಿಸಿಕೊಂಡರೆ ಅದನ್ನು ಮಹಜರು ಮಾಡಿ ಪೊಲೀಸ್ ಅಧಿಕಾರಿಯು, ಆರೋಪಿಯು ಮತ್ತು ಸಾಕ್ಷಿಗಳ ಸಹಿಯನ್ನು ಪಡೆದುಕೊಂಡಿರಬೇಕು. ಆದರೆ ಈ ಪತ್ರಕ್ಕೆ ಅವ್ಯಾವುದೂ ಇಲ್ಲ, ಅದಕ್ಕೆ ಕಾರಣವನ್ನು ಕೇಳಿದರೆ ಅದು ಕೈತಪ್ಪಿನಿಂದ ಆದದ್ದೆಂದು ಸಮಜಾಯಿಷಿ ನೀಡಿದ್ದಾರೆ ಪೊಲೀಸರು! ಅದನ್ನು ನ್ಯಾಯಾಲಯ ಒಪ್ಪಿಕೊಂಡಿದೆ!!

ಹೀಗೆ ಡಾ. ಬಿನಾಯಕ್ ಸೇನ್‌ರನ್ನು ಮಾವೋವಾದಿ ಎನ್ನಲು ಅಥವಾ ಮಾವೋವಾದಿಗಳ ಕುರಿಯರ್ ಎನ್ನಲು ಅಥವಾ ಸರ್ಕಾರದ ವಿರುದ್ಧ ಯುದ್ಧ ಹೂಡಿದ್ದರು ಎನ್ನಲು ಯಾವುದೇ ಸಾಕ್ಷ್ಯ ಪುರಾವೆಗಳಿಲ್ಲ ಅಥವಾ ಯಾವುದೇ ಬಲವಾದ ಅಥವಾ ಅನುಮಾನಕ್ಕೆಡೆಯಿಲ್ಲದಂತೆ ಸಾಬೀತು ಮಾಡುವ ಸಾಕ್ಷ್ಯಾಧಾರಗಳಿಲ್ಲ.

ಆದರೂ ಡಾ. ಬಿನಾಯಕ್ ಸೇನ್‌ರನ್ನು ನ್ಯಾಯಾಲಯ ತಪ್ಪಿತಸ್ಥನೆಂದು ಪರಿಗಣಿಸಿ ಜೀವಾವಧಿಯಂಥ ಘನಘೋರ ಶಿಕ್ಷೆ ವಿಧಿಸಲು ಕಾರಣವೇನು? ನ್ಯಾಯಾಧೀಶ ವರ್ಮಾರವರು ತಮ್ಮ 90 ಪುಟಗಳ ತೀರ್ಪಿನಲ್ಲಿ ಒಂದು ಕಡೆ 'ಪೊಲೀಸರು ತಮ್ಮ ಸಾಕ್ಷ್ಯಗಳನ್ನು ಒದಗಿಸುವಾಗ ಅಲ್ಪಸ್ವಲ್ಪ ತಪ್ಪು ಮಾಡಿರುವುದು ನಿಜ. ಆದರೆ ಅದನ್ನು ದೊಡ್ಡದು ಮಾಡುವ ಅಗತ್ಯವಿಲ್ಲ' ಎನ್ನುತ್ತಾರೆ. ಸೇನ್‌ರ ಪರವಾಗಿ ಬಂದ ಯಾವುದೇ ಸಾಕ್ಷಿಗಳನ್ನು ಮತ್ತು ಅವರ ವಾದಗಳನ್ನು ಎಲ್ಲಿಯೂ ಪರಿಗಣಿಸಿಲ್ಲ, ಬದಲಾಗಿ, ಪೊಲೀಸರ ಹೇಳಿಕೆಗಳನ್ನು ಆರೋಪಿ ಪರ ವಕೀಲರ ಪಾಟಿ ಸವಾಲಿನ ಬೆಳಕಿನಲ್ಲಿ ಪರಾಮರ್ಶೆ ಮಾಡದೆ ಯಥಾವತ್ ಒಪ್ಪಿಕೊಂಡಿದ್ದಾರೆ. ಹೀಗೆ ಉದ್ದಕ್ಕೂ ನ್ಯಾಯಾಲಯ ಪೊಲೀಸರ ಪರವಾದ ಮತ್ತು ಡಾ. ಸೇನ್ ವಿರುದ್ಧವಾದ ಮನೋಧೋರಣೆಯನ್ನೇ ವ್ಯಕ್ತಪಡಿಸಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಸಾಲ್ವಾ ಜುಡುಂ ಎಂಬುದು ನಾಗರಿಕತೆಗೇ ಅಪಮಾನ ಮಾಡುವಂತಹ, ಪೊಲೀಸರು ಸೃಷ್ಟಿಸಿರುವ ಖಾಸಗಿ ಸೇನೆಯೆಂದು ಸಾಕ್ಷಾತ್ ಸುಪ್ರೀಂ ಕೋರ್ಟೇ ತೀರ್ಮಾನ ನೀಡಿದೆ. ಆದರೂ ಈ ಪ್ರಕರಣದಲ್ಲಿ ನ್ಯಾಯಾಧೀಶ ವರ್ಮಾರವರು ಸಾಲ್ವಾ ಜುಡುಂ ಎಂಬುದು ಆದಿವಾಸಿಗಳ ಪರವಾದ ಶಾಂತಿ ಸಂಘಟನೆ, ಅದರ ವಿರುದ್ಧ ಡಾ. ಸೇನ್ ಹೋರಾಟ ಮಾಡಿರುವುದು ತಪ್ಪು ಮತ್ತು ಇದರ ಹಿಂದೆ ಸೇನ್‌ರ ನಕ್ಸಲ್ ಪರ ನಿಲುವು ಸ್ಪಷ್ಟಗೊಳ್ಳುತ್ತದೆಂದು ಅಭಿಪ್ರಾಯ ಪಟ್ಟಿದ್ದಾರೆ. ಕೊನೆಯಲ್ಲಿ ಡಾ.ಸೇನ್ ಮಾಡಿದ ತಪ್ಪಿಗೆ ಜೀವಾವಧಿ ಶಿಕ್ಷೆ ಹೆಚ್ಚಾದರೂ ಛತ್ತೀಸ್‌ಘಡ್‌ನಲ್ಲಿ ಮಾವೋವಾದಿಗಳು ನಡೆಸುತ್ತಿರುವ ಕ್ರೌರ್ಯವನ್ನು ನೋಡಿದರೆ ಹೆಚ್ಚೇನಲ್ಲ ಎಂದು ಸಮರ್ಥಿಸಿಕೊಳ್ಳುತ್ತಾರೆ!!

ನ್ಯಾಯಾಧೀಶರ ಈ ಹೇಳಿಕೆಯೇ ಇಡೀ ತೀರ್ಪಿನ ಹಿಂದೆ ಎಂಥ ಸೈದ್ಧಾಂತಿಕ ಪೂರ್ವಗ್ರಹ ಕೆಲಸ ಮಾಡಿದೆ ಎಂಬುದನ್ನು ತೋರಿಸುತ್ತದೆ. ಸಾಕ್ಷ್ಯ ಪುರಾವೆ, ನ್ಯಾಯಸಂಹಿತೆ ಎಲ್ಲವನ್ನೂ ಈ ನ್ಯಾಯಾಧೀಶರು ತಮ್ಮ ಕಣ್ಣಿಗೆ ಕಟ್ಟಿಕೊಂಡ ಖಾಕಿ ಪಟ್ಟಿ ನಿರರ್ಥಕಗೊಳಿಸಿದೆ. ಇತ್ತೀಚೆಗೆ ಹೊರಬಿದ್ದ ಅಯೋಧ್ಯ-ಬಾಬ್ರಿ ಮಸೀದಿ ತೀರ್ಪಿನಲ್ಲೂ ಸಾಕ್ಷಿ-ಪುರಾವೆಗಳಿಗಿಂತ ಬಲಿಷ್ಠರು ಸೃಷ್ಟಿಸಿದ ಪೂರ್ವಾಗ್ರಹಗಳಿಗೆ ನ್ಯಾಯ ಬಲಿಯಾಗಿತ್ತು. ಅದಕ್ಕೂ ಹಿಂದೆ ಅಫ್ಜಲ್ ಗುರುವಿಗೆ ಸಂಸತ್ ದಾಳಿ ಪ್ರಕರಣದಲ್ಲಿ ಮರಣದಂಡನೆ ವಿಧಿಸುವಾಗಲೂ ಸುಪ್ರೀಂ ಕೋರ್ಟು ಹೇಳಿದ್ದು ಪ್ರಕರಣದಲ್ಲಿ ಆರೋಪಿಯ ಪಾಲು ಮರಣದಂಡನೆ ವಿಧಿಸುವಷ್ಟು ಗುರುತರವಲ್ಲವಾದರೂ "ಸಾರ್ವಜನಿಕರ ಸಾಮೂಹಿಕ ಆಕ್ರೋಶ"ವನ್ನು ತೃಪ್ತಗೊಳಿಸಬೇಕಿದ್ದರೆ ಈ ಮರಣದಂಡನೆ ಅನಿವಾರ್ಯ!!

ಇದು ಪ್ರಜಾಸತ್ತೆಯನ್ನು ಕಾಪಾಡಿಕೊಳ್ಳುವಲ್ಲಿ ಅಂತಿಮ ಆಸರೆಯೆಂದು ಪರಿಗಣಿಸಲಾಗಿದ್ದ ನ್ಯಾಯಾಂಗವು ನಡೆದುಕೊಳ್ಳುತ್ತಿರುವ ರೀತಿ! ಈ ಎಲ್ಲಾ ಪ್ರಕರಣಗಳಲ್ಲಿ ಹಿಂದೂತ್ವವಾದಿಗಳು ಮತ್ತು ಕಾರ್ಪೋರೇಟ್ ಬಂಡವಾಳಶಾಹಿಗಳು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಈ ದೇಶದ ಬಡವರ ವಿರುದ್ಧ, ಅವರ ಹೋರಾಟಗಳ ವಿರುದ್ಧ, ಸಾರಾಂಶದಲ್ಲಿ ನಿಜವಾದ ಪ್ರಜಾಸತ್ತೆ ಮತ್ತು ನ್ಯಾಯದ ವಿರುದ್ಧ ಹುಟ್ಟುಹಾಕಿದ ಪ್ರಚಾರಗಳಿಗೆ ಮತ್ತು ಪೂರ್ವಗ್ರಹಗಳಿಗೆ ನ್ಯಾಯಾಲಯ ಬಲಿಯಾಗಿದೆ.

ಡಾ. ಬಿನಾಯಕ್ ಸೇನ್ ಅವರಿಗೆ ನೀಡಿದ ಜೀವಾವಧಿ ಶಿಕ್ಷೆ ಸಾರಾಂಶದಲ್ಲಿ ಪ್ರಜಾತಂತ್ರಕ್ಕೆ ನೀಡಿರುವ ಮರಣದಂಡನೆಯೂ ಆಗಿದೆ. ಆದ್ದರಿಂದಲೇ ಪ್ರಜಾತಂತ್ರದ ಉಳಿವಿಗಾಗಿ ಹೋರಾಡಬೇಕೆಂದಿರುವ ಪ್ರತಿಯೊಬ್ಬರೂ ಡಾ. ಬಿನಾಯಕ್ ಸೇನ್ ಅವರಿಗೆ ನೀಡಿರುವ ಶಿಕ್ಷೆ●

ಜಿಲ್ಲಾ ಪಂಚಾತಿ ಸಿಸ್ಟಮ್ಮು ಟೋಟಲಿ ಕ್ವಲ್ಯಾಪ್ಸಾಗಿದೆ ದ್ವಡಪ್ಪ!

...ಂದು ರವುಂಡ್ ಕ್ಯಾನ್‌ವಾಸ್ ಮುಗಿಸಿಕೊಂಡು ... ಜುಮ್ಮಿ ಸುಸ್ತಾದವಳಂತೆ,

...ಅಸ್ ನಮ್ಮಪ್ಪ ಹೋಗತ್ತಗೆ. ಸಾಕಾಗೋಯ್ತು ...ಮಾವ" ಎಂದಳು.

...ಯಾವ್ಯಾವೂರಿಗೋಗಿ ಬಂದ್ಯ?" ಎಂದ ...ಮಾವ.

...ಸಂತೆನಳ್ಳಿ, ಮಾಗಳ್ಳಿ, ಚಟ್ನೆನಳ್ಳಿ, ಹಡೆನಳ್ಳಿ ಇಲ್ಕಲ್ಲ ...ಬಂದೆ."

...ಅಲ್ಕಲ್ಲ ಯಂಗದೇ?"

ಯ ಲು ಸೀ ಮೆ
ಕಷ್ಟಪುರಾಣ
▸▸ಬಿ. ಚಂದ್ರೇಗೌಡ

...ಏನೂ ಹೇಳಕ್ಕೆ ಬರದಿಲ್ಲ ಕಣಮಾವ. ಓಟು ... ನಾಚಿಗಾಯ್ತದೆ."

...ಅದ್ಯಾಕ್ ನಾಚಿಗಾದತ್ಲೆ? ನೀನೇನು ಕಳ್ಳತನ ...ಇದ್ದಿಯಾ?"

...ಓಟು ಕೊಡೋರಿಗೆ ಅಂಗೆ ಕಾಣ್ತಿವಿ ಕಣಮಾವ. ...ದೆ ಕಳ್ಳತನಕೆ ದಾರಿ ಮಾಡಿಕಳಕ್ಕೆ ಬಂದಿರೋರಂಗೆ ...ಸ್ತೊ" ಎಂದಳು ಜುಮ್ಮಿ.

...ಅದ್ಯಾಕಂಗಾಗ್ಯದೆ ಗೊತ್ತೆ ಮಾವ. ಈ ಹಿಂದಿನ ...ಕ್ಷನ್ನಲಿ ಇಂಗೆ ತಿರುಗಿದ್ವೊ. ಆಗ ಗೆದ್ದ ಮುಂಡೆ ... ಏನು ಮಾಡಿದ ಅಂದ್ರೇ, ನಾವು ಹೋಗಿ ... ಕೇಳಿದೂರಿಗೆ ಏನೂ ಮಾಡಿಲ್ಲ. ಆದ್ರುವೆ ರಸ್ತೆ ...ದ್ದಿನಿ ಅಂತ ಬಿಲ್ ತಗಂಡವುನೆ. ಕ್ಯರೆ ಹೂಳು ... ಅಂತ ಬಿಲ್ ತಗಂಡವುನೆ. ಏನಿಲ್ಲ ಅಂದ್ರೂ ... ಕಣ್ಣಿಗೆ ಕಾಣಂಗೆ ಐವತ್ತು ಲಕ್ಷ ರೂಪಾಯಿ ...ಡು, ಕಾರ್ ತಕಂಡು, ಜುಮ್ಮಂತ ತಿರುಗಾಡ್ತ ... ಅಂಥೋನ್ನ ಗೆಲ್ಸಿಸಿ ತಿರಗ ಓಟು ಕೊಡಿ ... ಹೋದ್ರೆ ಜನ ನಮಿಗೆ ಕೇರ್ ಮಾಡ್ತರೆ?" ... ಉಗ್ರಿ.

...ಅಂಗರೆ ಜಿಲ್ಲಾ ಪಂಚಾಯ್ತಿ ಮೆಂಬ್ರು ಆಟೊಂತರ ... ವಡದ್ನೆ."

...ಊ ಕಣ ಮಾವ. ಆಡಗಲೇ ಹ್ವಡದ, ಗ್ರಾಂಡಾಗಿ ... ಮದುವೆ ಮಾಡಿದ, ಬೇಕಾದಂಗೆ ಆಸ್ತಿ ಮಾಡಿದ, ... ಯಾರು ಗೆದ್ರೇನು ಯಾರು ಸೋತ್ರೇನು ಅಂತ ... ವಳಗಡೆ ಕುತಗಂಡು, ಬ್ರಾಂದಿ ಕುಡಕಂಡು, ...ಮಿಕಾಳ ಬಾಯಿಗ್ಯಸಗತ್ತ ಅವುನೆ" ಎಂದು ಉಗ್ರಿ ... ಕೂಡಲೆ ತೂಗುತ್ತಿದ್ದ ತಲೆಯನ್ನು ಹಠಾತ್ತನೆ ... ವಾಟಿಸ್ಸೆ, ತೂಗಿದ ಮಾತಿನಲ್ಲಿ

...ಜಿಲ್ಲಾ ಪಂಚಾಯ್ತಿ ವ್ಯವಸ್ಥೆ ಟೋಟಲ್ಲಿ ...ಪ್ಸಾಗ್ಯದೆ ದ್ವಡಪ್ಪ" ಎಂದ.

...ಮತ್ತೆ ಅಂತ ಯವಸ್ಥೆ ಯಾಕ್ ತಂದ ನಜೀರ್ ..."

...ಅವುನ ತಂದಿದ್ದು ಅವುನ ಪುಸ್ತಗದಲ್ಲೇ ...ಂಡದೆ. ಅದೇ ಬ್ಯಾರೆ, ವ್ಯವಸ್ಥೆಯೇ ಬ್ಯಾರೆ ಆಗ್ಯದೆ ... ಪ್ರತಿಯೊಬ್ಬ ಜಿಲ್ಲಾ ಪಂಚಾಯ್ತಿ ಮೆಂಬ್ರೂ ... ಕಾಂಟ್ರಾಕ್ಟ್ ಮಾಡುಸ್ತ ಅವುನೆ. ಪ್ರೊಫೆಸರ್ ...ಂಡಸ್ವಾಮಿ ಬೆಳೆಸಿರೊ ಲೀಡ್ರುಗಳು ಜಿಲ್ಲಾ ಪಂಚಾಯ್ತಿ ಮೆಂಬ್ರಾಗಿ ಯಂತ ಕ್ಯಲಸ ಮಾಡ್ತವುರೆ ಗೊತ್ತೆ?"

"ಏನು ಮಾಡಿದ್ದರೂ?"

"ಆಗದೆಯಿರೊ ಕ್ಯಲಸಕೆ ಬಿಲ್ಲು ಮಾಡಿಕಂಡವುರೆ. ಆದ ದಕ್ಕಿಸಿಗಳಕ್ಕೆ ಹೋಗಿ ಬಿಜೆಪಿ ಸೇರಿಕಂಡವುರೆ. ಇದಕೇನೇಳ್ತಿ?"

"ನೋಡಂ ಮತ್ತೆ, ಇನ್ಸ್ಯಂಥಾ ಕಳ್ಳನಿಗುಟ್ಟಿದೋರವುರು."

"ಇವುರು ಕಳ್ರಿಗೇನು ಹುಟ್ಟಿಲ್ಲ ದ್ವಡಪ್ಪ. ಇವುರೆ ಕಳ್ರಾಗ್ಯವುರೆ. ಅದ್ಕೆ ಈ ಜಿಲ್ಲಾ ಪಂಚಾಯ್ತಿ ಯಲಕ್ಷನಿಗೆ ಎಮ್ಮೆಲ್ಲೆ ಯಲಕ್ಷನ್ ಖದರ್ ಬಂದದೆ. ಆದ್ರಿಂದ ಇಟೀಸ್ ಟೋಟಲ್ಲಿ ಕ್ವಲಾಪ್ಸ. ಇಂತ ಸಿಸ್ಟಂಗೆ ಓಟು ಕೇಳಕ್ಕೆ ನನಿಗೇ ನಾಚಿಕೆ ಆಗ್ತದೆ. ಅದ್ಕೆ ನಾನು ಮನಿಂದ ಎಲ್ಲೂ ಹೋಗಿಲ್ಲ. ಜುಮ್ಮಕ್ಕನಿಗೂ ಹೋಗಬ್ಯಾಡ ಅಂತ ಹೇಳಿದ್ದಿನಿ ದ್ವಡಪ್ಪ."

"ಅಂಗಂದ್ರಾದತ್ಲ? ನೀರಿಗೆ ಬಿದ್ದ ಮ್ಯಾಲೆ ಈಜಲೇ ಬೇಕಪ್ಪ."

"ಈಜಬೇಕಾದ್ರೆ ಯನರ್ಜಿ ಬೇಕು ದ್ವಡಪ್ಪ. ನಾವು ಬರಿಕ್ಯೆಲಿ ಓಟು ಕೇಳಕ್ಕೆ ಆಗದಿಲ್ಲ. ಈ ಯಲಕ್ಷನ್ನಲ್ಲಿ ಪ್ರತಿ ಕಾರ್ಯಕರ್ತನೂ ಕ್ಯಾನುವಾಸು ಮುಗಿಸಿಕೊಂಡು ಬಂದು ಯಣ್ಣೆ ವಡದು ಮನಿಕತ್ತನೆ. ಅದೇ ಓಟು ಮಾಡೋನು ಸುಮ್ಮನೆ ಮನಿಕಳಕ್ಕಾಯ್ತದ, ನೀನೆ ಹೇಳು?"

"ಅಂಗರವುನೂ ಕುಡಿಬೇಕು ಅನ್ನು."

"ಊ ಮತ್ತೆ, ವ್ಯವಸ್ಥೆ ಹಂಡ್ರೆಡ್ ಪರಸೆಂಟ್ ಕಟ್ಟಿರೋದ್ರಿಂದ ಕ್ಯಾನುವಾಸ್ ಮಾಡೊರು, ಓಟು ಮಾಡೋರು, ಕ್ಯಾಂಡಿಡೇಟ್ ಯಲ್ರು ಕುಡಿಯದು ಧರ್ಮ."

"ಬಾಲ ಕಳಕಂಡ ನರಿ ನರಿಕುಲಕೆ ಬುದ್ಧಿಹೇಳಿತ್ತಂತೆ, ಅಂಗಾಯ್ತು ನಿನ್ನ ಕತೆ."

"ದ್ವಡಪ್ಪ, ನಾನು ಹಾಸ್ಯ ಮಾಡ್ತಾಯಿಲ್ಲ. ಸ್ವಲುಪ ನೀನೆ ಯೋಚನೆ ಮಾಡು. ಕ್ಯಾನುವಸು ಮಾಡೋರು ಕುಡಿಯದೆ ಆದ್ರೆ, ಓಟು ಮಾಡೋರು ಕುಡಿಬೇಕು ಅಂತರೆ."

"ಯಲ್ಲ ಅಂಗನ್ನಕೋದರ್ಲ. ಈಗ ನನಿಗೆ ಕುಡುಸ್ಲಿ ನೋಡನ."

"ಒಂದೂರಿಗೆ ನಿನ್ನಂಥೋರು ಹತ್ತು ಜನ ಸಿಗಬವುದು ಅಷ್ಟೆಯ. ಇನ್ನಲ್ಲ ಜನಗಳು ನಾವು ಹೋದ ಕೂಡ್ಲೆ ಜೇಬು ನೋಡ್ತರೆ ದ್ವಡಪ್ಪ. ಆಗ ನನಿಗೇ ಒಂಥರಾ ಆಯ್ತದೆ."

"ಕೇಳಿದೋರಿಗ್ಯಲ್ಲ ಕೊಟ್ಟ ಕೈಯಿ ನೋಡು ನಿಂದು, ಬೇಜಾರಾಗಬೇಕಾದ್ದೆ ಬುಡು" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ನಾನು ಕೈಯಿಂದ ಕ್ಯಾಶ್ ಕೊಡದೇಯಿರಬವುದು. ಆದ್ರೆ ಡ್ರಿಂಕ್ಸ್ ಕೊಟ್ಟಿದ್ದಿನಿ. ಅದೇನು ಬಿಟ್ಟಿ ಬಂದತೇ? ಅದುಕೂ ದುಡ್ಡು ಕೊಡಬೇಕು ಗೊತ್ತಾ."

"ದುಡ್ಡು ಕೊಡಬೇಕು ಸರಿ. ನಿನ್ನ ಕೈಯಿಂದ ಕೊಟ್ಟಿಲ್ಲವಲ್ಲ ಹೇಳು."

"ಇದೇನೊ ಉಗ್ರಿ ಹಿಂಗಂತೀ. ವಾಟೆಸೇಮ್. ನಮಿಗೆ ಕ್ಯಾಂಡಿಡೇಟ್ ಕಾಸು ಕೊಟ್ಟಿರತನೆ ನಿಜ. ಅದವುನಿಗೆಲ್ಲಿಂದ ಬಂತು? ಅವುನೇನು ಕೂಲಿ ಮಾಡಿದ್ದನೊ, ಕ್ವಟ್ನ ಕುಟ್ಟಿ ಸಂಪಾದ್ನೆ ಮಾಡಿದ್ದನೊ ಹೇಳು. ಅವುನ ದುಡ್ಡೂ ಕೂಡ ಸಾರ್ವಜನಿಕರ ದುಡ್ಡು. ಅಂದ್ರೆ ನಮ್ಮ ದುಡ್ಡು. ನಾನೊಂದು ಸಿಗರೇಟ್ ಸೇದಿದ್ರೆ ಒಂದ್ರುಪಾಯಿ ಟ್ಯಾಕ್ಸು ಸರ್ಕಾರದ ಖಜಾನೆವಳಿಕೆ ಹೋಗಿ ಠಣಾರಂತ ಬೀಳ್ತದೆ. ಅದೇ ತರ ನನ್ನ ಇಡೀ ಜೀವನದ ತೆರಿಗೆ ಹಣದಿಂದ ಸರಕಾರ ನ್ಯಡಿತದೆ ಗೊತ್ತೆ?"

"ಆ ಪುಲಾರ ಇರ್ಲಿ, ನಡಿಲ ಕ್ಯಾನುವಾಸ್ ಮಾಡನ."

"ನೀನು ಬೇಕಾದ್ರೆ ಹೋಗಕ್ಕ. ನಾನೊಂದಿಷ್ಟು ರೆಸ್ಟು ತಗೊತ್ತಿನಿ. ಯಾಕಂದ್ರೆ ಏನೊ ಒಂಥರಾ ಫೀಲಾಗ್ಯದೆ."

"ಅದ್ಯಂತ ಫೀಲಾಗಿದ್ದತ್ಲ ನಿಂಗೆ? ಯಾವಾಗ್ಲು ಹುಯ್ಕಂಡು ನಿನ್ನತ್ರಕೆ ಬಂದ್ರೆ ಕ್ವಳತೋಗಿರೊ ಬಾರೆಹಣ್ಣು ಮೂಸಿದಂಗಾಯ್ತದೆ."

"ಅದ್ಯಾಕಂತ ವಾಸನೆ ಬತ್ತದೆ ಗೊತ್ತೇನೆ? ಇವು ಕುಡುದುಬುಟ್ಟು ಅದ್ಯಂತದೊ ಪೀಸು ಪರಾಗನೂ ಹಾಯ್ಕತ್ತವೆ, ಅದ್ಕೆ ಅಂತ ವಾಸನೆ."



"ನಾನೇನೊ ದೀಪಾಗಿ ಯೋಚನೆ ಮಾಡ್ತಾಯಿರ ಬೇಕಾದ್ರೆ ನೀವು ಡ್ರಿಂಕ್ ಮಾಡಿದೋರ ಸ್ಟೈಲ್ ಬಗ್ಗೆ ಮಾತಾಡ್ತಿರೇನೊ. ಸೈಲೆನ್ಸ್ ಪ್ಲೀಸ್."

"ಹೇಳಪ್ಪ ಅದೇನು?"

"ನಾನಾಗ್ಲೆ ಏನೇಳಿದನಪ್ಪಾ ಅಂದ್ರೇ, ಈ ಜಿಲ್ಲಾ ಪಂಚಾಯ್ತಿ ಸಿಸ್ಟಮ್ಮು ಕ್ವಲಾಪ್ಸಾಗ್ಯದೆ. ಪ್ರತಿ ಹೋಬಳಿನೂ ಒಬ್ಬ ಹೊಸ ಕಂಟ್ರಾಕ್ಟರ್ ತಯಾರು ಮಾಡ್ತೇವರಕು ಇನ್ನೇನು ಮಾಡಿಲ್ಲ. ಇವುರು ಚುನಾವಣೆಗೆ ಆಗೊ ಖರ್ಚು ನ್ಯನಿಸಿಗಂಡ್ರೆ ಭಯ ಆಯ್ತದೆ. ಒಂದೋಬಳಿಗೆ ಎಷ್ಟು ಬೂತು ಬರ್ತವೆ, ಅವುಕ್ಯಲ್ಲ ಸಿಬ್ಬಂದಿ, ಆ ಸಿಬ್ಬಂದಿಗೆ ಸಂಬಳ, ಪೊಲೀಸ್‌ನೋರಿಗೆ ಸಂಬಳ, ಚುನಾವಣೆ ಸಾಮಗ್ರಿ ಖರ್ಚು, ಅಂದ್ರೆ ಗುಂಡುಪಿನ್ನಿಂದ ಹಿಡದು ಇಂಕ್ ಪ್ಯಾಡಗಂಟ ವಸದಾಗೇ ಪರ್‌ಚೇಸ್ ಮಾಡಿ, ಒಂಟು ಡಬಲ್ ಬಿಲ್ಲಾಕಿರತರೆ. ಅದನ್ಯಲ್ಲ ಲ್ಯಕ್ಕ ಹಾಕಿ ಟೋಟ್ಲು ಮಾಡಿದ್ರೆ, ಒಂದು ಹೋಬಳಿಗೇ ಲಕ್ಷಾಂತರುಪಾಯಿ ಖರ್ಚಾಗಿರತದೆ. ಇಷ್ಟ್ಯಲ್ಲ ಖರ್ಚಿನಿಂದ ನಾವು ಪಡಿಯೋ ರಿಜಲ್ಟೇನಪ್ಪ ಅಂದ್ರೆ, ಒಬ್ಬ ಶತಮೂರ್ಖ, ಕಳ್ಳ, ಭ್ರಷ್ಟ ಯಂಥೋನೊ ವಬ್ಬ ರ್‍ಯಾಸ್ಕಲ್‌ನ ಆರುಸ್ತಿವಿ. ಅವುನು ಬಂದು ಏನು ಮಾಡ್ತನಪ್ಪ ಅಂದ್ರೇ, ಆಗದೆಯಿರೊ ಸೇತುವೆ, ರಸ್ತೆಗೆ ಬಿಲ್ಲು ಮಾಡಿಕತ್ತನೆ. ಸೈಕಲ್ ಬಿಸಾಕಿ ಕಾರು ತಗತ್ತನೆ. ದೊಡ್ಡದೊಡ್ಡ ಯೋಜನೆ ತಂದು ಬಿಲ್ಲು ಮಾಡಿಕಂಡು, ಮಜ ಮಾಡ್ತನೇ. ಇದೇನು ಸುಳ್ಳಲ್ಲ, ಈ ಹಿಂದೆ ನಾವು ಆರಿಸಿ ಕಳಿಸಿದ್ದ ಕಳ್ಳನ್ನ ನೋಡೇ ಹೇಳ್ತಯಿದ್ದಿನಿ. ಆದ್ರಿಂದ ಈ ಜಿಲ್ಲಾ ಪಂಚಾತಿ ಮೀಟಿಂಗ್ ನೋಡಿದ್ರೆ, ಕಂಟ್ರಾಕ್ಟರ್ ಮೀಟಿಂಗ್ ನೋಡಿದಂಗಾಯ್ತದೆ. ಅದ್ಕೆ ನನಿಗೆ ಕ್ವಲಾಪ್ಸಾಗಿರೊ ಸಿಸ್ಟಂಮ್ಮಿಗೆ ಓಟು ಕೇಳಕ್ಕೆ ನಾಚಿಗಾಯ್ತದೆ. ನೀನೆ ಹೋಗಿ ಬಾರಕ್ಕ."

"ನಾವು ನಿಲ್ಲಿಸಿರೊ ಕ್ಯಾಂಡೇಟು ಅಂಥೋಳಲ್ಲ ಕಂಡ್ಯ. ಬಾರಿ ಓದಿಕಂಡವುಳಂತೆ. ಇಸುಗೂಲು ಯದ್ದ ಮೇಡಂಮ್ಮಾಗದು ಬುಟ್ಟು ಯಲಕ್ಷನ್ನಿಗೆ ಬಂದವುಳೆ. ವಳ್ಳೆ ಕ್ಯಲಸ ಮಾಡಸನ ಬಾರ್ಲ."

"ನಾನು ನಮ್ಮ ಕ್ಯಾಂಡೇಟ್ ಬಗ್ಗೆ ಹೇಳ್ಳಿಲ್ಲ ಕಣಕ್ಕ. ಟೋಟಲ್ಲಿ ಜಿಲ್ಲಾ ಪಂಚಾತಿ ಸಿಸ್ಟಂ ಬಗ್ಗೆ ಹೇಳಿದೆ. ನಿಮ್ಮ ಕ್ಯಾಂಡೇಟ್ ಸಮಸ್ಯೆ ಏನಂದ್ರೇ ಬರೀಕ್ಯೆಲಿ ಓಟು ಕೇಳಿಕಂಡು ಕೈ ಮುಗೀತಾ ಹೋದ್ರೆ ಆಗದಿಲ್ಲ. ರಾತ್ರಿವೊತ್ತು ಒಂದಿಷ್ಟು ಅಂಡರ್ ಗ್ರೌಂಡ್ ವರಕನೂ ಮಾಡಬೇಕು ಕಣಕ್ಕ."

"ಯಲ್ಲಾ ಹಾಳಾಗೋಯ್ತು. ಮುಂದಕೆ ಇಂತ ಕ್ಯಾಂಡೇಟ್ ನಿಲ್ಲಿಸಿ, ಹಿಂಗೆ ಯಲಕ್ಷನ್ ಮಾಡಬೇಕು ಅಂತಿದ್ದೆ."

"ಅಂತಿದ್ದೆ ಸರಿ ಕಣಕ್ಕ. ಒಂದು ಸ್ವಲುಪ ನಾನು ಕೈ ಸಡ್ಲ ಮಾಡಿ ಕೆಲುವುರನ್ನಾದ್ರು ನೋಡಿಕಬೇಕಾಯ್ತದೆ. ನೋಡು, ಸೀರ ಚಿಗಪ್ಪನ್ನ ನಾವು ಸರಿಯಾಗಿ ನೋಡಿಕೊಳ್ಳಲಿಲ್ಲ. ಅವುನಾಗ್ಲೆ ದಳದಲ್ಲಿ ಕಾಣಿಸಿಗತ್ತಾ ಅವುನೆ. ಅದ್ಕೆ ನಾನು ಐಡೆಂಟಟಿ ಮಾಡೋ ಕಾರ್ಯಕರ್ತರಿಗಾರ ಒಂದಿಷ್ಟು ಸಪ್ಲೆ ಮಾಡಬೇಕು. ಇಲ್ಲ ಅಂದ್ರೆ ಸಪ್ಪೆ ಎಲಕ್ಷನ್ನಾಯ್ತದೆ ಕಣಕ್ಕ, ಸಪ್ಪೆ ಯಲಕ್ಷನ್ನಾಯ್ತದೆ."

"ಹೋಗ್ಲಿ ನಾನು ಕುಡುಸ್ತಿನಿ ನಡಿ."

"ಕ್ಯಾಂಡೇಟ್ ಕೊಟ್ಟ ದುಡ್ಡು ಮಡಿಕಂಡು ಏನಾಟ ಆದ್ತಿಯಕ್ಕ!" ●

ಇಬ್ಬರ ವಿದೇಶಿ ಅನುಭವ



"ಇಲ್ಲಿ ಹತ್ತಾರು ವರ್ಷ ಕೆಲಸ ಮಾಡಿದರೂ ಹತ್ತು ಸಾವಿರ ರೂಪಾಯಿ ಕೂಡಿಡೋದಕ್ಕೆ ಆಗೋಲ್ಲ! ಸೌದಿ ಅರೇಬಿಯಾದಲ್ಲಿ ಡಾಕ್ಟರಾದ್ರೆ ತಿಂಗಳಿಗೆ ಇಪ್ಪತ್ತೇಳು ಸಾವಿರದಷ್ಟು ಸಂಬಳ. ಎರಡು ವರ್ಷ ಅಲ್ಲಿದ್ದರೆ ಎಲ್ಲ ಸಮಸ್ಯೆ ಬಗೆಹರಿಯುತ್ತೆ" ಅಂತ ರಹೀಮ್ ಸೌದಿ ಅರೇಬಿಯಾದ ಜಾಹೀರಾತು ನೋಡಿ ಕೆಲಸಕ್ಕೆ ಅರ್ಜಿ ಹಾಕಿ ಕೆಲಸ ಗಿಟ್ಟಿಸಿಕೊಂಡ. ಬೆಂಗಳೂರಿನಿಂದ ರಿಯಾದ್‌ಗೆ ಹೋದ. ಕೆಂಡದ ಮಳೆಯಂಥ ಬಿಸಿಲು, ಸೆಖೆ, ಹತ್ತು ದಿನ ಕುಡಿಯುವ ನೀರಿಗೆ ಇಪ್ಪತ್ತು ರೂಪಾಯಿ. ಸ್ನಾನದ ನೀರು ಉಚಿತ. ಅಲ್ಲಲ್ಲಿ ಮಾತ್ರ ಬೇವಿನ ಮರಗಳು, ಬಟ್ಟಂಬಯಲು. "ಇಲ್ಲಿ ಜನ ಲಕ್ಷಾಂತರ ವರ್ಷದಿಂದ ಹೇಗೆ ಜೀವಿಸಿರಬಹುದು?" ಎಂದು ಕೇಳಿಕೊಂಡ. ತಾನು ಕೆಲಸ ಹಿಡಿದಿದ್ದ ಆಸ್ಪತ್ರೆಗೆ ಹೋದ. ಎಲ್ಲ ಹವಾನಿಯಂತ್ರಿತ. ಎರಡು ವರ್ಷವೇನು, ಹತ್ತು ವರ್ಷ ಕೂಡ ಇಲ್ಲಿ ಇರಬಹುದು ಎಂದು ಆಸೆಯ ಮನಸ್ಸು ಹೇಳತೊಡಗಿತು. ಆದರೆ ಆವತ್ತೇ ಕಾಯಿಲೆ ಶುರುವಾಯಿತು. ಹವಾನಿಯಂತ್ರಣದಿಂದ ಉಬ್ಬಸ, ಹೊರಗೆ ಬಂದರೆ ಸೆಖೆ. ಒಂದೇ ವಾರದಲ್ಲಿ ಡ್ರಿಪ್ ಕೊಟ್ಟು ಮಲಗಿಸುವಂಥ ಕಾಯಿಲೆ. ಆತನು ಭಾರತಕ್ಕೆ ಹಿಂದಿರುಗಬೇಕಾಯಿತು. 'ನಮ್ಮ ದೇಶವೇ ಚೆನ್ನ' ಅಂದುಕೊಂಡ.

ಇನ್ನೊಬ್ಬ ಡಾ. ರಹೀಮ್‌ಗಿಂತ ಬಡವ. ಡ್ರೈವರ್ ಬಶೀರ್. ಈತನಿಗೆ ಯಾರೋ ಸೌದಿ ಅರೇಬಿಯಾದ ಜಾಹೀರಾತು ತೋರಿದರು. ಡ್ರೈವರ್ ಕೆಲಸ ಸಿಕ್ಕಿತು. ಒಟ್ಟು ತಿಂಗಳಿಗೆ ಹತ್ತು ಸಾವಿರ ಸಂಬಳ. ಹೆಂಡತಿ ಮತ್ತು ನಾಲ್ಕು ಜನ ಮಕ್ಕಳು ಇರಲು ವ್ಯವಸ್ಥೆ ಮಾಡಿ ರಿಯಾದ್‌ಗೆ ಹೊರಟ. ಅಲ್ಲಿ ಜೀವಿಸಲು ಎಷ್ಟು ಬೇಕೋ ಅಷ್ಟು ಹಣ ಮಾತ್ರ ಇಟ್ಟುಕೊಂಡು ಬಾಕಿಯದನ್ನು ಹೆಂಡತಿಗೆ ಕಳಿಸುತ್ತಿದ್ದ. ಆಕೆ ಆ ಹಣವನ್ನು ಪರಿಚಿತರ ಕೈಯಲ್ಲಿ ಕೊಡುತ್ತಿದ್ದಳು.

ಮೂರು ವರ್ಷ ಇದ್ದು ಸುಸ್ತಾಗಿ ಬಶೀರ್ ಸ್ವದೇಶಕ್ಕೆ, ಬೆಂಗಳೂರಿಗೆ ಬಂದು ಪರಿಚಿತರನ್ನು ಹಣ ಹಿಂದಿರುಗಿಸಲು ಕೇಳಿದರೆ, 'ನಮಗೆ ಆಕೆ ಹಣ ಕೊಟ್ಟೇ ಇಲ್ಲ' ಅಂತ ಹೇಳಿದರು.

ನಮ್ಮ ದೇಶ ಎಷ್ಟು ಚೆನ್ನ!

—ಆಗಸ್ಟ್ 17, 1994




ಶೆಟ್ಟರ ತಿರುಪತಿ ಲಾಡು



ಎಚ್.ಎಲ್. ಕೇಶವಮೂರ್ತಿ

ಅಣಕ



ರಷ್ಟುದ ದಿನಗಳಲ್ಲೇ ಚುನಾವಣೆ ಎಂಬ ಅನಿವಾರ್ಯ ಅನಿಷ್ಟ ಬಂದು ಭಕ್ತರಿಗೆ ಕೊಡಬಾರದ ಕಾಟ ಕೊಡುತ್ತದೆ. ಹೊಸ ವರ್ಷದ ಆಚರಣೇನ ಎಲ್ಲಿ? ಹೇಗೆ ಅದ್ದೂರಿಯಿಂದ ಆಚರಿಸಬೇಕು ಅನ್ನೋ ಯೋಜನೆಯನ್ನ ಕೆಲವರು ವರ್ಷದ ಮೊದಲೇ ಚರ್ಚಿಸಿ ತೀರ್ಮಾನಿಸಿರುತ್ತಾರೆ. ಈಗ ನೋಡಿದರೆ ಡಿಸೆಂಬರ್ 31 ಕ್ಕೆ ಹಾಳಾದ ಚುನಾವಣೆ ಬಂದು ಕುಂತದೆ. ಚುನಾವಣೆಗೂ ಹೊಸ ವರ್ಷದ ಆಚರಣೆಗೂ ಬಾದರಾಯನ ಸಂಬಂಧವೂ ಇಲ್ಲ. ಅದರ ಪಾಡಿಗೆ ಅದು, ಇದರ ಪಾಡಿಗೆ ಇದು ಅನ್ನುವಂತಿಲ್ಲ. ಭರ್ಜರಿಯಾಗಿ ಹೊಸ ವರ್ಷ ಆಚರಿಸಿದೆವು ಅಂದ್ರೆ ಸಖತ್ತಾಗಿ ಕುಡ್ದು ತಿಂದು ಮಜಾ ಉಡಾಯಿಸಿದೊ ಎಂದೇ ಅರ್ಥ ತಾನೆ. ಅವತ್ತು ಮದ್ಯಪಾನ ನಿಷೇಧ ಅಂತೆ! ಅದೇ ಇಲ್ಲದ ಮೇಲೆ ಹೊಸ ವರ್ಷ ಆಚರಿಸುವುದಾದರೂ ಹೆಂಗೆ ಅನ್ನೋದು ಹಲವರ ಚಿಂತೆ. ಆರಂಭದ ಮೊದಲ ದಿನವೇ ಹಿಂಗಾದ್ರೆ ಇನ್ನು ವರ್ಷ ಪೂರ್ತಾ ಇನ್ನೇನು ಅನಿಷ್ಟಗಳು ಕಾದಿರುತ್ತವೋ ಎನ್ನುವುದು ಅವರ ಸಂಕಟ. ಹಂಗಾದ್ರೆ ಅವತ್ತು ಯಾರೂ ಕುಡಿಯೋದೆ ಇಲ್ವ ಅಂದ್ರೆ ಕುಡೀತಾರೆ, ಅವತ್ತು ಹೆಚ್ಚಗೇನೆ ಪರಮಾತ್ಮನ ಸೇವನೆ ಆಗಿರುತ್ತೆ. ಇದರಲ್ಲಿ ಯಾರ ಅಪರಾಧನೂ ಇಲ್ಲ. ಪರಮಾತ್ಮನ ಸೇವೆ ಮಾಡದೆ ಇದ್ದರೆ ನಿದ್ರಾದೇವಿ ಮತದಾರ ಬಂಧುವಿನ ಸಮೀಪವೂ ಸುಳಿಯುವುದಿಲ್ಲ ಎಂಬ ಕಟುಸತ್ಯವನ್ನು ಅರಿತ ಅಭ್ಯರ್ಥಿಗಳು ಧಾರಾಳವಾಗಿ ಮದ್ಯ ಸರಬರಾಜು ಮಾಡುವ ಮುಖಾಂತರ ಅವರ ಕಷ್ಟವನ್ನು ಪರಿಹರಿಸುತ್ತಾರೆ. ಪ್ರಜ್ಞಾವಂತ ಮತದಾರ ಮಹಾಪ್ರಭುವೂ ಈ ಸೇವಾನಿಷ್ಠೆಗೆ ಸಂಪೂರ್ಣ ನ್ಯಾಯ ಒದಗಿಸುತ್ತಾನೆ! ಮದ್ಯಪಾನ ನಿಷೇಧ ಅಂತ ಕಾನೂನು ಇರುತ್ತದಲ್ಲ ಅಂದ್ರೆ ಅದರ ಪಾಡಿಗೆ ಅದು ಇರುತ್ತದೆ. ಎಲ್ಲರೂ ಕುಡಿಯೋ ಹಾಗೇನೆ ಹೊಸ ವರ್ಷ ಆಚರಣೆದಾರರೂ ತಾಯಿಯ ಸೇವನೆಮಾಡುತ್ತಾ ಅಮಲಿನ ಸುಖದಲ್ಲಿ ತೇಲಬಹುದಲ್ಲಾ ಅಂದ್ರೆ 'ನೈತಿಕ ಪೊಲೀಸು' ಇದ್ನೇ ಕಾಯುತ್ತಾ ಕುಂತಿರ್ತವೆ. 'ಬೇಕಾದ್ರೆ ಚುನಾವಣೆ ಹೆಂಡ ಕುಡೀರಿ, ವರ್ಷಾಚರಣೆ ಹೆಂಡ ಕುಡಿದರೆ ಹುಷಾರ್' ಅಂತ ಕೂಗಾಡ್ತವೆ.

'ಏನ್ ಸ್ವಾಮಿ ಇಂತ ಇಕ್ಕಟ್ಟಿಗೆ ಸಿಕ್ಸಿ ಬಿಟ್ರಿ ನಮ್ನ. ಹೊಸ ವರ್ಷ ಆಚರಿಸೋದು ಹೆಂಗೆ ಹೇಳಿ' ಅಂತ ಯಾರೋ ಚುನಾವಣಾ ಆಯುಕ್ತರ ಮುಂದೆ ತಮ್ಮ ಗೋಳು ತೋಡಿಕೊಂಡ್ರಂತೆ. ಅದ್ಕೆ ಅವ್ರು 'ಹೊಸ ವರ್ಷ ಬರೋದು ರಾತ್ರಿ ಹನ್ನೆರಡು ಗಂಟೆಗಲ್ವೇನ್ರಿ.... ಆಮೇಲೆ ಕುಡ್ದು ಕುಪ್ಪಳಿಸಿ ಯಾರು ಬ್ಯಾಡ ಅಂದೋರು' ಅಂದ್ರಂತೆ. ಅಲ್ಲ ಹೊಸ ವರ್ಷ ಆಹ್ವಾನಿಸೋದು ಅಂದ್ರೆ ಸುಮ್ನೆ ಆಯ್ತದಾ. ಒಳಗೆ ಪರಮಾತ್ಮ ನೆಮ್ಮದಿಯಾಗಿ ಕುಂತಿದ್ರೇ ಅದ್ಕೊಂದು ಇದು. ಅದ್ಕೇ ಅವ್ರುಗ್ಗೆ ಹೇಳಿದ್ಕೆ 'ಯಾವ ಸಟ್ಗೆ.... ಹೋಗಿ ರಾತ್ರಿ ಎಂಟು ಗಂಟೆ ಮೇಲೆ ಅದೇನ್ಮಾಡ್ತೀರೋ ಮಾಡ್ಕಳಿ' ಅಂತ ಧಾರಾಳವಾಗಿ ಹೇಳಿದ್ರಂತೆ. ಕುಡುಕರ ಸಂಕಟ ಅವರಿಗೆ ಗೊತ್ತಿಲ್ಲ. ಅವರಿಗೂ ಸೂರ್ಯಂಗೂ ಆಗ ಬರೋದಿಲ್ಲ. ದಿನಾ ಅವನು ಯಾವಾಗ ಸಾಯ್ತಾನೊ ಅಂತ ಕಾಯ್ತ ಕುಂತಿರ್ತಾರೆ. ಅವನು ಮುಳುಗಿದ ಅಂದ್ರೆ ಇವರು ಬಾಟಲಿ ಮುಂದೆ ಪ್ರತ್ಯಕ್ಷ ಆಗಲೇಬೇಕು. ಡಿಸೆಂಬರ್ ತಿಂಗ್ಳಲಿ ಆ ಸೂರ್ಯ ಅನ್ನೋನು ಸಂಜೆ ಆರು ಗಂಟೆಗೆಲ್ಲ ಕಾಣ್ದಂಗಾಯ್ತನೆ. ಅಲ್ಲಿಂದ ರಾತ್ರಿ ಎಂಟು ಗಂಟೆಯವರೆಗೆ ಕಾಯ್ತಾ ಕುಂತಿರೋದು ಅಂದ್ರೆ.... ಅದೂ ಹೆಂಡ ಮುಂದಿಟ್ಟುಕೊಂಡು ಕುಂತಿರೋದು ಅಂದ್ರೆ. ಆ ಸಂಕಟ ಅನುಭವಿಸಿದೋರ್ಗೆ ಗೊತ್ತು.

ಇದು ಹೊಸ ವರ್ಷ ಆಚರಿಸುವವರ ಪಾಡಾದ್ರೆ ಇನ್ನು ವೈಕುಂಠ ಏಕಾದಶಿ ಆಚರಿಸಿದ ಕೆಲವರ ಪಾಡಂತೂ ನಾಯಿಪಾಡೇ ಸರಿ. ನಮ್ಮ ಲಾಡು ಶೆಟ್ಟರು ಪಟ್ಟ ಸಂಕಟಾನೆ ನೋಡಿ. ಯಾರು ಈ ಶೆಟ್ಟರು ಅಂದ್ರಾ... ಅದೇ ಕೃಷ್ಣಯ್ಯ ಶೆಟ್ಟರು ಕಣ್ರಿ. ಇನ್ನೂ ಗೊತ್ತಾಗಲಿಲ್ವ... ಅದೇ ಕಣ್ರಿ ಗಂಗಾಜಲ ಗೋಮೂತ್ರದ ಶೆಟ್ಟರು. ಅವ್ರು ಭಕ್ತರಿಗೆ ತಿರುಪತಿ ಲಾಡು ಹಂಚೋದ್ರಲ್ಲಿ ಬೋ ಫೇಮಸ್ಸಲ್ವಾ. ಈ ಸಲಾನೂ ಜನರಿಗೆ ತಿರುಪತಿ ಲಾಡು ಹಂಚಾನ ಅಂತ ಅದೆಷ್ಟೋ ಲಕ್ಷ ತಿರುಪತಿ ಲಾಡು ಮಾಡಿಸಿದ್ರಂತೆ. ವೈಕುಂಠ ಏಕಾದಶಿ ದಿವಸ ಕೃಷ್ಣಯ್ಯ ಶೆಟ್ಟರು ತಿರುಪತಿ ಲಾಡು ತಿನ್ನಿಸಿ ಭಕ್ತರಿಗೆ ವೈಕುಂಠದಲ್ಲಿ ಸೀಟ್ ರಿಸರ್ವ್ ಮಾಡಿ ನೇರವಾಗಿ ಲಕ್ಷುರಿ ಟ್ರಾವೆಲ್ಸ್‌ನಲ್ಲಿ ಕಳಿಸುವ ಏರ್ಪಾಡು ಮಾಡಿದ್ದರಂತೆ. ಆಗ ಬಂತು ನೋಡಿ ಈ ಹಾಳಾದ ಚುನಾವಣೆ ಶನಿ. ಭಕ್ತರಿಗೆ ತಿರುಪತಿ ಲಾಡು ಹಂಚುವುದನ್ನೂ ತಡೀತು, ನೀತಿಸಂಹಿತೆ ಉಲ್ಲಂಘನೆ ಆಗ್ತದೆ ಅಂತ! ಪಾಪ ಎಷ್ಟು ನೊಂದುಕೊಳ್ಳಬೇಡ ಲಾಡು ಶೆಟ್ಟರು.

ಅಲ್ಲ ಕಣ್ರಿ ತಿರುಪತಿ ಲಾಡು ಅಂತೀರಿ. ಕೃಷ್ಣಯ್ಯ ಶೆಟ್ಟರು ಇಲ್ಲೇ ಮಾಡ್ಸಿದ್ರು ಅಂತೀರಿ. ಎಲ್ಲಾ ಬೊಗಳೆ ಕಣ್ರೀ ನಿಂಮಾತು ಅನ್ನಬೇಡಿ. ಇಲ್ಲೇ ಮಾಡ್ಸಿದ್ರೂ ಅದು ತಿರುಪತಿ ಲಾಡುನೇ ಕಣ್ರಿ. ಹೆಂಗೆ ಅಂತೀರಾ....

ಈ ತಿರುಪತಿ ತಿಮ್ಮಪ್ಪ ಇದಾನಲ್ಲ ಬಲೇ ಸಾಲಗಾರ. ಸಾಲ ಪಡೆಯೋದೆ ತನ್ನ ಹಕ್ಕು ಅಂತಿದ್ದೋನಿಗೆ ಒಂದು ಸಲ 'ಥೂ ಈ ದರಿದ್ರದ ಸಾಲ ತೀರಿಸಬಿಡಬೇಕು' ಅನ್ನೊ ಕೆಟ್ಟ ಆಲೋಚನೆ ಬಂತಂತೆ. ಏಳುಮಲೆ ಮೇಲೆ ಕುಂತ್ರೆ ವ್ಯಾಪಾರವೇನೋ ಭೊಗದಸ್ತಾಗಿ ನಡೀತದೆ ನಿಜ. ಸಾಲ ತೀರ್ಸೋಕೆ ಇದೇನೇನೂ ಸಾಲ್ದು. ಹೇಳಿಕೇಳಿ ಇದು ಐಟಿ, ಬಿಟಿಯುಗ. ನಮ್ಮೋರೆಲ್ಲ ಹೋಗಿ ಅಮೆರಿಕದಲ್ಲಿ ಕುಂತವ್ರೆ. ಸ್ವದೇಶಕ್ಕೆ ಬಂದ್ರೂ ನನ್ನ ಕಡೆಗೆ ಕ್ಯಾರೆ ಅಂತ ತಿರುಗೂ ನೋಡಲ್ಲೊ. ಆ ಬಡ್ಡೆತ್ತವು ನಾನ್ ರೆಸಿಡೆಂಟ್ ಇಂಡಿಯನ್ಸ್ ಆದಂಗೆ ನಾನೂ ಎನ್‌ಆರ್‌ಟಿ ಅರ್ಥಾತ್ ನಾನ್ ರೆಸಿಡೆಂಟ್ ತಿರುಪತಿಯನ್ ಆಗಿಬುಟ್ರೆ ಬಲೇ ಭರ್ಜರಿ ಆಗಿರುತ್ತಲ್ವಾ ಅಂತ ಯೋಚಿಸಿದ್ನಂತೆ. ಅದ್ಕೇ ಅಲ್ಲಿ ಒಂದು ಬ್ರಾಂಚ್ ಓಪನ್ ಮಾಡಿದ. ಪರದೇಶಿಗಳಿಗೆ ತಮ್ಮ ದೇವರ ಮೇಲೆ ಭಕ್ತಿ ಅನ್ನೋದು ಉಕ್ಕುಕ್ಕಿ ಹರಿಯುತ್ತಲ್ವಾ. ಈಗಲೂ ಹಂಗೆ ಆಯಿತು. ಬ್ರಾಂಚ್ ಆಫೀಸಿನಲ್ಲೂ ಬಿಸಿನೆಸ್ಸು ಭರ್ಜರಿ ಆಗೇ ನಡೀತಿತ್ತು. ಆಮೇಲೆ ಅವನಿಗಿನ್ನೊಂದು ಆಲೋಚನೆ ಬಂತಂತೆ. ಬೆಂಗಳೂರು ಅನ್ನೋದು ಐಟಿ ಸೆಂಟರಾಗದೆ. ಪ್ರಪಂಚದ ಮೂಲೆಮೂಲೆಯಿಂದಲೂ ಜನ ಇಲ್ಲಿಗೆ ಬರ್ತಿದ್ದಾರೆ. ಬಂದೋರು ತಿರುಪತಿ ಕಡೆಗೆ ತಿರ್ಗ್ರೂ ನೋಡೊಲ್ರು. ಆಯಾ ದೇಶದಲ್ಲೇ ಬ್ರಾಂಚ್ ಓಪನ್ ಮಾಡೋದಕ್ಕಿಂತ ಬೆಂಗಳೂರಲ್ಲೇ ಒಂದು ಓಪನ್ ಮಾಡಿದ್ರೆ ಹೆಂಗೆ ಅಂತ ಮನಸ್ಸಿನಲ್ಲೇ ಮಂಡಿಗೆ ತಿಂದನಂತೆ. ಭಗವಂತ ಅಲ್ವಾ ತಿರುಪತಿ ತಿಮ್ಮಪ್ಪ. ಯೋಚನೆ ಬಂದದ್ದೇ ತಡ, ಬೆಂಗಳೂರಿನಲ್ಲೂ ಒಂದು ಬ್ರಾಂಚ್ ತೆಗೆದನಂತೆ. ಅವನು ಬೆಂಗಳೂರಲ್ಲಿರಲಿ ಇಲ್ಲ ಅಮೆರಿಕದಲ್ಲಿರಲಿ ತಿರುಪತಿ ತಿಮ್ಮಪ್ಪನೇ ಅಲ್ವ. ಹಂಗೇನೆ ತಿರುಪತೀಲಿ ಮಾಡಲಿ ಇಲ್ಲ ಕೊಳಗೇರೀಲಿ ಮಾಡಲಿ. ಅವನ ಹೆಸರಿದ್ದ ಮೇಲೆ ಮುಗೀತು. ಅದು ತಿರುಪತಿ ಲಾಡೂನೆ!

ಸರಿ ಕೃಷ್ಣಯ್ಯ ಶೆಟ್ಟರ ಲಾಡು ವಿಚಾರಕ್ಕೆ ಬರೋಣವಂತೆ. ಅವ್ರು ಹಿಂಗೆ ಲಾಡು ಮಾಡಿ ಗುಡ್ಡೆ ಹಾಕಿದ್ರಲ್ಲಾ ಅವ ಹಂಚೋಕೋದ್ರೆ 'ಬಿಲ್‌ಕುಲ್ ಆಗಕ್ಕಿಲ್ಲ' ಅಂದಿದ್ರಲ್ಲಾ. ಬೆಂಗಳೂರಿನ ತಿರುಪತಿ ತಿಮ್ಮಪ್ಪನ ದೇವಸ್ಥಾನಕ್ಕೇ ಅವ ಕೊಡಬಹುದಾಗಿತ್ತು. ಆದ್ರೆ ಅವ್ರು ಬಡ ಭಕ್ತರಿಗೆ ಅಂತ ಮಾಡಿಸಿದ್ದೋವು. ಅವ್ರುಗ್ಗೇ ಅವ ತಲುಪಿಸಬೇಕು. ಬೆಂಗಳೂರಿನ ತಿರುಪತಿ ತಿಮ್ಮಪ್ಪನ ದೇವಸ್ಥಾನಕ್ಕೆ ಯಾವ ಬಡವ ಬಂದಾನು ಅನ್ನೋ ಚಿಂತೆಯಲ್ಲಿ 'ಏನಪ್ಪ ತಿಮ್ಮಪ್ಪ ನಿನ್ನ ಲೀಲೆ. ನಿನ್ನೆಸರು ಇದ್ರೂ ಹಿಂಗೆ ತರಲೆ ತಗೀತಾವ್ರಲ್ಲ, ನೀನೇ ದಾರಿ ತೋರಿಸ್ಬೇಕು' ಅಂತ ಆ ದಯಾಮಯನಿಗೇ 'ಗೈಡ್ ಮಾಡು ತಂದೆ' ಅಂತ ಗೋಗರಿದಿರಬೇಕು. ಆ ಭಗವಂತನಿಗೂ ಇದು ಕೇಳಿಸಿರಬೇಕು. 'ಅದಕ್ಯಾಕೆ ಹಿಂಗೆ ಹ್ಯಾಪುಮೋರೆ ಹಾಕೊಂಡು ಕುಂತ್ಯಾ ಶೆಟ್ಟಿ. ಸ್ಕೂಲುಡ್ರುಗೆ ಹಂಚು' ಅಂದಿರಬೇಕು. ತಿಮ್ಮಪ್ಪನಾಜ್ಞೆಯಂತೆ ಶೆಟ್ಟರು ಮಾಲೂರು ಸ್ಕೂಲಿಗೆ ಹೋದರು. ಮಾಲೂರೇ ಯಾಕೆ ಅಂದ್ರೆ ಅದು ಕಣ್ಣಿಗೆ ಬಿತ್ತು ಅದ್ಕೆ. ಅವರು ಆ ಕ್ಷೇತ್ರದ ಶಾಸಕರಾಗಿದ್ದದು ಆಕಸ್ಮಿಕ ಅಷ್ಟೆ! ಶಾಲೆಯ ಮಕ್ಕಳಿಗೆ ಹಂಚಬೇಕು ಅಂತಿದ್ರು. ಮತ್ತೆ ಭಗವಂತ 'ಎಲಾ ಶೆಟ್ಟಿ ಬರೀ ಲಾಡು ಹಂಚಿದ್ರೆ ಏನು ಬಂದಂಗೆ ಆಯಿತ್ಲ, ಬಾಯಿ ಸೀ ಆಯ್ತದೆ ಅಷ್ಟೇಯ. ವಸಿ ಹೊತ್ತಾದ ಮೇಲೆ ಮೊದಲಂಗೇ ಆಯ್ತದೆ. ಆ ಐಕ್ಳಿಗೆ ಹೊತ್ತೊತ್ಗೆ ಉಂಡೇ ಗೊತ್ತಿಲ್ಲ, ಯಾಕೆಂದ್ರೆ ಅವರ ತಾವ ವಾಚ್ ಇಲ್ಲ, ಅದ್ಕೇ ಲಾಡು ಜೊತೆ ವಾಚ್‌ನೂ ಕೊಡು' ಅಂದಿರಬೇಕು. ದೇವರ ಆಜ್ಞೆ ಅಲ್ವ. ಇದೂ ನಿಜವೇಯ. ವಾಚಿದ್ರೆ ತಿಮ್ಮಪ್ಪನ ಸೇವೇನೂ ಟೈಮಿಗೆ ಸರಿಯಾಗಿ ಮಾಡ್ತವೆ ಅಂತಾವ ಲಾಡೂ ಜೊತೆ ವಾಚನ್ನೂ ಹಂಚಿದರು. ಅಲ್ಲ ಇದನ್ನೂ ನೀತಿ ಸಂಹಿತೆ ಉಲ್ಲಂಘನೆ ಅಂತಾರಲ್ಲಾ... ದೇವರ ಸೇವೇಗೂ ಹಿಂಗಂದ್ರೆ... ಆ ತಿರುಪತಿ ತಿಮ್ಮಪ್ಪನೇ ಕಾಪಾಡಬೇಕು....

ಕೋಳಿ ಚುರಮುರಿ

ಚುನಾವಣೆ ಬಂದಾಗ ರೂಪಾಯಿ, ಹೆಂಡದ ಸೇವೆ ಮಾಡೋದು ಹಳೆ ಕಾಲದ ಮಾತಾಯಿತು. ಜನಕ್ಕೂ ಇದ ನೋಡಿನೋಡಿ ವಾಕರಿಕೆ ಬಂದೋಗದೆ. ಹೆಂಡ ಒಂದೇ ಕೊಟ್ರೆ ಆಯ್ತದಾ ನಂಚಿಕೊಳ್ಳೋಕೂ ಕೊಡಬೇಕು ಅನ್ನೋದು ಇತ್ತೀಚಿನ ಸುಧಾರಣೆ. ಒಂದು ದಿನ ಆದ್ರೂ ನೆಮ್ಮದಿಯಾಗಿ ಕುಡ್ದು ತಿಂದು ತೇಗಲಿ ಅಂತ ಹೆಚ್ಚುವರಿಯಾಗಿ ಒಂದೋಟಿಗೆ ಬಂದು ಉಂಡೇ ಕೋಳೀನೇ ಕೊಡ್ತಾ ಅವ್ರಂತೆ! ಇದು ಜನರ ಕಷ್ಟಕ್ಕೆ ಆಗೋದು ಅಂದ್ರೆ!

ಕೆಲವರಿರುತ್ತಾರೆ. ಆರು ತಿಂಗಳಿಗೆ ಹುಟ್ಟದೋವು. ಕೋಳಿ ಕೊಟ್ಟರೆ 'ಅಯ್ಯೋ ಅದ ಕೂದು ಸಾರು ಮಾಡೋ ಹೊತ್ಗೆ ಸರೊತ್ತಾಗ್ತದೆ' ಅಂತ ಗೊಣಗುಟ್ಟವಂತೆ. ಅವರ ಕಷ್ಟ ನೋಡಿ. ಚುನಾವಣೆ ಹೆಂಡ ಅದೆ. ಅದು ಕುಡಿಯಾನ ಅಂದ್ರೆ ಸೈಡ್ಗೇನೂ ಇಲ್ಲ, ಬ್ಯಾರೆ ದಿಸಾಗಿದ್ರೆ ಒಂದು ತರ. ಹೆಂಡ ಬಾಯಿಗೆ ಸುರ್ಕಂಡು ಒಂದೆರ್ಡಳ್ಳು ಉಪ್ಪ ಎಸಗಂಡ್ರೆ ಸೈಡ್ ಕತೆ ಮುಗೀತಿತ್ತು. ಇವತ್ತೂ ಹಂಗೆ ಮಾಡ್ಲಿ ಅಂದ್ರೆ ಪ್ರಜ್ಞಾವಂತ ಮತದಾರನ ಹಕ್ಕಿಗೇ ಅವಮಾನ! ಅದ್ಕೇ ಕೆಲ ಸೇವಕರು ಸೈಡ್ ಡಿಷ್‌ಗೆ ಅಂತ ಕೋಳಿ ಚುರಮುರಿ ಕೊಟ್ಟಾರಂತೆ! ಇದೇನಪ್ಪ ಕೋಳಿ ಚುರಮುರಿ ಅಂದ್ರೆ.... ಚುರಮುರಿಗೆ ಒಗ್ಗರಣೆ ಹಾಕುವಾಗಲೇ ಕೋಳಿಮಾಂಸದ ಚೂರುಗಳನ್ನೂ ಹಾಕುತ್ತಾರದಂತೆ! ಬಲೇಟೇಸ್ಟಾಗಿರ್ತದಂತೆ! ಜನ ಸೇವೆ ಅಂದ್ರೆ ಇದಕ್ಕೆ ಅನ್ನಬೇಕು! ●

ಎಲ್ಲೆಲ್ಲೂ ಹರಡಿರುವ ವಾಮಾಚಾರ



ಈ ವಾರದ 'ಕಂಡಹಾಗೆ' ಓದಿದಾಗ ಓರ್ವ ಮುಸ್ಲಿಮನಾಗಿ ಮಾನವಹಕ್ಕುಗಳ ಪರ ಮಾತನಾಡುವ ನನಗೆ ಅವ್ಯಕ್ತ ಭಯವಾಗುತ್ತಿದೆ. ಡಾಕ್ಟರ್ ಬಿನಾಯಕ್ ಸೇನ್‌ರಂತಹ ಪ್ರತಿಷ್ಠಿತರಿಗೇ ಘೋರ ಅನ್ಯಾಯವಾಗುತ್ತಿರುವಾಗ ನಮ್ಮಂತಹ ಪುಟಗೋಸಿಗಳು ಈ ದರಿದ್ರ ಪ್ರಭುತ್ವಕ್ಕೆ ಯಾವ ಲೆಕ್ಕ?

-ಇಸ್ಮತ್ ಪಜೀರ್, ಮಂಗಳೂರು

ಮಂಗಳೂರು ನಗರದ ಕೇಂದ್ರ ಭಾಗದಲ್ಲೇ ನಡೆದ ನರಬಲಿ ಘಟನೆಯ ನಂತರ ವಾಮಾಚಾರದ ವಿರುದ್ಧ ದೊಡ್ಡ ಕೂಗೆದ್ದಿದೆ. ಆದರೆ ಕೇಸರಿ ಬಣ್ಣಕ್ಕೂ ವಾಮಾಚಾರಕ್ಕೂ ಹತ್ತಿರದ ನೆಂಟಿದೆ. ಎಲ್ಲಾ ಆಸ್ತಿಕರೂ ಜೀವನದಲ್ಲಿ ಒಂದಿಲ್ಲೊಂದು ಬಾರಿಯಾದರೂ ವಾಮಾಚಾರ ಕೈಗೊಂಡಿರುತ್ತಾರೆ. ಆದರೆ ಅದರಿಂದ ಮಾನವ ಜೀವ ಹಾನಿಯಾಗಿಲ್ಲವಾದುದರಿಂದ ಯಾರೂ ಪ್ರತಿಭಟಿಸಿಲ್ಲ.

ಜೀವನದಲ್ಲಿ ಕಷ್ಟ ಅನಾರೋಗ್ಯಗಳು ಆಮರಿಕೊಂಡಾಗ ಎಲ್ಲಾ ಆಸ್ತಿಕರೂ ಓಡುವುದು ಜ್ಯೋತಿಷಿಗಳ ಹತ್ತಿರ. ಎಲ್ಲರಿಗೂ ಜ್ಯೋತಿಷಿಗಳ ಸಿದ್ಧ ಉತ್ತರ "ಯಾರೋ ನಿಮ್ಮ ಹತ್ತಿರದವರೇ ನಿಮ್ಮ ಮೇಲೆ ಮಾಟ ಮಾಡಿಸಿದ್ದಾರೆ". ಇದರ ನೇರ ಪರಿಣಾಮ- ಒಂದೆಡೆ ತಮ್ಮ ಎಲ್ಲಾ ಬಾಂಧುಮಿತ್ರರ ಮೇಲೆ ಸಂಶಯಪಟ್ಟು ಎಲ್ಲರೊಂದಿಗೂ ಸಂಬಂಧ ಹಾಳು; ಇನ್ನೊಂದೆಡೆ ಇಲ್ಲದ ಮಾಟ ತೆಗೆಸಲು ಸಾವಿರಾರು ಖರ್ಚು. ಎಲ್ಲ ತರದ ವಾಮಾಚಾರದ ಉದ್ದೇಶ ಒಂದೇ. ಅದು ಕ್ಷುದ್ರ ಶಕ್ತಿಗಳನ್ನು, ತಾಮಸಿಕ ದೇವರನ್ನು ಸಂಪ್ರೀತಿಗೊಳಿಸಿ ತಮ್ಮ ಉದ್ದೇಶ ಸಾಧಿಸುವುದು. ಹಿಟ್ಟಿನಲ್ಲಿ ಅಥವಾ ಬಟ್ಟೆಯಲ್ಲಿ ಮಾನವ ರೂಪ ಮಾಡಿ ಬಲಿ ಕೊಡುವುದು ಸೌಮ್ಯ ವಾಮಾಚಾರ. ಅದರ ತಾಮಸ ರೂಪ ಕೋಣ, ಕುರಿ, ಕೋಳಿ, ಕತ್ತೆ ಬಲಿ ಕೊಡುವುದು. ಅದರ ಭೀಭತ್ಸ-ವಿಕಾರ ರೂಪವೇ ನರಬಲಿ. ಈ ಮೂರು ವಿಧದ ಹಿಂದೆ ಇರುವುದು ಒಂದೇ ತರದ ನೀಚ ಮನೋವಿಕಾರ. ಅಡಿಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ. ದೇವರಿಗೆ ತೆಂಗಿನಕಾಯಿ ಒಡೆಯುವುದೂ ನರಬಲಿ ಸಂಕೇತವಂತೆ. ತೆಂಗಿನಕಾಯಿ ಮಾನವ ತಲೆ ಬುರುಡೆಯ ಪ್ರತೀಕವಂತೆ.




ವಾಮಾಚಾರವೆಂದರೆ ವಾಮಮಾರ್ಗದಿಂದ ಅರ್ಥಾತ್ ಅಡ್ಡದಾರಿಯಿಂದ ಅಲೌಕಿಕ ಶಕ್ತಿಗಳನ್ನು ಒಲಿಸಿಕೊಳ್ಳುವ ಶಾರ್ಟ್‌ಕಟ್. ನಿರ್ದಿಷ್ಟ ಮಂತ್ರ, ವಸ್ತು, ದಿಕ್ಕು, ಬಣ್ಣ, ಗಿಡ, ಎಲೆ, ಒಡವೆ ಮುಂತಾದ ಶಾರ್ಟ್‌ಕಟ್‌ಗಳಿಂದ ದೇವರನ್ನು ಒಲಿಸಿಕೊಳ್ಳಬಯಸುವುದೂ ವಾಮಮಾರ್ಗವೇ. ರಾಜಕಾರಣಿಗಳು ವಿಧಾನಸೌಧದ ಎದುರು ಮಾಡಿದ್ದ ವಾಮಾಚಾರದ ಹಿಂದೆ ಇರುವುದೂ ಇದೇ ನೀಚ ಮಾನಸಿಕತೆ ಹಾಗೂ ಸೌಮ್ಯ ದೇವರಿಗಿಂತ ತಾಮಸಿಕ ದೇವರಿಗೆ, ಕ್ಷುದ್ರ ಶಕ್ತಿಗಳಿಗೆ ಹೆಚ್ಚು ಶಕ್ತಿಯಿದೆ ಎಂಬ ನಂಬಿಕೆ. ಶತ್ರು ಸಂಹಾರ ಪೂಜೆಯೂ ವಾಮಾಚಾರವೇ ಆಗಿದೆ.

ರಾಜಕಾರಣಿಗಳಷ್ಟೇ ಅಲ್ಲ, ಇತ್ತೀಚೆಗೆ ಮಾಜಿಯಾದ ಒಂದು ದೊಡ್ಡ ಕನ್ನಡ ಪತ್ರಿಕೆಯ ಸಂಪಾದಕರೂ ಚಂಭಟ್ಟನಂತಹ ವಾಮಾಚಾರಿಗೆ ಪ್ರೋತ್ಸಾಹ ಕೊಟ್ಟು ಓದುಗರ ಮೇಲೆ ಹೇರಲು ಸುದ್ದಿ ರೂಪದ ಛದ್ಮ ಜಾಹೀರಾತು ಕೊಡುತ್ತಿರಲಿಲ್ಲವೇ! ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಪ್ರಸಾರವಾಗುವ ಮೌಢ್ಯ ಹರಡುವ ಕಾರ್ಯಕ್ರಮಗಳೂ ವಾಮಾಚಾರದಲ್ಲಿ ಮುಗ್ಧ ಆಸ್ತಿಕರಿಗೆ ನಂಬಿಕೆ ಹೆಚ್ಚಲು ನೇರ ಕಾರಣ. ನರಬಲಿ ಮಾತ್ರ ತಪ್ಪು, ಪ್ರಾಣಿಬಲಿ ಪರವಾಗಿಲ್ಲ ಎನ್ನುವವರು ಗಮನಿಸಬೇಕಾದುದೇನೆಂದರೆ ಎಲ್ಲಾ ಪ್ರಾಣಿಗಳಿಗೂ ತಮ್ಮ ತಮ್ಮ ಜೀವ ಮಾನವನಷ್ಟೇ ಅಮೂಲ್ಯ!

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಈ ಸಲದ ಸಂಚಿಕೆ ನೋಡಿದೆ. ಚೆನ್ನಾಗಿದೆ. ಅಷ್ಟೇನೂ ಮುಖ್ಯವಲ್ಲದ ಸಣ್ಣದೊಂದು ಕರೆಕ್ಷನ್. ನನ್ನ ಊರು ಜೋಳದ ಕೂಡ್ಲಿಗಿ. ಇದು ಕೂಡ್ಲಿಗಿ ತಾಲೂಕಿನ ಕೊಟ್ಟೂರಿನ ಪಕ್ಕವಿರುವ ಸಣ್ಣ ಹಳ್ಳಿ. ಹಾಗಾಗಿ ನನ್ನ ಹೆಸರ ಜತೆ ಹಳ್ಳಿಯ ಹೆಸರು ಸೇರಿಸಿಕೊಂಡು ಜೋಳದಕೂಡ್ಲಿಗಿ ಅಂತಿಟ್ಟುಕೊಂಡಿದ್ದೇನೆ. ಹಾಗಾಗಿ ಮುಂದೆ ಪತ್ರಿಕೆಯಲ್ಲಿ ಅರುಣ್ ಜೋಳದಕೂಡ್ಲಿಗಿ ಎಂದೇ ಇರಲಿ.

-ಅರುಣ್




ಕ್ರಿಯಾಶೀಲತೆಯನ್ನೇ ಕೊಲ್ಲುವ ಹುನ್ನಾರ

ಹತ್ತು ವರ್ಷಗಳ ಹಿಂದೆ ನಡೆದ ಘಟನೆಯಿದು. ಆಗ ಆ ವ್ಯಕ್ತಿಗೆ ನಲವತ್ತು ವರ್ಷ ವಯಸ್ಸು. ಚೀನಾದ ಹಾಂಕಾಂಗ್‌ನಿಂದ ಅರ್ಜೆಂಟೀನಾದ ಬ್ಯುಯೊನೆಸ್ ಏರ್ಸ್‌ಗೆ ಪ್ರಯಾಣಿಸುತ್ತಿದ್ದಾಗ ಅವರು ಅಮೆರಿಕದ ನ್ಯೂಯಾರ್ಕ್ ವಿಮಾನನಿಲ್ದಾಣದಲ್ಲಿ ಇಳಿದಿದ್ದರು. ಆಗ ಆ ಏರ್‌ಪೋರ್ಟ್‌ನಲ್ಲಿದ್ದ ಅಮೆರಿಕ ಸರ್ಕಾರದ ಅಧಿಕಾರಿಗಳು ಅವರನ್ನು ತಡೆದು ಬೇರೆಲ್ಲರಿಗಿಂತ ಇವರನ್ನು ವಿಭಿನ್ನ ರೀತಿಯಲ್ಲಿ ವಿಚಾರಿಸಿಕೊಂಡಿದ್ದರು. ಅಷ್ಟೇ ಅಲ್ಲದೆ, ಅವರ ಫೋಟೋಗ್ರಾಫ್ ತೆಗೆದುಕೊಳ್ಳುವುದಾಗಿಯೂ, ಆತ ತನ್ನ ಫಿಂಗರ್ ಪ್ರಿಂಟ್‌ಗಳನ್ನು ಕೊಡಬೇಕೆಂದೂ ಆಜ್ಞೆ ಮಾಡಿದ್ದರು. ಯಾಕೆ ಗೊತ್ತೆ?

ಆತ ಇರಾನ್ ದೇಶದ ಮುಸ್ಲಿಂ ಆಗಿದ್ದ ಎಂಬ ಕಾರಣಕ್ಕೆ.

ಅವರ ಹೆಸರು ಜಾಫರ್ ಪನಾಹಿ. ಹಲವಾರು ಪ್ರತಿಷ್ಠಿತ ಇರಾನಿ ಸಿನಿಮಾಗಳನ್ನು ನಿರ್ದೇಶಿಸಿರುವ ಪನಾಹಿ ವಿವಿಧ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನೂ ಪಡೆದಿದ್ದಾರೆ. 2005ರಲ್ಲಿ ಪನಾಹಿ ನಿರ್ದೇಶಿಸಿದ 'ದಿ ವೈಟ್ ಬಲೂನ್', 1997ರಲ್ಲಿ ತೆರೆಕಂಡ 'ದಿ ಮಿರರ್', 2006ರಲ್ಲಿ ಬಿಡುಗಡೆಯಾದ 'ದಿ ಸರ್ಕಲ್' ಮತ್ತು 2006ರಲ್ಲಿ ತಯಾರಾದ 'ಆಫ್‌ಸೈಡ್' ಸಿನಿಮಾಗಳು ಅವರಿಗೆ ಅಂತರ ರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿವೆಯಲ್ಲದೆ ಅವರ ಜನಪರ, ಜೀವನ ಪರ ಕಾಳಜಿಗಳ ಅಭಿವ್ಯಕ್ತಿಯೂ ಆಗಿವೆ.



ತಾನು ಇರಾನ್ ದೇಶದ ಮುಸ್ಲಿಂ ಎನ್ನುವ ಕಾರಣಕ್ಕೇ ಅಮೆರಿಕದ ಅಧಿಕಾರಿಗಳು ತನ್ನನ್ನು ಥೇಟು ಕೊಲೆಗಾರನಂತೆ, ಜೇಬುಗಳ್ಳನಂತೆ, ಡ್ರಗ್ ಡೀಲರ್‌ನಂತೆ ನೋಡಲು ಶುರು ಮಾಡಿದ್ದನ್ನು ಪನಾಹಿ ಪ್ರತಿಭಟಿಸಿದ್ದರು. ತಾನು ಯಾವ ಅಪರಾಧವನ್ನು ಮಾಡಿರದಿದ್ದರೂ ತನ್ನನ್ನು ಓರ್ವ ಅಪರಾಧಿಯಂತೆ ಪರಿಗಣಿಸಿರುವುದು ತನ್ನ ಹಕ್ಕುಗಳ ಮೇಲಿನ ದಾಳಿ ಎಂದಿದ್ದರು. ಆದರೆ ಅದ್ಯಾವುದಕ್ಕೂ ಅಮೆರಿಕದ ಅಧಿಕಾರಿಗಳು ಕ್ಯಾರೆ ಅನ್ನಲಿಲ್ಲ, ಬದಲಾಗಿ ಅವರನ್ನು ಸಾಮಾನ್ಯ ಕ್ರಿಮಿನಲ್ ಎಂಬಂತೆ ಅವರಿಗೆ ಕೈಕೋಳ ತೊಡಿಸಿದರು. ವಿಮಾನ ನಿಲ್ದಾಣದಲ್ಲಿ ಸಿಕ್ಕಿಬಿದ್ದಿದ್ದ ಇತರೆ ಅಪರಾಧಿಗಳೊಂದಿಗೆ ಸರಪಳಿಗಳನ್ನು ಹಾಕಿ ಕೂರಿಸಿದ್ದರು. ಹೀಗೆ ಸುಮಾರು ಹತ್ತು ಗಂಟೆಗಳ ಕಾಲ ಅವರನ್ನು ಕಟ್ಟುಹಾಕಿದ ನಂತರ ಅವರು ತಮ್ಮ ಉದ್ದೇಶಿತ ಬ್ಯುಯೊನೆಸ್ ಏರ್ಸ್‌ಗೆ ಹೋಗಲು ಅನುಮತಿ ನೀಡದೆ ಮತ್ತೆ ಅವರನ್ನು ಹಾಂಕಾಂಗಿಗೆ ಸಾಗಹಾಕಿದ್ದರು.

ಅಂದು ಅಮೆರಿಕಾವನ್ನು ಪನಾಹಿ ಖಂಡಿಸಿದ್ದರು. ಇವತ್ತು ಅದೇ ಪನಾಹಿಯವರಿಗೆ ಅವರದ್ದೇ ಇರಾನಿ ದೇಶದ ಸರ್ಕಾರ ಆರು ವರ್ಷಗಳ ಜೈಲು ಶಿಕ್ಷೆ ಘೋಷಿಸಿದೆ. ಮಾತ್ರವಲ್ಲ, ಇನ್ನೂ ಇಪ್ಪತ್ತು ವರ್ಷಗಳ ಕಾಲ ಅವರು ಯಾವುದೇ ಚಿತ್ರವನ್ನು ನಿರ್ದೇಶಿಸುವಂತಿಲ್ಲ, ಸಿನಿಮಾ ಸ್ಕ್ರಿಪ್ಟನ್ನೂ ಬರೆಯುವಂತಿಲ್ಲ, ಯಾವುದೇ ಮಾಧ್ಯಮದೊಂದಿಗೆ ಮಾತನಾಡುವಂತಿಲ್ಲ, ವಿದೇಶಗಳಿಗೆ ಪ್ರಯಾಣವನ್ನೂ ಮಾಡುವಂತಿಲ್ಲ ಎಂದು ಇರಾನಿ ಸರ್ಕಾರ ಆದೇಶಿಸಿದೆ.

ಇದಕ್ಕೆ ಕಾರಣ ಮತ್ತದೇ ಪನಾಹಿ ಅವರ ಸಾಮಾಜಿಕ ಕಳಕಳಿ. ಇರಾನ್ ಸರ್ಕಾರದ ವಿರುದ್ಧ ಅವರು ಅಪಪ್ರಚಾರದಲ್ಲಿ ತೊಡಗಿದ್ದರು ಎಂಬ ಆರೋಪದ ಮೇಲೆ ಅವರಿಗೆ ಈಗ ಇಂತಹ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

ವಾಸ್ತವವಾಗಿ ಇರಾನ್ ಸರ್ಕಾರದ ಸಾಮ್ರಾಜ್ಯಶಾಹಿ ಧೋರಣೆಯ ವಿರುದ್ಧ, ಸರ್ಕಾರೀ ದೌರ್ಜನ್ಯಗಳ ವಿರುದ್ಧ ಪನಾಹಿ ಹೋರಾಡುತ್ತಲೇ ಬಂದಿದ್ದಾರೆ. ಅದಕ್ಕಾಗಿ ಈ ಹಿಂದೆ ಅವರು ಹಲವೊಮ್ಮೆ ಬಂಧನಕ್ಕೂ ಒಳಗಾಗಿದ್ದಾರೆ.

ಈಗ ಪನಾಹಿಗೆ ಐವತ್ತು ವರ್ಷ ವಯಸ್ಸು. ಇರಾನ್ ದೇಶ ಅವರಿಗೆ ಘೋಷಿಸಿರುವ ಶಿಕ್ಷೆಯ ಪ್ರಕಾರ ಅವರು 70 ವರ್ಷ ವಯಸ್ಸು ತಲುಪುವ ತನಕ ಅವರು ಮತ್ತೊಂದು ಸಿನಿಮಾ ನಿರ್ದೇಶಿಸುವಂತಿಲ್ಲ. ಅಂದರೆ ಅವರ ಕ್ರಿಯಾಶೀಲತೆಯನ್ನೇ ಕೊಲ್ಲುವ ಹುನ್ನಾರವಿದು.

ನಾಚಿಕೆಗೇಡಿನ ಸಂಗತಿಯೆಂದರೆ ನಮ್ಮ ಇಂಡಿಯಾದಲ್ಲೂ ಇತ್ತೀಚೆಗೆ ಮಾನವೀಯ ವೈದ್ಯರಾದ, ಮಾನವ ಹಕ್ಕುಗಳ ಹೋರಾಟಗಾರರಾದ ಡಾ. ಬಿನಾಯಕ್ ಸೇನ್ ಅವರಿಗೂ ಸುಳ್ಳು ಆರೋಪಗಳನ್ನೇ ಆಧರಿಸಿ ನಮ್ಮ ನ್ಯಾಯಾಲಯವೊಂದು ಜೀವಾವಧಿ ಶಿಕ್ಷೆಯನ್ನು ಘೋಷಿಸಿದೆ.

ದೇಶ ಯಾವುದಾದರೇನು, ಪ್ರಭುತ್ವದ ದೌರ್ಜನ್ಯಗಳನ್ನು ವಿರೋಧಿಸುವವರಿಗೆ ಜೈಲೇ ಗತಿ ಎಂಬ ಧೋರಣೆ ಸರ್ಕಾರಗಳದ್ದು ಎಂಬುದು ಮತ್ತೊಮ್ಮೆ ಸಾಬೀತಾಗಿದೆ....

• ಅರುಣ್ .ಜಿ

…ಹಂ ಬಿಟ್ಟರೆ ಭವಿಷ್ಯ ಬಂಗಾರ

…ರ್ಷದ ಆರಂಭದಲ್ಲಿ 'ಮಿಸ್ಟರ್ ಗರಗಸ' ಚಿತ್ರದಿಂದ ಹಾಸ್ಯನಟ ಕೋಮಲ್ …ು ತನ್ನ ತಾರಾ ವರ್ಚಸ್ಸನ್ನು ವೃದ್ಧಿಸಿಕೊಂಡರೆ, 2010ರ ಕೊನೆಯಲ್ಲಿ …ತ 'ಹುಲಿ' ಚಿತ್ರದ ಮೂಲಕ ಖಳನಾಯಕ ಕಿಶೋರ್ ಹೊಸ ಇಮೇಜನ್ನು …ಕೊಂಡಿದ್ದಾರೆ.

…ನ್ನಡ ಚಿತ್ರರಂಗದ ಬಹುತೇಕ ಎಲ್ಲಾ ನಾಯಕ ನಟರ ಸಂಭಾವನೆ ಈಗ …ಯ ಗಡಿ ದಾಟಿರುವುದರಿಂದ ಗಾಂಧಿನಗರದ ಹಲವು ನಿರ್ಮಾಪಕರು 2…ರಲ್ಲಿ ಹಣ ಥೈಲಿ ಹಿಡಿದುಕೊಂಡು ಹೊಸ ಹೀರೋಗಳಾದ ಕೋಮಲ್ …ಕಿಶೋರ್ ಮನೆ ಬಾಗಿಲಿಗೆ ದೌಡಾಯಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ.


…ದನ್ನೇ ಮೊನ್ನೆ ಕೋಮಲ್ ತನ್ನದೇ ಆದ ಶೈಲಿಯಲ್ಲಿ ಹೇಳಿದ್ದು ಹೀಗೆ: "…ಾಕನಟನಾಗಿ ನನಗೆ ಅನೇಕ ಆಫರ್‌ಗಳು ಬರುತ್ತಿವೆ. ಆದರೆ ನಾನು …ನ್ನು ಒಪ್ಪಿಕೊಳ್ಳುತ್ತಿಲ್ಲ. ಸಿಕ್ಕಾಪಟ್ಟೆ ಬಿಜಿ ಇದ್ದಂತೆ ಆಕ್ಟ್ ಮಾಡುತ್ತೇನೆ. …ಾವರು ಹೆಚ್ಚು ಸಂಭಾವನೆಯನ್ನು ನೀಡಲು ಮುಂದಾಗುತ್ತಾರೆ. ಸಾರ್, … ಮಾತಂತೂ ಸತ್ಯ. ಕಲಾವಿದರಾದವರು ಬೇಡಿಕೆಯಲ್ಲಿರುವಾಗ ಹಣ …ವುದು ತಪ್ಪಲ್ಲ. ಈ ಕಾರಣಕ್ಕಾಗಿ ನಾನು ಹೆಚ್ಚು ಸಂಭಾವನೆ ಪಡೆಯಲು …ಟ್ಟೆ ಬಿಜಿ ಇದ್ದಂತೆ ನಟಿಸುತ್ತೇನೆ...."

…ದಕ್ಕೆ ಅವರು ನೀಡುವ ಸಮರ್ಥನೆ ಹೀಗಿದೆ: "ನೋಡಿ ಸಾರ್, ನಾನು … 'ಮಿಸ್ಟರ್ ಗರಗಸ' ಚಿತ್ರ ಟಿವಿಯಲ್ಲಿ ಈಗಾಗಲೇ 37 ಬಾರಿ …ವಾಗಿದೆ. ಅಷ್ಟು ಬಾರಿ ಪ್ರಸಾರ ಮಾಡುವ ಮುಖಾಂತರ ಆ ಚಾನೆಲ್‌ನವರು …ರು 6 ಕೋಟಿ ರೂಪಾಯಿ ಲಾಭವನ್ನು ಗಳಿಸಿದ್ದಾರೆ. ಕನ್ನಡ ಚಿತ್ರರಂಗದ …ಸದಲ್ಲೇ ಈತನಕ ಯಾವೊಂದು ಚಿತ್ರವೂ ಅಷ್ಟೊಂದು ಬಾರಿ …ಪ್ರಸಾರ ಕಂಡಿದ್ದೇ ಇಲ್ಲ. ಆ ಚಾನೆಲ್‌ನವರು ಅಷ್ಟು ಬಾರಿ … ಪ್ರಸಾರ ಮಾಡಬೇಕಾದರೆ ನನ್ನ ಚಿತ್ರಕ್ಕೆ ಅಷ್ಟೊಂದು … ಇದೆಯೆಂಬುದು ಸಾಬೀತಾಯಿತಲ್ಲವೇ? ಅವರೇನು …ಸುಮ್ಮನೆ ನಷ್ಟ ಮಾಡಿಕೊಂಡು ಚಿತ್ರವನ್ನು …ತ್ತಾರಾ? ಹಾಗಾಗಿ ನಾನು ನನ್ನ ಸಂಭಾವನೆಯನ್ನು …ಮಾಡಿದರೆ ತಪ್ಪೇನು ಹೇಳಿ?"

… ಪತ್ರಕರ್ತರು "ಆದರೆ ನೀವು ನಟಿಸಿರುವ …ಯಾಸಿ ಚಿಂದಿ ಉಡಾಯಿಸಿ' ಚಿತ್ರ ಯಾಕೆ …ಯಲ್ಲಿ ಮರುಪ್ರಸಾರವಾಗುತ್ತಿಲ್ಲ?" … ಕೇಳಿದರೆ ಕೋಮಲ್ ಅವರ …ಉತ್ತರವಿಲ್ಲ!

…ೋಮಲ್ ಒಬ್ಬ ಉತ್ತಮ …ಹಾಸ್ಯ ಪಾತ್ರಗಳಲ್ಲಿ …ನ್ನ ಸಹೋದರ …ನನ್ನೂ ಓವರ್‌ಟೇಕ್ … ಮುಂದೆ ಸಾಗಿದ್ದಾರೆ.

…ಚಿಸಿಗಿರಬೇಕಾದ …ಜಗ್ಗೇಶ್, … ದಲಿತರಿ ಶೈಲಿ …ಸ್ಟೈಲಿಂಗ್, ಇತ್ಯಾದಿ…



ಕೋಮಲ್‌ನಲ್ಲಿ ಹಿತಮಿತವಾಗಿ ಅಡಗಿಕೊಂಡಿವೆ.


ಅದೇರೀತಿಯ ಖಳನಟ ಕಿಶೋರ್ ಕೂಡ ಕಣ್ಣಲ್ಲೇ ಮಾತನಾಡುವ ಮತ್ತು ಕ್ರೌರ್ಯವನ್ನು ತೋರಿಸುವ ಅಪ್ರತಿಮ ನಟ. ಹಾಗೇ ನೋಡಿದರೆ ವಜ್ರಮುನಿ, ತೂಗುದೀಪ ಶ್ರೀನಿವಾಸ್ ಮೊದಲಾದ ಕನ್ನಡ ಚಿತ್ರರಂಗದ ಮಹಾನ್ ಖಳನಾಯಕರ ಸಾಲಿಗೆ ಕಿಶೋರ್ ಸೇರುತ್ತಾರೆ. ಕಿಶೋರ್ ಮಾತನಾಡುವ ಕನ್ನಡ ಕೂಡಾ ಸ್ಪಷ್ಟ. ಆತನ ಮತ್ತೊಂದು ಹೆಗ್ಗಳಿಕೆ ಆತನ ಅಪರೂಪದ ಕಂಠ.

ಹೀಗೆ ಒಬ್ಬ ಪ್ರತಿಭಾವಂತ ಹಾಸ್ಯನಟ, ಮತ್ತೊಬ್ಬ ಪ್ರತಿಭಾವಂತ ಖಳನಟ ಕನ್ನಡ ಚಿತ್ರರಂಗಕ್ಕೆ ಸಿಕ್ಕಿದ್ದರು. ಹಾಗೆಂದು ನಿರ್ದೇಶಕರು ಮತ್ತು ನಿರ್ಮಾಪಕರು ಸಂತೋಷ ಪಡುವಷ್ಟರಲ್ಲೇ ಇವರಿಬ್ಬರೂ ಈಗ ನಾಯಕರಾಗಿ ಬಡ್ತಿ ಹೊಂದಿದ್ದಾರೆ. ಈ ಹಿಂದೆಯೂ ಹಾಸ್ಯನಟರಾದ ಜಗ್ಗೇಶ್, ಖಳನಾಯಕರಾದ ಟೈಗರ್ ಪ್ರಭಾಕರ್ ಮತ್ತು ದೇವರಾಜ್ ನಾಯಕ ನಟರಾಗಿ ಬಡ್ತಿ ಪಡೆದಿದ್ದರು.

ಆದರೆ ಕೋಮಲ್ ಮತ್ತು ಕಿಶೋರ್ ಹೀರೋಗಳಾಗದೇ ಇದ್ದಿದ್ದರೆ ಅವರಿಬ್ಬರೂ ತಮ್ಮತಮ್ಮ ಪಾತ್ರಗಳಲ್ಲಿ ಮುಂದಿನ ಹತ್ತದಿನೈದು ವರ್ಷಗಳ ಕಾಲ ಚಕ್ರವರ್ತಿ ತರ ಮೆರೆಯಬಹುದಿತ್ತು. ಏಕೆಂದರೆ, ಬಹುತೇಕ ಎಲ್ಲಾ ಚಿತ್ರಗಳಲ್ಲಿ ಹಾಸ್ಯನಟ ಅಥವಾ ಖಳನಟರಿಗೆ ಅವಕಾಶಗಳಿರುತ್ತವಲ್ಲದೆ ಅವರಿಗೂ ಅಭಿಮಾನಿಗಳಿರುತ್ತಾರೆ.

ನಮ್ಮ ನೆರೆಯ ರಾಜ್ಯವಾದ ತಮಿಳು ಚಿತ್ರರಂಗದಲ್ಲಿ ಇಂದಿಗೂ ಸೆಂಡಿಲ್, ವಿವೇಕ್, ವಡಿವೇಲು ಮೊದಲಾದವರು ಹಾಸ್ಯನಟರಾಗಿಯೇ ಜನಮನ ಗೆದ್ದಿದ್ದಾರೆ. ಅಷ್ಟೇ ಅಲ್ಲ ಅವರೂ ನಾಯಕ ನಟರಂತೆ ಕೋಟಿಕೋಟಿಗಳನ್ನು ಸಂಪಾದಿಸುತ್ತಾರೆ. ಹೀಗಾಗಿ ನಾಯಕನಟರ ಮನೆ ಮೇಲೆ ಆದಾಯ ತೆರಿಗೆ ದಾಳಿ ಮಾಡಿದಂತೆ ಈ ಹಾಸ್ಯನಟರ ಮನೆ ಮೇಲೆಯೂ ಆದಾಯ ತೆರಿಗೆಯವರು ದಾಳಿ ನಡೆಸಿದ ಉದಾಹರಣೆಗಳೂ ಇದೆ.

ಅಷ್ಟೇ ಯಾಕೆ, ನಮ್ಮ ಕನ್ನಡ ಚಿತ್ರರಂಗದ ಇತಿಹಾಸದಲ್ಲೂ ರಾಜ್‌ಕುಮಾರ್ ಅವರ ಸಿನಿಮಾಗಳಲ್ಲಿ ಹಾಸ್ಯನಟರಾಗಿ ಬಾಲಕೃಷ್ಣ ಮತ್ತು ನರಸಿಂಹರಾಜು ಹಾಗು ಪೋಷಕನಟರಾಗಿ ಅಶ್ವತ್ಥ್ ಜನಪ್ರಿಯತೆಯನ್ನು ಗಳಿಸಿದ್ದರು. ಆ ಸಂದರ್ಭದಲ್ಲಿ ಹಾಸ್ಯ ಚಕ್ರವರ್ತಿ ನರಸಿಂಹರಾಜು ಎಷ್ಟೊಂದು ಬಿಜಿ ಇರುತ್ತಿದ್ದರೆಂದರೆ ಸ್ವತಃ ರಾಜ್‌ಕುಮಾರ್ ತಮ್ಮ ಚಿತ್ರಗಳಿಗೆ ನರಸಿಂಹರಾಜು ಅವರ ಕಾಲ್‌ಶೀಟ್ ಪಡೆಯಲು ಕಾಯುತ್ತಿದ್ದರಂತೆ. ಕೆಲವು ಬಾರಿ ನಿರ್ಮಾಪಕರು ಮೊದಲು ನರಸಿಂಹರಾಜು ಅವರು ಕಾಲ್‌ಶೀಟ್ ಪಡೆದ ನಂತರವೇ ರಾಜ್‌ಕುಮಾರ್ ಅವರ ಕಾಲ್‌ಶೀಟನ್ನು ಪಡೆಯುತ್ತಿದ್ದರಂತೆ. ಅಂದರೆ ಹಾಸ್ಯನಟನಾಗಿ ಕೂಡಾ ಒಬ್ಬ ಕಲಾವಿದ ನಾಯಕನಟನ ಎತ್ತರಕ್ಕೆ ಬೆಳೆಯಬಹುದು ಎಂದರ್ಥವಲ್ಲವೆ?



ಅದೇರೀತಿ ಖಳನಾಯಕನಿಗೂ ಬೇಡಿಕೆ ಇದ್ದೇ ಇರುತ್ತದೆ. ಉದಾಹರಣೆಗೆ, ಕೆಲವು ವರ್ಷಗಳ ಹಿಂದೆ ಹೊಟ್ಟೆಪಾಡಿಗಾಗಿ ತಮಿಳು ಚಿತ್ರರಂಗಕ್ಕೆ ವಲಸೆ ಹೋದ ನಮ್ಮವರೇ ಆದ ಪ್ರಕಾಶ್ ರೈ ಯಾವ ಎತ್ತರಕ್ಕೆ ಬೆಳೆದು ನಿಂತಿದ್ದಾರೆ ನೋಡಿ. ತೆಲುಗಿನ ಮೆಗಾ ಸ್ಟಾರ್ ಚಿರಂಜೀವಿ ತನ್ನ ಚಿತ್ರದ ನಿರ್ದೇಶಕರಿಗೆ ಖಳನಾಯಕನ ಪಾತ್ರಕ್ಕೆ ಪ್ರಕಾಶ್ ರೈಯನ್ನೇ ಹಾಕಬೇಕು ಎಂದು ತಾಕೀತು ಮಾಡಿದ್ದೂ ನಡೆದಿದೆ. ಅಷ್ಟೇ ಯಾಕೆ, ಇತ್ತೀಚೆಗೆ ಬಂದಿರುವ ತೆಲುಗಿನ ಅನೇಕ ಯುವ ನಾಯಕ ನಟರುಗಳು ಕೂಡಾ ತಮ್ಮ ಮುಂದೆ ಖಳನಾಯಕನಾಗಿ ಪ್ರಕಾಶ್ ರೈ ಇರಬೇಕು ಎಂದು ಬಯಸುತ್ತಾರೆ. ಈ ಬಗ್ಗೆ ಒಮ್ಮೆ ರೈ ಹೇಳಿದ್ದು ಅರ್ಥಪೂರ್ಣವಾಗಿತ್ತು: "ಎಷ್ಟೇ ಚಿಕ್ಕವನ ಕೈಯಲ್ಲೂ ನಾನು ಹೊಡೆಸಿಕೊಳ್ಳಲು ತಯಾರಿದ್ದೇನೆ. ನನಗೆ ಹೊಡೆದರಷ್ಟೇ ಪ್ರೇಕ್ಷಕರು ಅವರಿಗೆ ಚಪ್ಪಾಳೆ [illegible]ಯುತ್ತಾರೆ ಎಂಬುದು ನನಗೂ ಗೊತ್ತು, ಅವರಿಗೂ ಗೊತ್ತು. ಒಂದೇ ಒಂದು ವಿಷಯವೆಂದರೆ ಚಿಕ್ಕ ಚಿಕ್ಕ ನಾಯಕನಟರ ಕೈಯಲ್ಲಿ ಹೊಡೆಸಿಕೊಳ್ಳುವ ಪಾತ್ರಕ್ಕೆ ನನ್ನ ಸಂಭಾವನೆ ಮಾತ್ರ ಏಕ್‌ದಂ ಜಾಸ್ತಿಯಾಗುತ್ತದೆ!" ಅಂದರೆ ಉತ್ತಮ ಖಳನಾಯಕನಿಗೂ ಹಣ ಮಾಡಲು ಅನೇಕ ಅವಕಾಶಗಳು ಸಿಕ್ಕೇ ಸಿಗುತ್ತದೆ ಎಂದಾಯಿತಲ್ಲವೇ?

ಈ ಎಲ್ಲಾ ಹಿನ್ನೆಲೆಯಲ್ಲಿ ಇದೀಗ ನಾಯಕನಟರಾಗಿರುವ ಕೋಮಲ್ ಮತ್ತು ಕಿಶೋರ್‌ಗೆ ಅಭಿನಂದನೆಯ ಜೊತೆಗೆ ನಮ್ಮ ಕಿವಿಮಾತು ಇಷ್ಟೆ... ನಾಯಕನ ಪಾತ್ರ ನೀರಮೇಲಿನ ಗುಳ್ಳೆಯಂತೆ. ಅದು ಯಾವಾಗ ಬೇಕಾದರೂ ಠುಸ್ ಆಗಿಬಿಡಬಹುದು. ಆದರೆ ಖಳನಟ, ಹಾಸ್ಯನಟ, ಪೋಷಕನಟರಿಗೆ ಅನೇಕ ದಶಕಗಳ ಕಾಲ ಮೆರೆಯುವ ಅವಕಾಶವಿರುತ್ತದೆ. ಈ ಕಾರಣದಿಂದ ಬರೀ ಮರುಸುತ್ತುವ ಪಾತ್ರಗಳಿಗೆ ಅಂಟಿಕೊಳ್ಳುವ ಬದಲು ಕೋಮಲ್ ಮತ್ತು ಕಿಶೋರ್ ಮುಂಬರುವ ದಿನಗಳಲ್ಲಿ ಒಳ್ಳೆಯ ಹಾಸ್ಯಪಾತ್ರ, ಖಳನಪಾತ್ರ ದೊರಕಿದರೆ ಅದನ್ನು ನಿರಾಕರಿಸದಿರಲಿ....

• ಶೆಣೈ

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 12-01-2011 RNI No. KARKAN2005/14648

ದುಬಾರಿ ವಿಚ್ಛೇದನ

ಕಳೆದ ಆರು ತಿಂಗಳಿಂದ ಸಾಂಸಾರಿಕ ಕಲಹದಿಂದಾಗಿ ಕೋರ್ಟು ಬಾಗಿಲಿಗೆ ಅಲೆಯುತ್ತಿದ್ದ ನಟ ಪ್ರಭುದೇವಾ ತನ್ನ ಪತ್ನಿಯಿಂದ ವಿಚ್ಛೇದನ ಪಡೆಯುವಲ್ಲಿ ಕಡೆಗೂ ಯಶಸ್ವಿಯಾಗಿದ್ದಾನೆ..!

ಪ್ರಭುದೇವಾ ನಟಿ ನಯನ್‌ತಾರಾಳ ನಂಟಿಗೆ ಬಿದ್ದಿದ್ದು, ಆಕೆಯನ್ನೇ ಮದುವೆಯಾಗುವುದಾಗಿ ಪತ್ರಿಕೆಗಳಲ್ಲಿ ಸಂದರ್ಶನ ಕೊಟ್ಟಿದ್ದು ಹಳೇ ವಿಚಾರ. ಆದರೆ ತನ್ನ ಸತಿ ಸಂಸಾರವನ್ನು ತೊರೆದು ಬೇರೊಬ್ಬಳ ಹಿಂದೆ ಹೋಗುವುದನ್ನು ಪ್ರಭುದೇವಾ ಪತ್ನಿ ರಾಮಲತಾ ತೀವ್ರವಾಗಿ ವಿರೋಧಿಸುತ್ತಾ ಬಂದಿದ್ದರು. 'ನನ್ನ ಗಂಡ ನನಗೇ ಬೇಕು. ಯಾವುದೇ ಕಾರಣಕ್ಕೂ ನಾನು ಆತನಿಂದ ವಿಚ್ಛೇದನ ಪಡೆಯುವುದಿಲ್ಲ. ಆತ ನನ್ನಿಂದ ದೂರವಾಗಿ ಹೊಸ ಜೀವನ ಆರಂಭಿಸಬಹುದು. ಆದರೆ ನನ್ನಿಂದ ಅದು ಸಾಧ್ಯವಿಲ್ಲ. ನಾನು ಗಂಡನಿಂದ ದೂರವಾದರೆ ನನ್ನ ಮಕ್ಕಳು ತಂದೆಯ ಆಸರೆ, ಪ್ರೀತಿಯಿಂದ ವಂಚಿತರಾಗುತ್ತಾರೆ. ಪ್ರಭುದೇವಾ ನಯನ್‌ತಾರಾಳನ್ನು ಮದುವೆಯಾಗಲು ನಾನು ಬಿಡುವುದಿಲ್ಲ. ಮಾತ್ರವಲ್ಲ, ಅವರಿಬ್ಬರೂ ಸಾರ್ವಜನಿಕ ಸಭೆಗಳಲ್ಲಿ ಒಟ್ಟಿಗೆ ಭಾಗವಹಿಸ ಬಾರದು...' ಎಂದೆಲ್ಲಾ ರಾಮಲತಾ ದೂರಿ ಕೇಸು ಹೂಡಿದ್ದಳು.



'ಒಂದು ವೇಳೆ ನನ್ನ ಪತಿ ನನ್ನ ಒತ್ತಾಯಗಳಿಗೆ ಮಣಿಯದಿದ್ದರೆ ನಾನು ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತೇನೆ' ಎಂದೂ ಆಕೆ ಗುಡುಗಿದ್ದಳು.

ಇದಕ್ಕೆ ಪ್ರಭುದೇವ 'ನಾನು ನನ್ನ ಪತ್ನಿಗೆ ಮೂರು ಕೋಟಿ ರೂಪಾಯಿ ನಗದು ಮತ್ತು 180 ಸವರನ್ ಚಿನ್ನ ಕೊಡುತ್ತೇನೆ. ರಾಮಲತಾ ನನಗೆ ವಿಚ್ಛೇದನ ಕೊಡಲಿ' ಎಂದಿದ್ದ. ಈ ದಂಪತಿಗಳ ವಾದವಿವಾದವನ್ನು ಆಲಿಸಿದ ಚೆನ್ನೈನ ಹೆಚ್ಚುವರಿ ಕುಟುಂಬ ನ್ಯಾಯಾಲಯ ಈಗ ಅನೇಕ ಕರಾರುಗಳನ್ನು ಮಾಡಿ 'ದುಬಾರಿ' ವಿಚ್ಛೇದನ ನೀಡಲು ಸಮ್ಮತಿಸಿದೆ.

ಅದರಂತೆ ಪ್ರಭುದೇವಾ ತನ್ನ ಮೂರು ಮನೆಗಳು, ಎರಡು ಕಾರು ಮತ್ತು ಹತ್ತು ಲಕ್ಷ ರೂಪಾಯಿಯ ನಗದನ್ನು ರಾಮಲತಾಳಿಗೆ ನೀಡಬೇಕಾಗಿದೆ.

1995ರಲ್ಲಿ ಪ್ರಭುದೇವಾ ರಾಮಲತಾಳನ್ನು ಮದುವೆಯಾಗಿದ್ದ. ನಂತರ ಇವರಿಗೆ ಮೂವರು ಮಕ್ಕಳೂ ಆಗಿದ್ದವು. ಪ್ರಭುದೇವಾ ದಕ್ಷಿಣ ಭಾರತದ ನಟ, ನಿರ್ದೇಶಕ ಹಾಗೂ ನೃತ್ಯ ನಿರ್ದೇಶಕನೂ ಆಗಿರುವುದರಿಂದ ಸಿನಿಮಾಗಳಲ್ಲಿ ಬಿಡುವಿಲ್ಲದೆ ಕೆಲಸ ಮಾಡುತ್ತಾ ಬೇಕಾದಷ್ಟು ಸಂಪಾದನೆಯನ್ನೂ ಮಾಡಿಕೊಂಡಿದ್ದ. ಸಂಸಾರದಲ್ಲೂ ಯಾವ ಪಿರಿಪಿರಿಗಳಿರಲಿಲ್ಲ. ಆದರೆ 2008 ರಲ್ಲಿ ಪ್ರಭುದೇವಾ ಮತ್ತು ಲತಾ ದಂಪತಿಯ ಹನ್ನೆರಡು ವರ್ಷದ ಮಗ ವಿಶಾಲ್ ಕ್ಯಾನ್ಸರ್ ರೋಗಕ್ಕೆ ಬಲಿಯಾಗಿ ಸಾವನ್ನಪ್ಪಿದ. ಅದೇ ಹೊತ್ತಿಗೆ ಪ್ರಭುದೇವಾ 'ವಿಲ್ಲು' ಸಿನಿಮಾವನ್ನು ನಿರ್ದೇಶಿಸಿ ನಟಿಸುತ್ತಿದ್ದ. ಆ ಚಿತ್ರದಲ್ಲಿ ತಮಿಳಿನ ಖ್ಯಾತ ನಟಿ ನಯನ್‌ತಾರಾ ಪ್ರಭುದೇವನಿಗೆ ಜೊತೆಯಾಗಿ ನಟಿಸಿದ್ದಳು. ಈ ಸಂದರ್ಭದಲ್ಲಿ ಪ್ರಭುದೇವಾ ಮತ್ತು ನಯನ್‌ತಾರಾ ನಡುವೆ ಅಫೇರು ಶುರುವಾಗಿತ್ತು. ಪ್ರಭು ಮತ್ತು ನಯನ್ ಇಬ್ಬರೂ ಪರಸ್ಪರ ಒಪ್ಪಿ ಮದುವೆಯಾಗುವುದಾಗಿ ಹೇಳಿಕೆಯನ್ನೂ ಕೊಟ್ಟರು. ಇವರಿಬ್ಬರೂ ಮದುವೆಯ ಪ್ರಸ್ತಾಪವನ್ನು ಬಹಿರಂಗಗೊಳಿಸುವ ಮುನ್ನವೇ ಒಂದೇ ಮನೆಯಲ್ಲಿ ಸಂಸಾರವನ್ನೂ ಶುರುಹಚ್ಚಿಕೊಂಡಿದ್ದರು. ಪ್ರಭುದೇವ ತನ್ನ ಮನೆಕಡೆ ತಲೆಹಾಕುವುದನ್ನೇ ಮರೆತ. ಆ ಮೂಲಕ ಸುಂದರ ಕುಟುಂಬವೊಂದು ಛಿದ್ರಛಿದ್ರವಾಗಿಹೋಗಿತ್ತು...



ವಿಚ್ಛೇದನಕ್ಕೂ ಮುನ್ನ ಮತ್ತೊಂದು ಮದುವೆಗೆ ಕಾನೂನು ಸಮ್ಮತಿಸದ ಕಾರಣ ಕಳೆದ ಒಂದು ವರ್ಷದಿಂದ ಪ್ರಭುದೇವ ಮತ್ತು ನಯನ್‌ರ ಮದುವೆ ಮುಂದೂಡುತ್ತಲೇ ಹೋಗಿತ್ತು. ಈಗ ಪ್ರಭುದೇವನ ಪಾಲಿಗೆ 'ಸಮಸ್ಯೆ'ಗಳು ದೂರಾಗಿವೆ! ನಯನ್‌ಳ ಕೊರಳಿಗೆ ತಾಳಿ ಕಟ್ಟುವುದಷ್ಟೇ ಬಾಕಿ...

• ಅರುಣ್



ಬಚ್ಚನ್ ಸೊಸೆಯ ಬಣ್ಣ ಬದಲಾಗಿದೆ...

'elle' ಎಂಬ ಇಂಟರ್‌ನ್ಯಾಷನಲ್ ಫ್ಯಾಷನ್ ಮ್ಯಾಗಜೀನು ಇತ್ತೀಚೆಗೆ ಮಾಜಿ ವಿಶ್ವಸುಂದರಿ, ಹಾಲಿ ನಟಿ, ಬಚ್ಚನ್ ಫ್ಯಾಮಿಲಿಯ ಸೊಸೆ ಐಶ್ವರ್ಯ ರೈಳ ಫೋಟೋವನ್ನು ತನ್ನ ಮುಖಪುಟದಲ್ಲಿ ಪ್ರಕಟಿಸಿದೆ. ಅದೇ ಈಗ ದೊಡ್ಡ ವಿವಾದಕ್ಕೆ ಕಾರಣವಾಗಿದೆ ಎಂದರೆ ಅಚ್ಚರಿ ಆಗುತ್ತದೆ.

ಹೇಳಿಕೇಳಿ ಐಶ್ವರ್ಯ ಅಪ್ರತಿಮ ಸುಂದರಿ. ಆದ್ದರಿಂದ ಆಕೆಯ ಫೋಟೋವನ್ನು ಅದು ಇದ್ದಂತೆಯೇ ಯಥಾವತ್ತು ಪ್ರಕಟಿಸಿದ್ದರೆ ಯಾರೂ ಕೆಮ್ಮುತ್ತಿರಲಿಲ್ಲ. ಆದರೆ ಆ ಮ್ಯಾಗಜೀನಿನವರು ಬೆಳ್ಳಗಿರುವ ಐಶ್ವರ್ಯ ರೈಳ ಮುಖ ಮತ್ತು ಮೈಬಣ್ಣವನ್ನು ಕಂಪ್ಯೂಟರ್ ಬಳಸಿ ಇನ್ನಷ್ಟು ಬೆಳ್ಳಗೆ ಮಾಡಿ ಪ್ರಕಟಿಸಿದ್ದಾರೆ. ಅದಕ್ಕೆ ಕಾರಣವೂ ಇದೆ. ಅದೇನೆಂದರೆ ಕಪ್ಪು ಅಥವಾ ಗೋಧಿ ಮೈಬಣ್ಣಕ್ಕಿಂತ ಬಿಳಿ ಮೈಬಣ್ಣ ಅಂದ ಮತ್ತು ಚಂದ ಎಂಬ ಪೂರ್ವಾಗ್ರಹ. ಆದ್ದರಿಂದಲೇ ಐಶ್ವರ್ಯಳಂತ ಐಶ್ವರ್ಯಳ ಬಿಳಿ ಮೈಬಣ್ಣವನ್ನು ಮತ್ತಷ್ಟು ಬೆಳ್ಳಗೆ ಮಾಡಿ ಪ್ರಕಟಿಸಿದ್ದಾರೆ ಎಂಬ ಆರೋಪ ಈಗ ಕೇಳಿಬರುತ್ತಿದೆ. ಐಶ್ವರ್ಯ ರೈ ಕೂಡ 'ಬಿಳಿ ಬಣ್ಣವೇ ಚೆನ್ನ' ಎಂಬ 'elle' ಧೋರಣೆಯನ್ನು ಟೀಕಿಸಿ "ಇದು ನಿಜವೇ ಆಗಿದ್ದರೆ ನಾನು ಆ ಪತ್ರಿಕೆಯ ವಿರುದ್ಧ ಮೊಕದ್ದಮೆಯನ್ನು ಹೂಡುತ್ತೇನೆ" ಎಂದು ಗುಡುಗಿದ್ದಾಳೆ.

ದೀಪಿಕಾ ಖರೀದಿಸಿದ 16 ಕೋಟಿ ಫ್ಲಾಟು!

ಕನ್ನಡ ನೆಲ ಕುಂದಾಪುರದ ಪಡುಕೋಣೆಯನ್ನು 'ಪಡ್ಕೋಣ್' ಎಂದು ತಿದ್ದಿದ, 'ನನ್ನ ಮೊದಲ ಚಿತ್ರ ಬಾಲಿವುಡ್ಡಿನದ್ದು, ಅದಕ್ಕೆ ಮುನ್ನ ಯಾವ ಭಾಷೆಯಲ್ಲೂ ನಟಿಸೇ ಇಲ್ಲ' ಎಂದು ಸುಳ್ಳು ಹೇಳಿದ, ಈಗ ಹೆಂಡೋದ್ಯಮಿ ವಿಜಯ್ ಮಲ್ಯನ ಪುತ್ರ ಸಿದ್ದಾರ್ಥನೊಂದಿಗೆ ಚಕ್ಕಂದವಾಡುತ್ತಿರುವ ಕನ್ನಡಿಗರ 'ಐಶ್ವರ್ಯ' ದೀಪಿಕಾ ಪಡುಕೋಣೆ ಈಗ ಮತ್ತೊಂದು ವಿಚಾರಕ್ಕೆ ಸುದ್ದಿಯಾಗಿದ್ದಾಳೆ. ಆದರೆ ಅದು ಯಾವುದೇ ವಿವಾದದ ಕಾರಣಕ್ಕಲ್ಲ!

ಮುಂಬೈನಲ್ಲಿ ಬಾಲಿವುಡ್‌ನ ಸ್ಟಾರ್ ನಟರೇ ವಾಸಿಸುವ ಬಾಂಧ್ರಾ ಮತ್ತು ಅಂಧೇರಿ ನಡುವೆ ದೀಪಿಕಾ ಪಡುಕೋಣೆ ಹೊಸದೊಂದು ಫ್ಲಾಟು ಖರೀದಿಸಿದ್ದಾಳೆ. ಪ್ರಭಾದೇವಿ ಪ್ರದೇಶದಲ್ಲಿರುವ ಮೂವತ್ತಮೂರು ಅಂತಸ್ತಿನ ಬ್ಯೂಮಂಡ್ ಟವರ್ಸ್ ಎಂಬ ಕಟ್ಟಡದಲ್ಲಿರುವ 26ನೇ ಮಹಡಿಯ ನಾಲ್ಕು ಬೆಡ್‌ರೂಮ್ ಮನೆಗೆ ಈಗ ದೀಪಿಕಾಳೇ ಒಡತಿ. ಈ ಮನೆ ದೀಪಿಕಾ ಮತ್ತು ಆಕೆಯ ತಂದೆ ಪ್ರಕಾಶ್ ಪಡುಕೋಣೆ ಹೆಸರಿನಲ್ಲಿ ಖರೀದಿಯಾಗಿದ್ದು, ಇದರ ಬೆಲೆ ಬರೋಬ್ಬರಿ ಹದಿನಾರು ಕೋಟಿ ರೂಪಾಯಿ ಮಾತ್ರ!

2,776 ಚದರ ಅಡಿಯಿರುವ ಈ ಫ್ಲಾಟ್‌ನ ರಿಜಿಸ್ಟ್ರೇಷನ್ ಫೀನೇ 79,82,600 ರೂಪಾಯಿಗಳು...

'ಪಿಜ್ಜಾಬರ್ಗರ್ ತಿನ್ನೋಕೆ, ಕಿಂಗ್‌ಫಿಷರ್ ಬಿಯರು ಕುಡಿಯೋಕೆ, ನಾಲ್ಕು ಬೆಡ್ ರೂಮ್ ಫ್ಲಾಟು ಐತೇ ತಾಯಾಗಿರೋಕೆ, ತುಂಡು ಬಟ್ಟೇನೆ ಸಾಕು ನನ್ನ ಮಾನ ಮುಚ್ಚೋಕೆ..' ಅಂತಾ ದೀಪಿಕಾ ಹಿಂದಿಯಲ್ಲಿ ಹಾಡುತ್ತಿದ್ದಾಳಂತೆ..!





ವಿದ್ಯಾ-ರಾಣಿ ಉಮ್ಮಚುಮ್ಮ





ಈ ಕಲರ್‌ಫುಲ್ ಸಿನಿಮಾ ಜಗತ್ತಿನಲ್ಲಿ ಯಾರು, ಯಾವಾಗ, ಯಾರೊಂದಿಗೆ ಎಂಥಾ 'ಸಂಬಂಧ' ಹೊಂದುತ್ತಾರೋ ಹೇಳುವುದು ಕಷ್ಟ. ಅದು ಮೇಲು, ಫೀಮೇಲು ಯಾವುದಾದರೂ ಸರಿ!

'ಕಾಫಿ ವಿತ್ ಕರಣ್' ಎಂಬ ಟಿವಿ ಕಾರ್ಯಕ್ರಮದಲ್ಲಿ ಬಾಲಿವುಡ್ ನಟರಾದ ರಣಬೀರ್ ಕಪೂರ್ ಮತ್ತು ಇಮ್ರಾನ್ ಖಾನ್ ಒಬ್ಬರನ್ನೊಬ್ಬರು ತಬ್ಬಿ ಚುಂಬಿಸಿಕೊಂಡಿದ್ದರು. ಒಂದು ಕಾಲಕ್ಕೆ ಪರಮವೈರಿಗಳಂತಾಡುತ್ತಿದ್ದ ವಿದ್ಯಾ ಬಾಲನ್ ಮತ್ತು ರಾಣಿ ಮುಖರ್ಜಿ ಕೂಡಾ ಈಗ ಇಂತಹದ್ದೇ ಲಿಪ್‌ಲಾಕ್ ಮಾಡಿದ ಸುದ್ದಿ ಸ್ಫೋಟಗೊಂಡಿದೆ.

ಮಾಡೆಲ್ ಜೆಸ್ಸಿಕಾ ಹತ್ಯೆಯ ಪ್ರಕರಣವನ್ನೇ ಆಧರಿಸಿ 'ನೊ ಒನ್ ಕಿಲ್ಡ್ ಜೆಸ್ಸಿಕಾ' ಎಂಬ ಚಿತ್ರವೊಂದು ಹಿಂದಿಯಲ್ಲಿ ನಿರ್ಮಾಣವಾಗಿದೆ. ಈ ಚಿತ್ರದಲ್ಲಿ ರಾಣಿ ಮುಖರ್ಜಿ ಸಿಕ್ಕಾಪಟ್ಟೆ ಬೋಲ್ಡ್‌ಆಗಿ ನಟಿಸಿದ್ದಾಳಂತೆ. ಹಸಿಬಿಸಿ ಸಂಭಾಷಣೆಯನ್ನೂ ಯಾವ ಮುಜುಗರವೂ ಇಲ್ಲದೆ ಪಟಪಟನೆ ಉದುರಿಸಿದ್ದಾಳಂತೆ. ಆ ಚಿತ್ರದಲ್ಲಿ ವಿದ್ಯಾ ಬಾಲನ್ ಎಂಬ ನಟಿಯೂ ಇದ್ದಾಳೆ. ಈ ಚಿತ್ರದ ಪ್ರಮೋಷನ್ ಈವೆಂಟೊಂದು ಇತ್ತೀಚೆಗೆ ಜರುಗಿತು. ಆ ಸಂದರ್ಭದಲ್ಲಿ ಒಬ್ಬರನ್ನೊಬ್ಬರು ಹಗ್ ಮಾಡಿಕೊಂಡ ವಿದ್ಯಾ ಬಾಲನ್ ಮತ್ತು ರಾಣಿ ಮುಖರ್ಜಿ ಯಾವುದೇ ಅಂಜಿಕೆಯಿಲ್ಲದೆ, ಪ್ರೇಮಿಗಳಂತೆ, ಸಂಗಾತಿಗಳಂತೆ ಬಾಯಿಗೆ ಬಾಯಿಟ್ಟು, ತುಟಿಗೆ ತುಟಿ ಒತ್ತಿ ಚುಂಬಿಸಿದರು. ಮೊದಲೇ ಇಂಥ ಚಮಕ್ಕು ಚಿತ್ರಗಳಿಗಾಗಿ ಕಣ್ಣರಳಿಸಿ ಕಾಯುವ ಕ್ಯಾಮೆರಾಗಳು ಪಟಪಟನೆ ಸದ್ದು ಮಾಡುತ್ತಾ ಆ ದೃಶ್ಯವನ್ನು ಸೆರೆ ಹಿಡಿದವು.

ಈಗ ಇಂಟರ್‌ನೆಟ್ಟಿನ ತುಂಬಾ ಇವೇ ಫೋಟೋಗಳು ಹಾರಾಡುತ್ತಿವೆ. ಆ ಮೂಲಕ ಚಿತ್ರಕ್ಕೆ ಇನ್ನಿಲ್ಲದಷ್ಟು ಪುಕ್ಕಟೆ ಪ್ರಚಾರ ಸಿಕ್ಕಿದೆ.

ಒಂದು ಚಿತ್ರದ ಪ್ರಚಾರಕ್ಕಾಗಿ ಹಿಂದಿ ಸಿನಿಮಾದ ನಟನಟಿಯರು ಏನನ್ನು ಮಾಡಲು ಸಿದ್ಧ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone : 2667...
Fax : 26604536, E-mail :lankesh70@rediffmail.com Printed ...